ಅಧ್ಯಕ್ಷರು.—ಇಲ್ಲಿಗೆ ಚರ್ಚೆ ಮುಕ್ತಾಯವಾಯಿತು.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಕಾನೂನು ಉಲ್ಲಂಘನೆ ಆಗಿರತಕ್ಕದ್ದು ಒಂದೇ ಒಂದು ಉದಾಹರಣೆ ಇದ್ದರೂ ಹೇಳಿ ಎಂದು ಮಾನ್ಯ ಸಚಿವರು ಹೇಳಿದರು. ಆದ್ದರಿಂದ ನಾನು ಹೇಳುತ್ತಿದ್ದೇನೆ.

ಶ್ರೀ ಜಿ. ನಾರಾಯಣಕುಮಾರ್.—ನಿಮ್ಮ ಪಕ್ಷದವರು ಸಭಾತ್ಯಾಗ ಮಾಡುತ್ತಿದ್ದಾರೆ, ಇನ್ನೇತಕ್ಕೆ ಮಾತನಾಡುತ್ತೀರಿ ?

ಶ್ರೀ ಕೆ ಹೆಚ್. ಪಾಟೀಲ್.—ಸಭಾತ್ಯಾಗ ಮಾಡಿದರೆ ಏನಾಯಿತು ? ಅದೆಲ್ಲಾ ನಿಮಗೆ ಏತಕ್ಕೆ ಬೇಕು? ನೀವು ಏನೂ ಕೇಳುವುದು ಬೇಡವೆಂದು ಮಾನ್ಯ ಅಧ್ಯಕ್ಷರು ಹೇಳುವುದಾದರೆ ಬೇರೆಯವರಂತೆ ನಾವು ಅವರ ಆಜ್ಞೆಯನ್ನು ಮೀರಿ ನಿಲ್ಲುವುದಿಲ್ಲ.

ಅಧ್ಯಕ್ಷರು.—ಪಾಟೀಲ್‌ರವರೇ ನೀವು ಹಿರಿಯ ಸದಸ್ಯರು. ಇಲ್ಲಿಗೆ ಚರ್ಚೆಯನ್ನು ಮುಕ್ತಾಯ ಮಾಡೋಣ.

ಶ್ರೀ ಕೆ. ಹೆಚ್. ಪಾಟೀಲ್.—ನೀವು ಏನಾದರೂ ಮಾಡಿಕೊಳ್ಳಿ ನಾವು ಸಭಾತ್ಯಾಗ ಮಾಡುತ್ತೇವೆ.

(ಕಾಂಗ್ರೆಸ್ ಪಕ್ಷದ ಎಲ್ಲ ಸದಸ್ಯರೂ ಸಭಾತ್ಯಾಗ ಮಾಡಿದರು.)

ಅಧ್ಯಕ್ಷರು.—ಬೊಮ್ಮಾಯಿಯವರೇ, ಬರಗಾಲದ ಬಗ್ಗೆ ಹೇಳಿಕೆಯನ್ನು ಮಾಡುತ್ತೇನೆ ಎಂದು ಹೇಳಿದ್ದಿರಲ್ಲ. ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಹಾಗೂ ಯೋಜನಾ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ. ಬರಗಾಲದ ಬಗ್ಗೆ ನಾನು ಒಂದು ಸಮಗ್ರವಾದ ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ್ದೆ. ಅದನ್ನು ಈಗ ಕೊಡುತ್ತೇನೆ.

ಮಂತ್ರಿಯವರಿಂದ ಹೇಳಿಕೆ

ಬರ ಪರಿಹಾರ ಕಾರ್ಯಕ್ರಮಗಳ ವಿವರಣೆ

೪-೩೦ ಪಿ. ಯಂ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಮತ್ತು ಕಾರ್ಮಿಕ ಸಚಿವರು).—

೧೯೮೫–೮೬ ರಲ್ಲಿ ಬರ ಪರಿಸ್ಥಿತಿ

೧. ೧೯೮೫–೮೬ನೇ ಸಾಲಿನಲ್ಲಿಯೂ ಕೂಡ ನಿರಂತರವಾಗಿ ನಾಲ್ಕನೇ ವರ್ಷವೂ ಹಿಂದೆಂದೂ ಕಾಣದಂತಹ ಭೀಕರ ಬರಗಾಲ ಪರಿಸ್ಥಿತಿಯು ಉದ್ಭವಿಸಿ, ರಾಜ್ಯದ ಗ್ರಾಮೀಣ ಪ್ರದೇಶದ ರೈತಾಪಿ ಸಮುದಾಯಕ್ಕೆ ಹಾಗೂ ಜಾನುವಾರು ಸಂಪತ್ತಿಗೆ ವರ್ಣಿಸಲಾಗದ ತೊಂದರೆ ಮತ್ತು ಕಷ್ಟನಷ್ಟ ಉಂಟಾಯಿತು. ಈ ಅವಧಿಯಲ್ಲಿ ಮುಂಗಾರು ಮತ್ತು ಹಿಂಗಾರು ಮಳೆಗಳೆರಡೂ ವಿಫಲವಾಗಿ ಭೀಕರ ಅಭಾವ ಪರಿಸ್ಥಿತಿ ಉದ್ಭವವಾಯಿತು. ೧೯ ಜಿಲ್ಲೆಗಳ ಪೈಕಿ ೧೮ ಜಿಲ್ಲೆಗಳಲ್ಲಿಯ ೧೪೮ ತಾಲ್ಲೂಕುಗಳಲ್ಲಿನ ೨೦,೦೦೦ ಕ್ಕಿಂತಲೂ ಹೆಚ್ಚು ಹಳ್ಳಿಗಳಲ್ಲಿ ಅಭಾವ ಪರಿಸ್ಥಿತಿ ಉದ್ಭವಿಸಿತು. ಇದಲ್ಲದೆ, ಬರಗಾಲ ಪೀಡಿತ ಪ್ರದೇಶವಲ್ಲದ ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳಲ್ಲಿಯೂ ಕೂಡ ಕುಡಿಯುವ ನೀರಿನ ತೀವ್ರ ಅಭಾವವಿತ್ತು. ಸುಮಾರು ೨೧೯.೬೯ ಲಕ್ಷ ಜನಸಂಖ್ಯೆಯು ತೊಂದರೆಗೀಡಾಯಿತು ಮತ್ತು ೧೧೯.೭೬ ಲಕ್ಷ ಜಾನುವಾರುಗಳು ಸಂಕಷ್ಟಕ್ಕೆ ಸಿಲುಕಿಕೊಂಡವು.

ಪರಿಹಾರ ಕಾರ್ಯಕ್ರಮ

೨. ಇಂತಹ ವಿಷಮ ಪರಿಸ್ಥಿತಿಯನ್ನು ರಾಜ್ಯ ಎದುರಿಸುತ್ತಿರುವಾಗ ರಾಜ್ಯ ಸರ್ಕಾರವು ಬಡ ಕೃಷಿ ಮತ್ತು ಕೃಷಿ ಕಾರ್ಮಿಕ ಕುಟುಂಬಗಳಿಗೆ ಇಂತಹ ಕಠಿಣ ದಿನಗಳಲ್ಲಿ ತಮ್ಮನ್ನು ತಾವು ಕಾಪಾಡಿಕೊಂಡು ಹೋಗುವಷ್ಟು ಶಕ್ತಿ ದೊರಕಿಸಿಕೊಡುವ ಸಲುವಾಗಿ ಸಾಕಷ್ಟು ಉದ್ಯೋಗಗಳನ್ನು ಕಲ್ಪಿಸಿ ಕೊಟ್ಟಿದ್ದು, ಅಲ್ಲದೆ ಸಾಕಷ್ಟು ಕುಡಿಯುವ ನೀರನ್ನು ಒದಗಿಸುವುದು ಆಹಾರ ಧಾನ್ಯಗಳ ಹಾಗೂ ಮೇವು

ಒದಗಿಸುವಂತಹ ಕಾರ್ಯಕ್ರಮಗಳನ್ನು ತ್ವರಿತವಾಗಿ ಕೈಗೊಂಡಿತು. ಈ ಪರಿಹಾರೋಪಾಯಗಳೇ ಅಲ್ಲದೆ ದೃಢ ನಿರ್ಧಾರ, ಶಾಂತಿ ಹಾಗೂ ಧೈರ್ಯದಿಂದ ಪರಿಸ್ಥಿತಿಯನ್ನು ಎದುರಿಸುವಲ್ಲಿ ರಾಜ್ಯದ ಇಡೀ ಆಡಳಿತ ವರ್ಗ ತಮ್ಮ ಹಿಂದೆ ಇದೆ ಎಂಬ ನಂಬಿಕೆಯನ್ನು ಜನತೆಯಲ್ಲಿ ಹುಟ್ಟಿಸಬೇಕಾಗಿತ್ತು. ಈ ದಿಸೆಯಲ್ಲಿ ರಾಜ್ಯ ಸರ್ಕಾರವು ಬಹುಮುಖ ಕಾರ್ಯಕ್ರಮಗಳನ್ನು ಅತಿ ತುರ್ತಾಗಿ ಪ್ರಾರಂಭಿಸಿತು. ತಕ್ಷಣದ ದುರವಸ್ಥೆಯನ್ನು ಮತ್ತು ಕಠಿಣ ಪರಿಸ್ಥಿತಿಯನ್ನು ಉಪಶಮನಗೊಳಿಸುವುದೇ ಅಲ್ಲದೆ, ಈ ಆತಂಕವನ್ನು ಅವಕಾಶವನ್ನಾಗಿಸಿಕೊಂಡು ಚಿರ ಆಸ್ತಿ ಮತ್ತು ಸಂಪನ್ಮೂಲಗಳನ್ನು ಸೃಷ್ಟಿಸುವುದು ಹಾಗೂ ರಾಜ್ಯದ ಸಂಪತ್ತಿನ ಪ್ರಯೋಜನ ಪಡೆಯುವುದಕ್ಕಾಗಿ ಈ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಯಿತು. ಈ ದಿಸೆಯಲ್ಲಿ ಬರ ಪರಿಹಾರ ಕಾರ್ಯಕ್ರಮಗಳ ಬಗ್ಗೆ ವಿವಿಧ ಕಾರ್ಯಕಮಗಳಡಿಯಲ್ಲಿ ಸಾಧಿಸಲಾದ ಪ್ರಗತಿಯ ಅಂಕಿಅಂಶಗಳನ್ನು ಈ ಹೇಳಿಕೆಗೆ ಲಗತ್ತಿಸಿದ ಅನುಬಂಧ (ಅ)ನಲ್ಲಿ ಒದಗಿಸಲಾಗಿದೆ.

೩. ಬರಗಾಲವು ಕರ್ನಾಟಕದಲ್ಲಿ ತಂದೊಡ್ಡಿರುವ ಸಮಸ್ಯೆಗಳು ರಾಷ್ಟ್ರದ ಬೇರೆ ಭಾಗಗಳ ಸಮಸ್ಯೆಗಳಿಗಿಂತ ವಿಭಿನ್ನ ಮತ್ತು ತೀವ್ರವಾದದು. ರಾಜ್ಯದ ಜನ ಜಾನುವಾರುಗಳಿಗೆ ಕುಡಿಯುವ ನೀರು, ದನಕರುಗಳಿಗೆ ಮೇವು ಹಾಗೂ ಗ್ರಾಮೀಣ ಜನರಿಗೆ ಉದ್ಯೋಗ ಈ ಸಮಸ್ಯೆಗಳೊಡನೆ ಹೋಲಿಸಿದರೆ ಆಹಾರ ಧಾನ್ಯದ ಸಮಸ್ಯೆ ಅಷ್ಟು ತೀವ್ರವೆನಿಸಲಿಲ್ಲ. ನಾಲ್ಕು ವರ್ಷಗಳಿಂದ ಸತತ ಮಳೆಯ ಅಭಾವದಿಂದ ಕೆರೆಗಳು ಒಣಗಿ ಹೋದವು. ಭೂ ಅಂತರ್ಜಲದ ಮಟ್ಟವೂ ತೀರ ಕೆಳಕ್ಕೆ ಇಳಿದಿತ್ತು. ಆದುದರಿಂದ ಬರ ಪರಿಹಾರ ಕಾರ್ಯಕ್ರಮಗಳಲ್ಲಿ ಪ್ರಮುಖ ವಿಷಯವೇನೆಂದರೆ, ಬರ ಪೀಡಿತ ಪ್ರದೇಶದಲ್ಲಿ ಕೆಲಸವಿಲ್ಲದೆ ಕೃಷಿ ಕಾರ್ಮಿಕರಿಗೆ ಉದ್ಯೋಗ ಒದಗಿಸುವುದು ಹಾಗೂ ಕುಡಿಯುವ ನೀರು ಮತ್ತು ದನಕರುಗಳಿಗೆ ಮೇವು ಒದಗಿಸುವುದೇ ಆಗಿತ್ತು.

ಕೊಳವೆ ಬಾವಿಗಳು

೪. ಕೊಳವೆ ಬಾವಿಗಳು ಮತ್ತಿತರ ಸಂಬಂಧಿಸಿದ ಕಾರ್ಯದಲ್ಲಿ ರಾಜ್ಯದ ಪ್ರಗತಿಯನ್ನು ಅತಿ ಉತ್ಸುಕತೆಯಿಂದ ಹೇಳಲೇಬೇಕಾಗಿದೆ. ಕೊಳವೆ ಬಾವಿಗಳನ್ನು ತೋಡಿಸುವಲ್ಲಿ ಆದ ಪ್ರಗತಿಯಲ್ಲಿ ಕಳೆದ ಮೂರೂವರೆ ವರ್ಷಗಳಲ್ಲಿ ಮಾಡಿರುವ ಸಾಧನೆಯು ಇಡೀ ರಾಷ್ಟ್ರದಲ್ಲಿಯೇ ಒಂದು ಉನ್ನತಾರ್ಹವಾದ ಪ್ರಗತಿಯಾಗಿದೆ ಎಂದು ತಿಳಿಸಲು ರಾಜ್ಯ ಸರ್ಕಾರವು ಬಹಳ ಹೆಮ್ಮೆ ಪಡುತ್ತದೆ. ಈ ಕಾರ್ಯಕ್ರಮವು ೧೯೭೨ ರಲ್ಲಿಯೇ ಆರಂಭವಾಗಿದ್ದು, ಅದೇ ರೀತಿ ರಾಜ್ಯದಲ್ಲಿ ೬೪ ಸಾವಿರಕ್ಕೂ ಹೆಚ್ಚು ಕೊಳವೆ ಬಾವಿಗಳನ್ನು ತೋಡಲಾಗಿದ್ದು, ಅದರಲ್ಲಿ ಅರ್ಧದಷ್ಟು ಬಾವಿಗಳು ೧೯೮೩ ರಿಂದೀಚೆಗೆ ತೋಡಲಾಗಿದೆ. ಅಭಾವ ಪರಿಹಾರ ಹಣದಲ್ಲಿ ೭೨೯೬ ಕೊಳವೆ ಬಾವಿಗಗನ್ನು ತೆಗೆಯಲಾಗಿದೆ.

ಮೇವು ಸರಬರಾಜು ಗೋಶಾಲೆ

೫. ಹಾಗೆಯೇ ರಾಜ್ಯ ಸರ್ಕಾರವು ಪ್ರಥಮಬಾರಿಗೆ ಸದ್ಯದ ಮೇವಿನ ಸಮಸ್ಯೆಯನ್ನು ಪರಿಹರಿಸಲು ಕೆಲವು ವಿಶೇಷ ಕಾರ್ಯಕ್ರಮವನ್ನು ಕೈಗೊಂಡಿತ್ತು. ಹೆಚು ಮೇವು ಲಭ್ಯವಿರುವ ಪ್ರದೇಶಗಳಿಂದ ಮತ್ತು ಹೊರ ರಾಜ್ಯಗಳಿಂದ ಮೇವು ಸಂಗ್ರಹಿಸುವುದು. ಹಾಗೂ ಮೇವು ಬೆಳೆಯುವ ರೈತರಿಗೆ ಪ್ರೋತ್ಸಾಹ ನೀಡಿ ಶೀಘ್ರ ಮೇವು ಬೆಳೆಗೆ ಅವಕಾಶ ಮಾಡಿ ಕೊಟ್ಟಿತ್ತು. ಇದರಿಂದ ಮೇವು ದಾಸ್ತಾನಿಗೆ ಅನುಕೂಲವಾಗಿದೆ. ರಾಜ್ಯದಲ್ಲಿ ಪ್ರಥಮ ಬಾರಿಗೆ ೧೯೮೬ರ ಮಾರ್ಚಿಯಲ್ಲಿ ಅಂಚರೆ ಬೇಸಿಗೆಯಲ್ಲಿ ವಿಶೇಷ ಮೇವು ಬೆಳೆ ಕೈಗೊಳ್ಳಲಾಯಿತು ಈ ಪ್ರಯತ್ನದಿಂದ ೪-೫ ಲಕ್ಷ ಟನ್ನುಗಳಷ್ಟು ಹಸಿರು ಮೇವು ಲಭ್ಯವಾಗಿದೆ. ಇದನ್ನು ಈ ವರ್ಷದ ಬೇಸಿಗೆ ತಿಂಗಳುಗಳಲ್ಲಿ ಉಪಯೋಗ ಮಾಡಲಾಯಿತು ಮತ್ತು ಮುಂದಿನ ತಿಂಗಳುಗಳಿಗೆ ದಾಸ್ತಾನು ಮಾಡಲಾಯಿತು. ಈ ದಾಸ್ತಾನನ್ನು ರಾಜ್ಯದಾದ್ಯಂತ ೩೧೬ ಮೇವು ಬ್ಯಾಂಕುಗಳಲ್ಲಿ ಕಾದಿರಿಸಲಾಗಿದೆ. ಇದಲ್ಲದೇ ಬರಪೀಡಿತ ಪ್ರದೇಶದ ಜಾನುವಾರುಗಳಿಗೆ ಮೇವು ನೀರು, ನೆರಳು ಹಾಗೂ ವೈದ್ಯಕೀಯ ಸೌಲಭ್ಯ ಒದಗಿಸುವುದಕ್ಕಾಗಿ, ಗೋಶಾಲೆಗಳ ವ್ಯವಸ್ಥೆ ಮಾಡುವಲ್ಲಿಯೂ ನಮ್ಮ ರಾಜ್ಯವು ಬೇರೆ ರಾಜ್ಯಗಳಿಗೆ ಮಾರ್ಗದರ್ಶಿಯಾಯಿತು. ರಾಜ್ಯದಾದ್ಯಂತ ವಿವಿಧ ಕಡೆಗಳಲ್ಲಿ ತೆರೆದ ೮೭ ಗೋಶಾಲೆಗಳಲ್ಲಿ ೪೦ ಸಾವಿರಕ್ಕೂ ಹೆಚ್ಚು ಜಾನುವಾರುಗಳಿಗೆ ರಕ್ಷಣೆ ನೀಡಲಾಯಿತು.

ಆಹಾರ ಧಾನ್ಯ ಸರಬರಾಜು

೬. ಬರಪೀಡಿತ ಪ್ರದೇಶದ ಜನತೆಗೆ ಸುಲಭ ದರದಲ್ಲಿ ಆಹಾರಧಾನ್ಯ ಪೂರೈಸುವ ದಿಸೆಯಲ್ಲಿ ರಾಜ್ಯದ ಸಾಧನೆ ಗಣನೀಯವಾಗಿದೆ. ಇಡೀ ರಾಜ್ಯದಲ್ಲಿ ಸಾರ್ವಜನಿಕ ವಿತರಣಾವ್ಯವಸ್ಥೆ ಇದ್ದು, ೭೫ ಸಾವಿರ ಪಡಿತರ ಚೀಟಿಗಳನ್ನು ನೀಡಲಾಗಿದೆ. ೧೯೭೫-೭೬ ರಲ್ಲಿ ಆರಂಭವಾದ ೩೦೦ ಅಧಿಕ ನ್ಯಾಯ ಬೆಲೆ ಅಂಗಡಿಗಳಲ್ಲಿ ಹೆಚ್ಚಿನವು ಬರಪೀಡಿತ ಪ್ರದೇಶದಲ್ಲಿವೆ. ಪ್ರಸ್ತುತ, ರಾಜ್ಯದಲ್ಲಿ ಸುಮಾರು ೧೬ ಸಾವಿರ ನ್ಯಾಯಬೆಲೆ ಅಂಗಡಿಗಳಿವೆ. ೧೯೭೫ರ ನವೆಂಬರ್‌ನಲ್ಲಿ ಆರಂಭವಾದ ರಿಯಾಯಿತಿ ದರದಲ್ಲಿ ಆಹಾರ ಧಾನ್ಯ ವಿತರಣೆ ಕಾರ್ಯಕ್ರಮದಿಂದ ಪ್ರತಿ ತಿಂಗಳು ೫೦ ಸಾವಿರ ಟನ್ ಅಕ್ಕಿ ಹಾಗೂ ೧೨ ಸಾವಿರ ಟನ್ ಗೋಧಿ ವಿತರಣೆ ಮಾಡಲಾಯಿತು. ಬರಪೀಡಿತ ಪ್ರದೇಶದ ಕೂಲಿಗಾರರಿಗೆ ಕೂಲಿಯ ಅರ್ಧದಷ್ಟು ಭಾಗವನ್ನು ಆಹಾರಧಾನ್ಯಗಳ ರೂಪದಲ್ಲಿ ನೀಡಲಾಯಿತು. ಇದು ಬಡ ಕೂಲಿಗಾರರ ಜೀವನ ನಿರ್ವಹಣೆಗೆ ಅತ್ಯಂತ ಸಹಾಯಕವಾಗಿದೆ.

೭. ಶಾಸಕರೂ ಸೇರಿದಂತೆ ಜನತಾ ಪ್ರತಿನಿಧಿಗಳ ನಿಕಟ ಸಹಕಾರದಲ್ಲಿ ಮತ್ತು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಭಾವ ಪರಿಹಾರ ಸಮಿತಿಗಳೊಡನೆ ಸಮಾಲೋಚನೆ ನಡೆಸಿ, ಯೋಜನೆ ಮತ್ತು ಬರಪರಿಹಾರ ಕಾರ್ಯಕ್ರಮಗಳ ನಿರ್ವಹಣೆಯನ್ನು ರಾಜ್ಯ ಸರ್ಕಾರವು ಮಾಡಿತು. ಅಲ್ಲದೆ ಪರಿಹಾರ ಕಾಮಗಾರಿಗಳನ್ನು ಪರಿಣಾಮಕಾರಿಯಾಗಿ ಅವಲೋಕಿಸಲು ಮತ್ತು ಮಾರ್ಗದರ್ಶನ ನೀಡಲು ಸಾಕಷ್ಟು ಏರ್ಪಾಡು ಒದಗಿಸಿಕೊಡಲಾಯಿತು.

೮. ಇದಲ್ಲದೆ ಅಭಾವ ಪೀಡಿತ ಹಳ್ಳಿಗಳಲ್ಲಿ ಭೂ ಕಂದಾಯದ ಮನ್ನಾ ಮತ್ತು ಮುಂದೂಡ ಬೇಕೆಂದೂ ಕೂಡ ಸರ್ಕಾರ ಪುನಃ ಆದೇಶಿಸಿತು. ಇವುಗಳ ವಿವರಗಳನ್ನು ಅನುಬಂಧ 'ಅ' ದಲ್ಲಿ ಕೊಡಲಾಗಿದೆ.

೯. ಬರಗಾಲ ಪರಿಹಾರದಲ್ಲಿ ಸ್ಥಿರಾಸ್ತಿಗಳನ್ನು ನಿರ್ಮಿಸುವುದಕ್ಕೆ ಹೆಚ್ಚಿನ ಒತ್ತಾಸೆ ನೀಡ ಲಾಯಿತು. ಹೀಗೆ ನಿರ್ಮಿಸಿದ ಆಸ್ತಿ ವಿವರಗಳನ್ನೂ ಇದರಲ್ಲಿ ಲಗತ್ತಿಸಿದ ಅನುಬಂಧ 'ಅ'ದಲ್ಲಿ ಕೊಡಲಾಗಿದೆ.

ಪರಿಹಾರ ಧನ ವಿನಿಯೋಗ

೧೦. ರಾಜ್ಯದಲ್ಲಿ ಆರ್ಥಿಕ ಸಂಕಷ್ಟವಿದ್ದರೂ ಕೂಡಾ, ಬಾಧಿತ ಜನತೆಗೆ ಪರಿಹಾರ ಒದಗಿಸುವ ದಿಸೆಯಲ್ಲಿ ಆರ್ಥಿಕ ಅಡಚಣೆಗಳನ್ನು ಮೆಟ್ಟಿ ರಾಜ್ಯದಲ್ಲಿ ಇತಿಹಾಸದಲ್ಲಿ ಹಿಂದೆಂದೂ ಕೈಗೊಳ್ಳಲಾಗದಿದ್ದ ಗಾತ್ರದಲ್ಲಿ ಪರಿಹಾರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬೃಹತ್ ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಿ ಜನತೆ ಮತ್ತು ಜಾನುವಾರುಗಳಿಗೆ ಸಮಯಕ್ಕೆ ಸರಿಯಾಗಿ ಪರಿಹಾರ ಒದಗಿಸಿಕೊಟ್ಟ ಹೆಮ್ಮೆ ಸರ್ಕಾರಕ್ಕಿದೆ.

೧೧. ೧೯೭೫-೭೬ರ ಅಭಾವ ಪರಿಹಾರ ಕಾರ್ಯಕ್ರಮಗಳ ಸಲುವಾಗಿ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರವು ೬೨.೪೬ ಕೋಟಿ ರೂಪಾಯಿಗಳ ಗರಿಷ್ಟ ಮಿತಿಯ ಸೀಮಿತ ಧನ ಸಹಾಯವನ್ನು ಒದಗಿಸಿಕೊಟ್ಟಿತು. ಈ ಸೀಮಿತ ಕೇಂದ್ರ ಧನ ಸಹಾಯಕ್ಕೆ ಎದುರಾಗಿ ರಾಜ್ಯ ಸರ್ಕಾರವು ೭೬,೧೪ ಕೋಟಿ ರೂ.ಗಳ ಹಣವನ್ನು ನಿಗದಿತ ಶೀರ್ಷಿಕೆಗಳ ಕೆಳಗೆ ಖರ್ಚು ಮಾಡಿತು. ರಾಜ್ಯದ ಬರಪೀಡಿತ ಪ್ರದೇಶಗಳಲ್ಲಿ ರಾಜ್ಯ ಸರ್ಕಾರವು ಯೋಜನಾ ಕಾರ್ಯಕ್ರಮಗಳು ಸೇರಿದಂತೆ ಪರಿಹಾರ ಕಾರ್ಯಗಳಿಗಾಗಿ ಖರ್ಚು ಮಾಡಿದ ಹಣ ೨೧೨.೧೫ ಕೋಟಿ ರೂಪಾಯಿಗಳಾಗಿದೆ.

೧೨. ಬರಗಾಲ ಪರಿಸ್ಥಿತಿಯು ೧೯೭೬ರ ಮಾರ್ಚಿ ನಂತರವೂ ಮುಂದುವರಿದ ಕಾರಣದಿಂದ ಸರ್ಕಾರವು ಪರಿಹಾರ ಕಾರ್ಯಕ್ರಮಗಳನ್ನು ೧೯೭೭ರ ಮಳೆಗಾಲದ ಆಗಮನದವರೆವಿಗೂ, ಅಂದರೆ ೧೯೭೬ರ ಜೂನ್ ಅಂತ್ಯದವರೆಗೆ ಮುಂದುವರಿಸಿಕೊಂಡು ಹೋಗುವುದಕ್ಕೆ ಬದ್ಧವಾಗಿದ್ದು ಪರಿಹಾರ ಕಾರ್ಯವನ್ನು ಜೂನ್ ಅಂತ್ಯದವರೆಗೆ ಮುಂದುವರಿಸಿಕೊಂಡು ಬಂದಿದೆ. ಈ ಅವಧಿಯಲ್ಲಿ ಬರ ಪರಿಹಾರ ಕಾರ್ಯಕ್ರಮಗಳಿಗಾಗಿಯೇ ಒಟ್ಟು ೫೦.೮೫ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಯಿತು. ಇದಕ್ಕಾಗಿ ಇದುವರೆಗೆ ರಾಜ್ಯ ಸರ್ಕಾರವು ಜೂನ್ ೭೬ರ ಅಂತ್ಯದ ವೇಳೆಗೆ

೪೩.೫೬ ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡಿದೆ. ಇದಲ್ಲದೆ ಕೊಳವೆ ಬಾವಿಗಳನ್ನು ತೋಡುವಸಲುವಾಗಿ ಸೈಕ್ಲೋನ್ ರಿಗ್ ಹೈಡ್ರೋಲಿಕ್ ರಿಗ್ ಮತ್ತು ಇತರೆ ರಿಗ್‌ಗಳನ್ನು ಕೊಳ್ಳಲು ೭.೫೦ ಕೋಟಿ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಲಾಯಿತು. ಈ ಖರ್ಚನ್ನು ಭರಿಸಲು ಕೇಂದ್ರ ಸರ್ಕಾರವು ಕಾಲದ ಮಿತಿಯನ್ನು ೩೦-೯-೮೬ರ ವರೆಗೆ ವಿಸ್ತರಿಸಿದೆ. ಇದಲ್ಲದೆ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತಿಸಲು ಕೇಂದ್ರಸರ್ಕಾರವು ೧೪೬.೧೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದು ಈ ಬಾಬಿನಲ್ಲಿ ಖರ್ಚು ಮಾಡಲೂ ಕೂಡ ಕಾಲದ ಮಿತಿಯನ್ನು ೩೦-೯-೮೬ರವರೆಗೆ ಕೇಂದ್ರ ಸರ್ಕಾರವು ವಿಸ್ತರಿಸಿದೆ. ಹೀಗಾಗಿ ಒಟ್ಟು ವೆಚ್ಚವು ೫೦.೦೦ ಕೋಟಿ ರೂಪಾಯಿಗಳನ್ನು ಮೀರುವುದರಲ್ಲಿ ಸಂದೇಹವಿಲ್ಲ.

೧೩. ಯೋಜನಾ ಕಾರ್ಯಕ್ರಮಗಳನ್ನೂ ಒಳಗೊಂಡಂತೆ ರಾಜ್ಯ ಸರ್ಕಾರವು ೧೯೮೬-೮೭ರ ಮೊದಲ ಮೂರು ತಿಂಗಳಲ್ಲಿ (ಅಂದರೆ ೧-೪-೮೬ ರಿಂದ ೩೦-೬-೮೬ರವರೆಗೆ) ಒಟ್ಟಾರೆ ೬೬.೪೪ ಕೋಟಿ ರೂಪಾಯಿಗಳನ್ನು ಬರಗಾಲ ಪರಿಹಾರಕ್ಕಾಗಿ ವೆಚ್ಚ ಮಾಡಿದೆ. ಈ ವಿಸ್ತೃತ್ ಬರಗಾಲದ ಅವಧಿಯಲ್ಲಿ ಅಂದರೆ ೧-೪-೮೫ರಿಂದ ೩೦-೬-೮೬ರವರೆಗೆ ರಾಜ್ಯ ಸರ್ಕಾರವು ಯೋಜನಾ ಕಾರ್ಯಕ್ರಮಗಳು ಸೇರಿದಂತೆ ಒಟ್ಟು ೭೭೮.೫೯ ಕೋಟಿ ರೂಪಾಯಿಗಳನ್ನು ಖರ್ಚುಮಾಡಿತು. ಅನುಬಂಧ 'ಇ'ನಲ್ಲಿ ೧-೪-೮೫ ರಿಂದ ೩೦-೬-೮೬ರವರೆಗೆ ಬರ ಪರಿಹಾರಕ್ಕಾಗಿ ಭಾರತ ಸರ್ಕಾರವು ಒದಗಿಸಿದ ಧನ ಸಹಾಯ ಮತ್ತು ರಾಜ್ಯ ಸರ್ಕಾರವು ಖರ್ಚು ಮಾಡಿದ ಒಟ್ಟು ಹಣದ ವಿವರಗಳನ್ನು ಒದಗಿಸಿಕೊಡಲಾಗಿದೆ ಇದರ ಜೊತೆಗೆ ಬರಗಾಲ ಪರಿಸ್ಥಿತಿ ಮತ್ತು ಪರಿಹಾರ ಕಾರ್ಯಕ್ರಮಗಳಡಿಯಲ್ಲಿ ಆದ ಪ್ರಗತಿಯ ಅಂಕಿ ಅಂಶಗಳ ಜಿಲ್ಲಾವಾರು ಮಾಹಿತಿಯನ್ನು (೧-೪-೮೫ರಿಂದ ೩೦-೬-೮೬ರ ವರೆಗೆ ಸಂಬಂಧಪಟ್ಟಂತೆ ಒದಗಿಸುವ ಪುಸ್ತಕವನ್ನು ಕೂಡ ಮಾನ್ಯ ಸದಸ್ಯರ ಮಾಹಿತಿಗಾಗಿ ಒದಗಿಸಿಕೊಡಲಾಗಿದೆ.

೧೯೮೬-೮೭ರ ಮುಂಗಾರು ಪರಿಸ್ಥಿತಿ

೧೪. ಈ ವರ್ಷದಲ್ಲಾದರೂ ಮಳೆ ಪರಿಸ್ಥಿತಿಯು ಉತ್ತಮವಾಗಬಹುದೆಂದೂ ಮತ್ತೆ ಬರ ಪರಿಸ್ಥಿತಿಯು ಸತತವಾಗಿ ಐದನೇ ವರ್ಷವೂ ಕೂಡ ಉದ್ಭವಿಸಲಿಕ್ಕಿಲ್ಲವೆಂದೂ ರಾಜ್ಯ ಸರ್ಕಾರವು ಆಶಾಭಾವನೆಯನ್ನು ಇರಿಸಿಕೊಂಡಿತ್ತು. ಅಂತೆಯೇ, ಈ ವರ್ಷದ ಮೇ ತಿಂಗಳ ಅಂತ್ಯದಲ್ಲಿ ಬಂದ ಮಾನ್ಸೂನ್ ಪೂರ್ವ ಮಳೆಯು ಒಟ್ಟಾರೆ ಚೆನ್ನಾಗಿ ಬಿದ್ದಿತು. ಆದರೆ, ಜುಲೈ ತಿಂಗಳಲ್ಲಿ ರಾಜ್ಯದ ಬಹುತೇಕ ಕಡೆ ಮಳೆಯು ಭಾರಿ ವಿಫಲತೆಯಿಂದಾಗಿ, ಪರಿಸ್ಥಿತಿಯು ರಾಜ್ಯ ಸರ್ಕಾರಕ್ಕೆ ಅತ್ಯಂತ ವ್ಯಾಕುಲತೆಯನ್ನುಂಟು ಮಾಡಿತು. ಆದರೆ, ಮತ್ತೆ ಆಗಸ್ಟ್ ತಿಂಗಳ ಮೊದಲೆರಡು ವಾರಗಳಲ್ಲಿ ಆದ ವ್ಯಾಪಕ ಮಳೆಯಿಂದಾಗಿ ಅತ್ಯಂತ ಕಳವಳಕಾರಿಯಾಗಿದ್ದ ಪರಿಸ್ಥಿತಿಯು ನಮ್ಮ ಆಶೆಯನ್ನು ಮತ್ತೆ ಚಿಗುರಿಸಿತು. ಈ ಅವಧಿಯಲ್ಲಿ ಮಳೆಯು ಉತ್ತರದ ಜಿಲ್ಲೆಗಳಲ್ಲಿ (ಅದರಲ್ಲೂ ಬರಗಾಲಕ್ಕೆ ಹೆಸರಾದ ಗುಲ್ಬರ್ಗಾ, ಬೀದರ್, ರಾಯಚೂರು, ಬಳ್ಳಾರಿ, ವಿಜಾಪುರ, ಧಾರವಾಡ, ಬೆಳಗಾವಿ). ವ್ಯಾಪಕವಾಗಿದ್ದುದು ಒಂದು ವೈಶಿಷ್ಟ್ಯವಾಗಿದೆ. ಅಂತೆಯೇ, ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳಾದ ಕೊಡಗು. ಚಿಕ್ಕಮಗಳೂರು, ಶಿವಮೊಗ್ಗ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಳೆಯು ವ್ಯಾಪಕವಾಗಿ ಬಿದ್ದಿದ್ದು, ಕೆಲವೆಡೆ ನೆರೆಯುಂಟಾಗುವ ಪರಿಸ್ಥಿತಿ ಇತ್ತು. ಆದರೆ ರಾಜ್ಯದ ಕೆಲವು ಪ್ರದೇಶಗಳಲ್ಲಿ ಮಳೆ ಅಷ್ಟು ಸಮರ್ಪಕವಾಗಲಿಲ್ಲ. ಒಟ್ಟಾರೆ, ಜೂನ್ ೧೯೮೬ರಿಂದ ೨೧ನೇ ಆಗಸ್ಟ್ ೧೯೮೬ರ ವರೆಗೆ ಬಿದ್ದ ಮಳೆಯ ಮಾಹಿತಿಯ ಪ್ರಕಾರ, ಎಲ್ಲಾ ೧೭೫ ತಾಲ್ಲೂಕುಗಳಲ್ಲಿ ಮಳೆಯಾಗಿದ್ದು, ಅವುಗಳಲ್ಲಿ ೭೦ ತಾಲ್ಲೂಕುಗಳಲ್ಲಿ ಕಡಿಮೆ ಮಳೆಯಾಗಿದೆ. ಈ ೭೦ ತಾಲ್ಲೂಕುಗಳ ಪೈಕಿ, ೮ ತಾಲ್ಲೂಕುಗಳಲ್ಲಿ ಅತಿ ಕಡಿಮೆ ಮಳೆ (ಅಂದರೆ ಪ್ರತಿಶತ ೨೫ಕ್ಕಿಂತ ಕಡಿಮೆ) ಮತ್ತು ೨೯ ತಾಲ್ಲೂಕುಗಳಲ್ಲಿ ಕಡಿಮೆ (ಪ್ರತಿಶತ ೫೦ಕ್ಕಿಂತ ಕಡಿಮೆ) ಮತ್ತು ೩೩ ತಾಲ್ಲೂಕುಗಳಲ್ಲಿ ಸಾಧಾರಣವಾಗಿ ಕಡಿಮೆ ಮಳೆಯಾಗಿದೆ.

೧೫. ಬೆಳೆ ಪರಿಸ್ಥಿತಿಯನ್ನು ವಿಮರ್ಶೆ ಮಾಡಿದಾಗ ಕಂಡುಬಂದ ಅಂಶವೇನೆಂದರೆ, ಜುಲೈ ಅಂತ್ಯದವರೆಗೆ ೫೫.೧ರಷ್ಟು ಭೂ ಪ್ರದೇಶದಲ್ಲೂ ಮತ್ತು ಆಗಸ್ಟ್ ಎರಡನೇ ವಾರದ ಕೊನೆಯವರೆಗೆ ಶೇಕಡ ೭೭ರಷ್ಟು ಭೂ ಪ್ರದೇಶದಲ್ಲೂ ಬಿತ್ತನೆ ಆಗಿತ್ತು. ಆಗಸ್ಟ್ ಒಂದರಿಂದಾಚೆ ಮಳೆಯು ವ್ಯಾಪಕವಾಗಿ ಸುರಿದುದರಿಂದ ಹಲವೆಡೆ ಒಣಗಲು ಪ್ರಾರಂಭಿಸಿದ್ದ ಬೆಳೆಗಳು ಚೇತರಿಸಿಕೊಳ್ಳಲೂ ಮತ್ತು ಕೆಲವೆಡೆ

ಸ್ಥಗಿತಗೊಂಡಿದ್ದ ಒಣ ಪ್ರದೇಶದ ಬಿತ್ತನೆ ಕಾರ್ಯ ಹಾಗೂ ಇತರೆ ವ್ಯವಸಾಯ ಕಾರ್ಯಕ್ರಮಗಳು ಮುಂದುವರಿಯಲು ತುಂಬಾ ಅನುಕೂಲವಾಯಿತು. ಆದರೆ ಆಗಸ್ಟ್ ೧೩ನೇ ದಿನಾಂಕದಿಂದ ಮುಂದಕ್ಕೆ ರಾಜ್ಯದಲ್ಲಿ ಮುಂಗಾರು ಕ್ಷೀಣಿಸಿದ್ದು, ಈ ಮಳೆ ಮತ್ತೆ ಇಲ್ಲದಂತಾಗಿದೆ. ಹೀಗಾಗಿ ಮುಂಗಾರಿನಲ್ಲಿ ಆಗಾಗ್ಗೆ ಹಂಗಾಮಿಯಾಗಿ ಸುಧಾರಿಸಿದ ಪರಿಸ್ಥಿತಿಯು ವಿಷಮಗೊಳ್ಳುತ್ತಿದ್ದು, ಸದ್ಯದಲ್ಲೇ ಮತ್ತೆ ಮಳೆ ಬಾರದೆ ಹೋದರೆ ಮುಂಗಾರು ಬೆಳೆಯ ಪರಿಸ್ಥಿತಿ ಹದಗೆಡುವ ಚಿಹ್ನೆಗಳು ಮತ್ತೆ ತೋರುತ್ತಿವೆ. ವಿಶೇಷವಾಗಿ ಕೋಲಾರ, ತುಮಕೂರು, ಬೆಂಗಳೂರು, ಮೈಸೂರು, ಗುಲ್ಬರ್ಗಾ, ಬೀದರ್, ಧಾರವಾಡ, ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಅಲ್ಲಲ್ಲಿ ಮಳೆಯಾಗಿದೆ; ಮತ್ತು ಆಗಿದ್ದರೂ ಬೆಳೆಗಳಿಗೆ ಸಾಕಾಗುವಷ್ಟು ಆಗದ ಪರಿಸ್ಥಿತಿ ಉಂಟಾಗುತ್ತಿರುವುದು ತಿಳಿದುಬಂದಿದೆ.

೧೬. ಜುಲೈ ತಿಂಗಳಲ್ಲಿ ನಾನೇ ಸ್ವತಃ ಎಲ್ಲಾ ವಿಭಾಗ ಮಟ್ಟದಲ್ಲಿ ಅಧಿಕಾರಿಗಳ ಸಭೆಯನ್ನು ನಡೆಸಿ ಮಳೆ ಮತ್ತು ಬೆಳೆ ಪರಿಸ್ಥಿತಿಯನ್ನು ವಿಮರ್ಶಿಸಿದ್ದೇನೆ. ಇದಾದ ನಂತರ ಆಗಸ್ಟ್ ನಾಲ್ಕರಂದು ಎಲ್ಲಾ ಜಿಲ್ಲಾಧಿಕಾರಿಗಳ ಒಂದು ಸಮಾವೇಶವನ್ನು ಕರೆದಿದ್ದು ಅಲ್ಲಿಯೂ ಕೂಡ ಈ ಪರಿಸ್ಥಿತಿಯ ಜಿಲ್ಲಾವಾರು ಸಮೀಕ್ಷೆಯನ್ನು ಕೂಲಂಕುಷವಾಗಿ ಮಾಡಲಾಯಿತು. ಆಗ ಜಿಲ್ಲಾಧಿಕಾರಿಗಳು ತಿಳಿಸಿದಂತೆ ಜುಲೈ ತಿಂಗಳ ಅಂತ್ಯದ ಭಾಗದಲ್ಲಿ ಹಾಗೂ ಆಗಸ್ಟ್ ತಿಂಗಳ ಮೊದಲು ಕೆಲವು ಜಿಲ್ಲೆಗಳಲ್ಲಿ ಹೆಚ್ಚು ವ್ಯಾಪಕವಾಗಿ ಮಳೆ ಬಿದ್ದಿದ್ದು ಪರಿಸ್ಥಿತಿಯು ಇನ್ನೂ ಉತ್ತಮಗೊಳ್ಳುತ್ತಿರುವುದರಿಂದ ಜಿಲ್ಲಾಧಿಕಾರಿಗಳಿಗೆ ಆಗಸ್ಟ್ ೧೫ರ ವರೆಗೆ ಪರಿಸ್ಥಿತಿಯನ್ನು ಸಮೀಕ್ಷಿಸಿ ವರದಿಯನ್ನು ಕಳುಹಿಸಲು ತಿಳಿಸಲಾಗಿತ್ತು. ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳು ಕೂಡ ಕಳೆದ ಕೆಲವು ದಿನಗಳ ಹಿಂದೆ ಗುಲ್ಬರ್ಗಾ, ಬೀದರ್ ಬಳ್ಳಾರಿ. ಕೋಲಾರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಶಾಸಕರು, ಅಧಿಕಾರಿಗಳು ಸೇರಿದಂತೆ ಎಲ್ಲರೊಂದಿಗೆ ಸಮೀಕ್ಷೆ ಮಾಡಿ ಅಧಿಕಾರಿಗಳಿಗೆ ಈ ಬಗ್ಗೆ ಸೂಕ್ತ ನಿರ್ದೇಶನವನ್ನು ನೀಡಿದ್ದೇವೆ.

೧೭. ರಾಜ್ಯ ಸರ್ಕಾರವು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟು, ಅವಶ್ಯಕವಿದ್ದ ಕಡೆಗಳಲ್ಲೆಲ್ಲಾ ಕುಡಿಯುವ ನೀರು ಮತ್ತು ಮೇವು ಸರಬರಾಜು ಕಾರ್ಯಕ್ರಮ ಮತ್ತು ಗೋಶಾಲೆಗಳನ್ನು ಮುಂದುವರಿಸಿಕೊಂಡು ಹೋಗುವಂತೆ ಸೂಚನೆ ನೀಡಿದೆ. ಅಲ್ಲದೆ, ಕೃಷಿ ಕಾರ್ಮಿಕರಿಗಾಗಿ ಮತ್ತು ರೈತರಿಗೆ ಉದ್ಯೋಗ ಒದಗಿಸಿಕೊಡಲು ಎನ್.ಆರ್.ಇ.ಪಿ. ಆರ್.ಎಲ್.ಇ.ಜಿ.ಪಿ. ಡಿ.ಪಿ.ಎ.ಪಿ ಮತ್ತು ಇತರ ಯೋಜನಾ ಕಾರ್ಯಕ್ರಮಗಳಡಿ ಕಾಮಗಾರಿಗಳನ್ನು ಕಾರ್ಯಗತ ಮಾಡುವುದಕ್ಕೆ ಕೂಡಾ ಸಾಕಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ. ಇವುಗಳ ವಿವರ ಈ ಕೆಳಗಿನಂತಿದೆ.

ಅ. ಸಂ.	ಕಾರ್ಯಕ್ರಮ	೧೯೮೬–೮೭ರಲ್ಲಿ ಜುಲೈ ಅಂತ್ಯದವರೆಗೆ	
		ಬಿಡುಗಡೆ ಮಾಡಿದ ಹಣ	ಖರ್ಚಾದ ಹಣ
		(ಲಕ್ಷ ರೂಪಾಯಿಗಳಲ್ಲಿ)	
೧	ಎನ್.ಆರ್.ಇ.ಪಿ.	೧೦೩೪.೬೭	೬೩೦.೪೬
೨	ಆರ್.ಎಲ್.ಇ.ಜಿ.ಪಿ.	೮೦೫.೦೦	೬೨೭.೫೦
೩	ಡಿ.ಪಿ.ಎ.ಪಿ. (ರಾಜ್ಯ ಮತ್ತು ಕೇಂದ್ರ)	೩೩೬.೨೫	೧೩೫.೨೭
	ಒಟ್ಟು	೨೧೮೫.೯೨	೧೩೯೩.೨೩

೧೮. ಇದಲ್ಲದೆ ಜೂನ್ ೧೯೮೬ರ ಅಂತ್ಯದವರೆಗೆ ಅಭಾವ ಪರಿಹಾರ ಶೀರ್ಷಿಕೆಯಡಿಯಲ್ಲಿ ಕೈಗೊಂಡ ಕಾಮಗಾರಿಗಳಿಗೆ ಕೊಡಬೇಕಾಗಿದ್ದ ಬಾಕಿ ಮಜೂರಿ ಹಣವನ್ನು ಪಾವತಿ ಮಾಡಲು ೧೦೦.೦೦ ಲಕ್ಷ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಿದೆ. ಮತ್ತು ಪೂರ್ತಿಯಾಗದೆ ಉಳಿದ ಕಾಮಗಾರಿಗಳನ್ನೆಲ್ಲಾ ಆಯಾ ಇಲಾಖೆಗಳ ೧೯೮೬–೮೭ನೇ ಸಾಲಿನ ಯೋಜನಾ ಸ್ಕೀಮುಗಳಿಗೆ ಒದಗಿಸಿದ ಹಣದಲ್ಲಿ ಪೂರ್ತಿ ಮಾಡಲು ಕೂಡ ಆದೇಶ ಕೊಟ್ಟಿದೆ.

೧೯. ಮಳೆ ಮತ್ತು ಬೆಳೆ ಪರಿಸ್ಥಿತಿ ಬಗ್ಗೆ ಸರ್ಕಾರವು ಸತತವಾಗಿ ಗಮನವನ್ನು ನೀಡುತ್ತಿದೆ. ಈ ಬಗ್ಗೆ ಮಾನ್ಯ ಸದಸ್ಯರಿಗೆ ನಾನು ತಿಳಿಸಬಯಸುವುದೇನೆಂದರೆ, ಒಂದು ಸಾಮಾನ್ಯ (ನಾರ್ಮಲ್) ವರ್ಷದಲ್ಲಿ, ಸೆಪ್ಟೆಂಬರ್ ತಿಂಗಳಲ್ಲಿ ಬರುವ ಮಳೆಯು ಮುಂಗಾರು ಮತ್ತು ಹಿಂಗಾರು ಬೆಳೆಗಳೆಲ್ಲಕ್ಕೂ ಒಳ್ಳೇ ಹಿತಕಾರಿಯಾಗಿ ಚೆನ್ನಾಗಿ ಬೆಳೆ ಕೈಗೆ ಬಗುವುದಕ್ಕೆ ಸಹಕಾರಿಯಾಗುತ್ತದೆ. ಆದ್ದರಿಂದ, ಈಗ ನಾವು ಇನ್ನೂ ಸೆಪ್ಟೆಂಬರ್ ತಿಂಗಳಲ್ಲಿ ಪರಿಸ್ಥಿತಿ ಯಾವ ರೀತಿ ವೃದ್ಧಿಗೊಳ್ಳುತ್ತದೆಂದು ಕಾಯ್ದು ನೋಡಬೇಕಾಗಿದೆ. ಒಂದು ವೇಳೆ ಪರಿಸ್ಥಿತಿ ಉತ್ತಮಗೊಳ್ಳದಿದ್ದಲ್ಲಿ ಇನ್ನೂ ಯಾವ ಯಾವ ಪ್ರದೇಶಗಳಲ್ಲಿ ಸಾಕಷ್ಟು ಮಳೆಯಾಗದೆ ಅಭಾವ ಪರಿಸ್ಥಿತಿಯು ಉದ್ಭವಿಸುತ್ತದೆಯೋ ಅಂತಹ ಪ್ರದೇಶಗಳನ್ನು ಗುರುತಿಸಿ ಅಲ್ಲಿ ಅಭಾವ ಪರಿಹಾರ ಕಾಮಗಾರಿಗಳನ್ನು ಹಮ್ಮಿಕೊಳ್ಳಲು ಸರ್ಕಾರವು ಬದ್ಧವಾಗಿದೆ. ಈ ಸಮಯದಲ್ಲಿ ನಾನು ಸದನಕ್ಕೆ ಆಶ್ವಾಸನೆ ಕೊಡುವುದೇನೆಂದರೆ, ದುರಾದೃಷ್ಟವಶಾತ್ ಪರಿಸ್ಥಿತಿ ಉಲ್ಬಣಿಸಿ, ತೀವ್ರ ಅಭಾವ ಪರಿಸ್ಥಿತಿಯು ಉದ್ಭವಿಸಿದ ಪಕ್ಷದಲ್ಲಿ ಸರ್ಕಾರವು ಅಲ್ಲಿನ ಜನ ಮತ್ತು ಜಾನುವಾರುಗಳಿಗೆ ಪರಿಹಾರ ಒದಗಿಸುವ ದಿಸೆಯಲ್ಲಿ ಯಾವುದೇ ಲೋಪ ಬಾರದಂತೆ ತಕ್ಷಣದ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಸನ್ನದ್ಧವಾಗಿದೆ. ಹಾಗೂ ಏನೇ ಆರ್ಥಿಕ ಸಂಕಷ್ಟವಿದ್ದರೂ ಕೂಡ ಪೀಡಿತ ಜನತೆಗೆ ಪರಿಹಾರ ಒದಗಿಸುವಲ್ಲಿ ಸರ್ಕಾರ ಎಳ್ಳಷ್ಟೂ ಹಿಂದೆ ಮುಂದೆ ನೋಡುವುದಿಲ್ಲ. ಹಿಂದಿನಂತೆಯೇ, ಈ ಮುಂದೆಯೂ ಕೂಡ ಈ ವಿಷಯದಲ್ಲಿ ಮಾನ್ಯ ಸದಸ್ಯರ ಸಹಾಯ ಸಹಕಾರಗಳನ್ನು ಕೋರುತ್ತೇನೆ.

ಅನುಬಂಧ-ಅ

ಬರಗಾಲ ಪರಿಹಾರ — ೧೯೮೫-೮೬ ಮತ್ತು ೧೯೮೬-೮೭

(೩೦-೬-೧೯೮೬ ರ ವರೆಗಿನ ಸ್ಥಿತಿ)

I ಬರಗಾಲ ವ್ಯಾಪ್ತಿ

		ಒಟ್ಟು	ಬರಪೀಡಿತ
೧	ಜಿಲ್ಲೆಗಳು	೧೯	೧೮
೨	ತಾಲ್ಲೂಕುಗಳು	೧೭೫	೧೦೮
೩	ಹಳ್ಳಿಗಳು	೨೭೦೨೮	೨೦೪೯೬
೪	ಜನಸಂಖ್ಯೆ	೩೭೧.೩೫ ಲಕ್ಷ	೨೧೯.೬೯ ಲಕ್ಷ
೫	ಜಾನುವಾರು ಸಂಖ್ಯೆ	೧೪೦.೦೦ ,,	೧೦೯.೭೬ ,,
೬	ಸಣ್ಣ ಮತ್ತು ಅತಿ ಸಣ್ಣ ರೈತರು	೨೫.೪೬ ,,	೧೬.೧೮ ,,
೭	ಕೃಷಿ ಕಾರ್ಮಿಕರು	೩೬.೫೫ ,,	೨೩.೯೪ ,,
೮	ಒಟ್ಟು ಕಾರ್ಮಿಕರ ಸಂಖ್ಯೆ	೮೭.೪೫ ,,	೫೬.೩೦ ,,
೯	ಮುಂಗಾರು ಬೆಳೆಯಿಟ್ಟ ಪ್ರದೇಶ	—	೪೬.೬೦%
೧೦	ಹಿಂಗಾರು ಬೆಳೆಯಿಟ್ಟ ಪ್ರದೇಶ	—	೬೬.೦%
೧೧	ಆಹಾರ ಉತ್ಪತ್ತಿಯ ನಷ್ಟ	—	೫೦.೦%

II ಉದ್ಯೋಗ ಸೃಜನೆ (೩೦-೬-೧೯೮೬ರ ವರೆಗಿನ ಸ್ಥಿತಿ)

		ಅಭಾವ	ಇತರೆ	ಒಟ್ಟು
೧	ಕೈಗೊಂಡ ಒಟ್ಟು ಕೆಲಸಗಳ ಸಂಖ್ಯೆ	೨೪,೨೧೪	೩೩,೩೪೪	೫೭,೫೫೮
೨	ಪೂರ್ಣಗೊಂಡ ಕೆಲಸಗಳ ಸಂಖ್ಯೆ	೨೦,೦೪೫	೨೨,೨೭೩	೪೨,೩೧೮
೩	ಚಾಲ್ತಿಯಲ್ಲಿದ್ದ ಕೆಲಸಗಳ ಸಂಖ್ಯೆ	೪,೧೬೯	೧೧,೦೭೧	೧೫,೨೪೦
೪	ಸೃಜಿಸಿದ ಮಾನವ ದಿನಗಳು (ಲಕ್ಷ ಮಾನವ ದಿನಗಳಲ್ಲಿ)	೫೬೪.೭೮	೯೫೨.೦೦	೧,೫೧೭.೩೦
೫	ದಿನನಿತ್ಯದ ಸರಾಸರಿ ಕೂಲಿಗಾರರು	೨,೫೧,೬೭೩	೪,೩೯,೨೮೨	೬,೯೦,೯೫೫
೬	ಭರಿಸಿದ ವೆಚ್ಚ (ಲಕ್ಷ ರೂ.ಗಳಲ್ಲಿ)	೬,೮೮೭.೩೨	೧೮,೫೨೮.೨೯	೨೫,೪೧೫.೬೧

III ಕುಡಿಯುವ ನೀರು :

(ಲಕ್ಷ ರೂಪಾಯಿಗಳಲ್ಲಿ)

		ಅಭಾವ ಪರಿಹಾರ		ಯೋಜನೆ		ಮೊತ್ತ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
೧	೨		೪	೫	೬	೭	೮
ಅ.	ಗ್ರಾಮಾಂತರ :						
೧	ತೋಡಿರುವ ಯಶಸ್ವಿ ಕೊಳವೆ ಬಾವಿಗಳು	೬೨೬೯	೧೩೧೦.೦೫	೭೩೫೩	೧೬೫೩.೪೦	೧೩೬೨೨	೨೯೬೩.೪೫
೨	ಚಿಕ್ಕ ನೀರು ಸರಬರಾಜು ಯೋಜನೆಗಳು	೪೬೬	೪೦೬.೮೬	೫೬೮	೫೪೯.೫೧	೧೦೩೪	೯೫೬.೩೭
೩	ಕೈಪಂಪುಗಳ ಪುನಃಶ್ಚೇತನ	೫೫೨೮	೨೧೪.೦೭	೩೨೫೭	೬೨.೫೩	೮೭೮೫	೨೭೬.೬೦
೪	ಕೊಳವೆ ನೀರು ಸರಬರಾಜು ಯೋಜನೆಗಳ ಪುನಃಶ್ಚೇತನ	೪೨೧	೨೩೫.೮೬	೧೨೮	೧೪೦೨.೧೯	೫೪೯	೧೬೩೮.೦೫
೫	ಕುಡಿಯುವ ನೀರನ್ನು ಸಾಗಾಣಿಕೆ ಮಾಡಿದ ಹಳ್ಳಿಗಳ ಸಂಖ್ಯೆ	೩೫೬	೧೯೬.೩೦	—	—	—	—
ಆ.	ಪಟ್ಟಣ :						
೧	ತೋಡಿರುವ ಯಶಸ್ವಿ ಕೊಳವೆ ಬಾವಿಗಳು	೧೮೦೮	೪೪೬.೮೧	೭	೫೩೫.೬೩	೧೮೧೫	೯೮೨.೪೪
೨	ಬೆಂಗಳೂರು ನಗರದಲ್ಲಿ ತೋಡಿರುವ ಯಶಸ್ವಿ ಕೊಳವೆ ಬಾವಿಗಳು	೨೦೦	೧೧೫.೯೭	—	—	—	—
IV	ಕೃಷಿ :						
೧	ಕೃಷಿ ಮಿನಿ ಕಿಟ್ಸ್ — ಪ್ರಯೋಜನ ಪಡೆದವರ ಸಂಖ್ಯೆ	೩೯೧೯೨೧	೫೮೩.೫೯	೯೭೧೪೫	೧೧೬.೨೦	೪೮೯೦೬೬	೬೯೯.೭೯
೨	ಸಸ್ಯ ಸಂರಕ್ಷಣೆ (ಒಳಗೊಂಡ ವಿಸ್ತೀರ್ಣ ಹೆಕ್ಟೇರ್‌ಗಳು)	೯೨೪೦೦	೫೨.೪೦	೭೬೩೮೧	೪೩.೫೮	೧೬೮೧೮೧	೯೫.೯೮
V	ವಿಶೇಷ ಪೌಷ್ಟಿಕ ಆಹಾರ						
೧	ಪ್ರಯೋಜನ ಪಡೆದ ಮಹಿಳೆಯರ ಮತ್ತು ಮಕ್ಕಳ ಸಂಖ್ಯೆ	೮೨೮೦೦೦	೭೩.೮೩	—	೩೮೫.೭೦ ಯೋಜನೇತರ ಸೇರಿ	—	—
೨	ಕೆ. ಎಂ. ಎಫ್. (ಲೀಟರ್ ಹಾಲು)	೧೮೯೧೪೪	೫೦.೪೫	—	—	—	—

1	2	3	4	5	6	7	8
VI	**ಜನಾರೋಗ್ಯ :**						
೧	ಪ್ರಯೋಜನ ಪಡೆದವರ ಸಂಖ್ಯೆ (ರೋಗ ನಿರೋಧಕ ಚುಚ್ಚುಮದ್ದುಗಳು ಸೇರಿ)	೨೨೫೧೪೧೨	೧೨೮.೦೧	—	—	—	—

ಮೇವು ಪೂರೈಕೆ :

ಅ. ಸಂಗ್ರಹಣೆ ;

೧ ಸರ್ಕಾರಿ ಫಾರಂಗಳಿಂದ	೧೫೭೨೪	ಟನ್ನುಗಳು
೨ ರೈತರಿಂದ ಕೊಂಡದ್ದು	೨೦೬೩೮	,,
೩ ದೇಣಿಗೆ ಮತ್ತಿತರ ಮೂಲಗಳಿಂದ	೧೩೭೭೧	,,
	೫೦೧೩೩	,,

ಆ.

೧ ಖಾಸಗಿಯಾಗಿ ರೈತರು ಕೊಂಡ ಮೇವಿಗೆ ಸಹಾಯಧನ ಕೊಟ್ಟಿದ್ದು	೧೫೯೮೭	ಟನ್ನುಗಳು
೨ ಪ್ರಯೋಜನ ಪಡೆದ ರೈತರ ಸಂಖ್ಯೆ	೩೦೩೨೭	,,
೩ ಸಹಾಯಧನ ನೀಡಿದ್ದು	೩೪.೭೪	ಲಕ್ಷ ರೂ.ಗಳು

ಇ ಮೇವು ಬ್ಯಾಂಕುಗಳು :

೧ ಮೇವು ಬ್ಯಾಂಕುಗಳ ಸಂಖ್ಯೆ	೩೧೬	
೨ ಮೇವಿನ ದಾಸ್ತಾನು	೬೭೫೫	ಟನ್ನುಗಳು
೩ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಪೂರೈಸಿದ ಮೇವಿನ ಪ್ರಮಾಣ	೧೬೯೩೨	,,
೪ ಪ್ರಯೋಜನ ಪಡೆದ ಸಣ್ಣ ಮತ್ತು ಅತಿ ಸಣ್ಣ ರೈತರು	೧೧೬೫೦೧	
೫ ಭರಿಸಿದ ಖರ್ಚು	೧೩೦.೧೭	ಲಕ್ಷ ರೂ.ಗಳು

ಈ. ಗೋಶಾಲೆಗಳು :

೧ ಗೋಶಾಲೆಗಳ ಸಂಖ್ಯೆ	೮೭	
೨ ಗೋಶಾಲೆಯಲ್ಲಿದ್ದ ಗೋವುಗಳ ಸಂಖ್ಯೆ	೪೭೭೯೨	
೩ ಭರಿಸಿದ ಖರ್ಚು	೭೪.೦೯	ಲಕ್ಷ ರೂ.ಗಳು

ಉ. ಮೇವು ಬೆಳೆ ತೆಗೆದ ವಿಸ್ತೀರ್ಣ :

೧ ಸರ್ಕಾರಿ ಜಮೀನು	೩೮೭೧	ಹೆಕ್ಟೇರುಗಳು
೨ ಖಾಸಗಿ ಜಮೀನು	೧೨೪೪೨	,,
ಒಟ್ಟು	೧೬೩೧೩	
೩ ಸರ್ಕಾರಿ ಫಾರಂಗಳಲ್ಲಿ ಬೆಳೆದ ಮೇವಿಗೆ ಭರಿಸಿದ ಖರ್ಚು	೪೯.೯೨	ಲಕ್ಷ ರೂ.ಗಳು

ಊ. ಹರಿಯಾಣ/ಪಂಜಾಬುಗಳಿಂದ ಮೇವು :

೧ ಬಳ್ಳಾರಿಗೆ ಬಂದ ಒಟ್ಟು ಮೇವು

೧ ಅಕ್ಕಿ ತೌಡು	೩೬೫೦ ಟನ್ನುಗಳು
೨ ಒಣ ಹುಲ್ಲು	೨೭೫ ,,
೩ ಗೋಧಿ ಬೂಸಾ	೬೦ ,,

೨ ರಾಯಚೂರಿಗೆ ಬಂದ ಒಟ್ಟು ಮೇವು ೪೦೦ ,,

೩ ಭರಸಿದ ಖರ್ಚು ೫೦.೦೨ ಲಕ್ಷ ರೂ.ಗಳು

VII ಮನ್ನಾ/ಮುಂದೂಡಿದ ಭೂಕಂದಾಯ :

	ಹಳ್ಳಿಗಳ ಸಂಖ್ಯೆ	ಮೊತ್ತ (ಲಕ್ಷ ರೂ.ಗಳಲ್ಲಿ)
೧ ಅರ್ಧ ಮುಂದೂಡಿದ	೧೭೪೩	೮.೪೮
೨ ಪೂರ್ಣ ಮುಂದೂಡಿದ	೪೯೦೯	೬೫.೭೫
೩ ಮನ್ನಾ ಮಾಡಿದ	೧೫೦೮೮	೧೫೯.೧೪
	೨೧೭೪೦	೨೩೩.೩೭

VIII ಆಹಾರ ಧಾನ್ಯ :

೧ ೧೯೮೪-೮೫ ರಲ್ಲಿ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ೧೨೬೮೯

೨ ೧೯೮೫-೮೬ ರಲ್ಲಿ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ೧೨೮೦೧

IX ಮುಖ್ಯಮಂತ್ರಿಗಳ ಬರಗಾಲ ಪರಿಹಾರ ನಿಧಿ :

೧ ೮-೮-೧೯೮೬ ರ ವರೆಗೆ ಆದ ಸಂಗ್ರಹಣೆ ೭.೦೪ ಕೋಟಿ ರೂ.ಗಳು

X ಕೇಂದ್ರದಿಂದ ನೆರವನ್ನು ಕೋರಿದ್ದು ಹಾಗೂ ಪಡೆದಿದ್ದು :

	ಕೋರಿದ್ದು	ನಿಗದಿತ ಮಿತಿ	ವಾಸ್ತವವಾಗಿ ಪಡೆದುದ್ದು (ಕೋಟಿ ರೂ ಗಳಲ್ಲಿ)
೧ ಏಪ್ರಿಲ್ ೧೯೮೫	೮೯.೦೦	೨೨.೧೬	೪೬.೭೦
೨ ಆಗಸ್ಟ್ ೧೯೮೫	೧೫೧.೦೦	೩೧.೧೫	
೩ ಡಿಸೆಂಬರ್ ೧೯೮೫	೨೭೧.೦೦	೭.೪೩ (೩೧-೩-೮೬ರವರೆಗೆ)	೬.೨೯
೪ ಫೆಬ್ರುವರಿ	೭೭.೦೦	೩೦.೦೫ (೧-೪-೮೬ ರಿಂದ ೧೯.೯೫ ೩೦-೬-೮೬ರವರೆಗೆ)	೨೫.೦೦
			೮೦.೯೯

XI ೧೯೮೫-೮೬ ಮತ್ತು ೩೦-೬-೧೯೮೬ ರ ವರೆಗೆ ಅಭಾವ ಪರಿಹಾರದಡಿಯಲ್ಲಿ ಮಾಡಿದ ಅನುದಾನ ಮತ್ತು ವೆಚ್ಚ :

(ಕೋಟಿ ರೂ.ಗಳಲ್ಲಿ)

೧	ಭಾರತ ಸರ್ಕಾರ ನಿಗಧಿಪಡಿಸಿದ ಮಿತಿ	೧೧೩.೩೧
೨	ನಿಗಧಿತ ಮಿತಿಗೆ ಎದುರಾಗಿ ರಾಜ್ಯ ಸರ್ಕಾರ ಬಿಡುಗಡೆ ಮಾಡಿದ ಹಣ	೧೩೦.೩೩
೩	೩೦-೬-೧೯೮೬ ರ ವರೆಗೆ ನಿಗಧಿತ ಮಿತಿಯ ಎದುರಿಗೆ ಭರಿಸಿದ ಖರ್ಚು	೧೭೯.೭೦
೪	೩೦-೬-೧೯೮೬ ರ ವರೆಗೆ ಇಲಾಖೆಗಳ ಯೋಜನಾ ಕಾರ್ಯಕ್ರಮದಡಿಯಲ್ಲಿ ಒಟ್ಟು ಸೇರಿ ಮಾಡಿದ ಒಟ್ಟು ಖರ್ಚು	೨೭೮.೫೯

ಅನುಬಂಧ-ಆ

೧೯೮೫-೮೬ ಮತ್ತು ೧೯೮೬-೮೭ರಲ್ಲಿ ಬರ ಪರಿಹಾರ ಮತ್ತು ಇತರೆ ಉದ್ಯೋಗ ಕಾರ್ಯಕ್ರಮಗಳಡಿಯಲ್ಲಿ ಸಾಧಿಸಿದ ಭೌತಿಕ ಪ್ರಗತಿ.

(೩೦-೬-೧೯೮೬ಕ್ಕೆ)

ಕ್ರಮ ಸಂಖ್ಯೆ	ಕಾರ್ಯಕ್ರಮ	ಯೂನಿಟ್ಟು	ಅಭಾವ	ಇತರೆ	ಜುಮ್ಲಾ
೧	ಹೊಸ ರಸ್ತೆಗಳ ನಿರ್ಮಾಣ	ಕಿ.ಮೀ.	೩೯೩೨	೨೮೭೮	೬೮೧೦
೨	ಹೊಸ ಹಳ್ಳಿಗಳ ಕೂಡು ರಸ್ತೆ ನಿರ್ಮಾಣ	,,	೨೫೧೯	೨೦೬೧	೪೫೮೦
೩	ಹಾಲಿ ಇರುವ ರಸ್ತೆಗಳ ಸುಧಾರಣೆ	,,	೭೮೬೪	೪೪೬೭	೧೨೩೩೧
೪	ಹೊಸ ಕೆರೆಗಳ ನಿರ್ಮಾಣ	ಸಂಖ್ಯೆ	೯೯	೧೭೯	೨೭೮
೫	ಹಳೆ ಕೆರೆಗಳ ಹೂಳು ತೆಗೆಯುವುದು	,,	೧೭೬೫	೩೭೫	೨೧೪೦
೬	ನೀರಾವರಿ ಕಾಲುವೆಗಳನ್ನು ತೋಡುವುದು	,,	೮೧೯	೨೧೪	೧೦೩೩
೭	ಭೂಸಾರ ಸಂರಕ್ಷಣೆ (ಒಳಗೊಂಡ ವಿಸ್ತೀರ್ಣ)	ಹೆಕ್ಟೇರುಗಳು	೨೩೨೨೭	೩೨೩೧೮	೫೫೫೪೫
೮	ವನ ನಿರ್ಮಾಣ ಕಾರ್ಯದಲ್ಲಿ ಸಸಿ ನೆಡುವುದು	,,	೪೪೮೧	೩೧೫೭೭	೩೬೦೫೮
೯	ಶಾಲಾ ಕಟ್ಟಡಗಳ ನಿರ್ಮಾಣ	ಸಂಖ್ಯೆ	೧೧೩	೧೭೫೦	೧೮೬೩
೧೦	ಇತರೆ ಕಟ್ಟಡಗಳ ನಿರ್ಮಾಣ	,,	೫೧೮	೪೮೨೯	೫೩೪೭
೧೧	ಕೊಳವೆ ಬಾವಿಗಳು :				
	ಗ್ರಾಮಾಂತರ	,,	೬೨೬೯	೭೩೫೩	೧೩೬೨೨
	ಪಟ್ಟಣ	,,	೨೦೧೮	...	೨೦೧೮

ಅನುಬಂಧ-೨

೧೯೮೫-೮೬ ಮತ್ತು ೧೯೮೬-೮೭ನೇ ಸಾಲಿನಲ್ಲಿ ಬರಪರಿಹಾರ ಕಾರ್ಯಕ್ಕಾಗಿ ನಿಗದಿಪಡಿಸಿದ ಮಿತಿ, ಅನುದಾನ ಮತ್ತು ಖರ್ಚಿನ ತಃಖ್ತೆ (೧-೪-೧೯೮೫ರಿಂದ ೩೦-೬-೧೯೮೬ರ ವರೆಗೆ)

(ಲಕ್ಷ ರೂಪಾಯಿಗಳಲ್ಲಿ)

ಕ್ರಮ ಸಂಖ್ಯೆ	ಶೀರ್ಷಿಕೆ	ನಿಗದಿಪಡಿಸಿದ ಮಿತಿ	ಮಿತಿಗೆ ಎದುರಾಗಿ ರಾಜ್ಯ ಸರ್ಕಾರವು ಬಿಡುಗಡೆ ಮಾಡಿದ ಹಣ	ಖರ್ಚು
I	ಉಚಿತ ಪರಿಹಾರ	೪೦.೦೦	೩೦.೦೦	೨೮.೩೬
II	ಕುಡಿಯುವ ನೀರಿನ ಸರಬರಾಜು			
೧	ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಾಗಾಣಿಕೆ	೩೭೫.೦೦	೨೪೭.೦೦	೧೯೬.೩೦
೨	ಕೊಳವೆ ನೀರು ಸರಬರಾಜು ಯೋಜನೆಗಳ ಪುನಃಶ್ಚೇತನ	೯೦.೦೦		
೩	ಕೈಪಂಪುಗಳ ಪುನಃಶ್ಚೇತನ	೮೦.೦೦		
೪	ಹಳ್ಳಿಗಳಲ್ಲಿ ಕೊಳವೆ ಬಾವಿ ತೋಡುವಿಕೆ	೧೨೩೦.೦೦	೧೯೮೩.೫೦	೧೭೫೯.೯೬
೫	ಕೈಪಂಪುಗಳ ಪುನಃಶ್ಚೇತನ	೪೬.೦೦		
೬	ಚಿಕ್ಕ ನೀರು ಸರಬರಾಜು ಯೋಜನೆಗಳು	೨೮೦.೦೦	೨೯೬.೫೦	೪೦೬.೮೬
೭	ಪಟ್ಟಣ ಪ್ರದೇಶಗಳಲ್ಲಿ ಕೊಳವೆ ಬಾವಿಗಳ ತೋಡುವಿಕೆ (ಬೆಂಗಳೂರು ನಗರ ಮತ್ತು ಕೊಳಚೆ ಪ್ರದೇಶಗಳು ಸೇರಿ)	೪೫೦.೦೦	೬೧೭.೦೦	೫೮೨.೨೮
೮	ತೆರೆದ ಬಾವಿಗಳ ಪುನಃಶ್ಚೇತನ	೨೫.೦೦	೨೧.೦೦	೧೦.೯೧
೯	ಟ್ಯಾಂಕರುಗಳಿಂದ ನೀರು ಸರಬರಾಜು ಮಾಡುವ ಹಳ್ಳಿಗಳಿಗೆ ಕೊಳವೆ ನೀರು ಸರಬರಾಜು ಯೋಜನೆ	೧೦೦.೦೦	೯೬.೫೦	೬೩.೩೮
೧೦	ರಿಗ್ಗುಗಳ ಖರೀದಿ	೭೫೦.೦೦	೭೫೦.೦೦	...
	ಉಪ ಮೊತ್ತ I ಮತ್ತು II	೩೪೬೬.೦೦	೪೦೪೧.೫೦	೩೦೪೮.೦೭
III	ಮೇವು :			
೧	ಸಾಗಾಣಿಕೆ ಮತ್ತು ಸರಬರಾಜು	೩೭೫.೦೦		೨೧೨.೦೨
೨	ಪಂಜಾಬು, ಹರಿಯಾಣ ಮತ್ತು ಉತ್ತರ ಪ್ರದೇಶದಿಂದ ಸಂಗ್ರಹಿಸಿದ್ದು		೯೯೩.೦೦	೫೦.೦೦
೩	ಅರಣ್ಯದಲ್ಲಿ ಹುಲ್ಲು ಕಟಾವು			೧೭.೭೫
೪	ಸಹಕಾರ ಸಂಘಗಳ ಸಂಸ್ಥಿದಾರರಿಗೆ ಮೇವು ಬೆಳೆಯಲು ನೀಡಿದ ಸಾಲ	...	೭೦.೦೦	೨೩.೦೦
೫	ಗೋಶಾಲೆಗಳು	೧೦೦.೦೦	೧೫೨.೦೦	೭೪.೦೯

೬ ಸರ್ಕಾರಿ ಫಾರಂಗಳಲ್ಲಿ ಮೇವು ಬೆಳೆಯುವಿಕೆ :				
ಕೃಷಿ ಇಲಾಖೆ	೧೦.೦೦			೧೦.೦೦
ಪ.ಸಂ. ಮತ್ತು ಪ.ವೈ.	೧೦.೦೦			೯.೮೫
ತೋಟಗಾರಿಕೆ	೧೦.೦೦	೧೭೫.೦೦	೫೦.೦೦	೮.೨೯
ಅರಣ್ಯ	೧೦.೦೦			೧೨.೨೯
ಯು.ಎ ಎಸ್.	೧೦.೦೦			೯.೪೯
೭ ಜಾನುವಾರುಗಳಿಗೆ ಪೌಷ್ಟಿಕ ಮೇವು ಸರಬರಾಜು		೧೦೦.೦೦	೨೦೦.೦೦	೧೯೮.೧೮
ಉಪ ಮೊತ್ತ III		೭೫೦.೦೦	೯೬೫.೦೦	೬೨೫.೨೪
IV ಸಾಮಾಜಿಕ ಭದ್ರತೆ :				
ಅ ಸಾರ್ವಜನಿಕ ಆರೋಗ್ಯ ಆ ಪೌಷ್ಟಿಕ ಆಹಾರ ನೀಡಿಕೆ		೪೦೫.೦೦	೩೦೫.೦೦	೨೬೧.೪೧
V ಕೃಷಿ :				
ಅ ಸಸ್ಯ ಸಂರಕ್ಷಣೆ		೧೫೦.೦೦	೧೩೫.೦೦	೫೨.೪೦
ಆ ಬೀಜ ಮತ್ತು ಗೊಬ್ಬರಕ್ಕಾಗಿ ನೀಡಿದ ಸಹಾಯ ಧನ		೫೫೯.೦೦	೬೦೪.೦೦	೫೮೩.೫೯
ಉಪ ಮೊತ್ತ V		೭೦೯.೦೦	೭೩೯.೦೦	೬೩೫.೯೯
VI ಬೆಳೆ ಸಾಲ ಮರು ಹೊಂದಾಣಿಕೆ		೪೬೮.೩೮	..	...
VII ಉದ್ಯೋಗ ನಿರ್ಮಾಣ :				
೧) ವಿಶೇಷ ಜಿಲ್ಲಾಧಿಕಾರಿ ಡಿಆರ್‌ಡಿಎಸ್			೬೪೭೨.೨೦	೬೮೮೭.೩೧
೨) ಕಾರ್ಯದರ್ಶಿ-೨, ಸಣ್ಣ ಮತ್ತು ಮಧ್ಯಮ ನೀರಾವರಿ		೫೫೩೩.೦೦	೫೧೦.೦೦	೫೧೨.೩೩
ಉಪ ಮೊತ್ತ VII		೫೫೩೩.೦೦	೬೯೮೨.೨೦	೬೩೯೯.೬೪
ಒಟ್ಟು ಮೊತ್ತ (I to VII)		೧೩೩೧.೩೮*	೧೩೦೩೨,೭೦	೧೧೯೭೦.೩೫

* ಈ ಪೈಕಿ ಭಾರತ ಸರ್ಕಾರದಿಂದ ಮಂಜೂರಾದ ಮಿತಿ ಒಟ್ಟು ೧೧೨೪೬.೩೮ ಲಕ್ಷ ರೂ. ಗಳು ಮಾತ್ರ.

ಇದರ ಜೊತೆಗೆ ಇಲ್ಲಿರುವ ವರದಿಪ್ರಕಾರ ರಾಜ್ಯದಲ್ಲಿ ಹಲವು ಜಿಲ್ಲೆಗಳಲ್ಲಿ ಕೆಲವೊಂದು ಭಾಗಗಳ ವಿವರಗಳನ್ನು ಕೊಟ್ಟಿದ್ದೇನೆ. ಮಳೆಯಾಗದೆ ಅಲ್ಲಿ ಬೆಳೆಗಳು ಕೂಡ ಚೆನ್ನಾಗಿ ಬಂದಿಲ್ಲ. ಅಂತಹ ಭಾಗಗಳನ್ನು ಗುರುತಿಸಿ ಮುಂದಿನ ವಾರದಿಂದಲೇ ಅಲ್ಲಿ ಪರಿಹಾರ ಕಾಮಗಾರಿಗಳನ್ನು ಪ್ರಾರಂಭ ಮಾಡುತ್ತಿದ್ದೇವೆ, ಜೊತೆಗೆ ಎನ್.ಆರ್.ಇ.ಪಿ. ಆರ್.ಎಲ್.ಇ.ಜಿ.ಪಿ. ಮತ್ತು ಡಿ.ಪಿ.ಎ ಪಿ. ಇವುಗಳಿಗೆ ಹಣ ಕೊಟ್ಟು ಹೆಚ್ಚು ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಆದೇಶ ಕೊಡುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ). —ಮಾನ್ಯ ಅಧ್ಯಕ್ಷರೇ, ಈ ಅಧಿವೇಶನದಲ್ಲಿ ನಾವು ಕೆಲವು ಸಲ ತಪ್ಪು ಮಾಡುತ್ತಿದ್ದೇವೆ ಎನ್ನುವ ಭಾವನೆ ನನಗಂತೂ ಬಂದಿದೆ. ಈ ಬರಗಾಲದ ವಿಚಾರದಲ್ಲಿ, ನಿಜ, ಲಕಿರಲ್ಲಿಯೇ ನಾವು ಬಹಳ ದೊಡ್ಡ ಪ್ರಮಾಣದಲ್ಲಿ ಬರಗಾಲಕ್ಕೆ ತುತ್ತಾಗಿದ್ದೆವು. ಕರ್ನಾಟಕ ರಾಜ್ಯದ ಬಹುಭಾಗ ಇದಕ್ಕೆ ತುತ್ತಾಗಿತ್ತು. ಈಗಲೂ ಅಷ್ಟೆ. ಕಳೆದ ಅಧಿವೇಶನದಲ್ಲಿ ಇದರ ಬಗ್ಗೆ ನಾವು ವಿವರವಾಗಿ ಚರ್ಚೆ ಮಾಡಿದ್ದೇವೆ. ನಂತರ ಜನವರಿ, ಫೆಬ್ರುವರಿಯಲ್ಲಿ ಸೇರಿದ್ದಾಗ ಮತ್ತೆ ಚರ್ಚೆ ಮಾಡಿದ್ದೇವೆ. ಮಳೆ ಸ್ವಲ್ಪ ಬೀಳತಕ್ಕಂಥ ಸಂದರ್ಭ ಬಂದಾಗ ಕೆಲಸಗಳು ನಿಂತುಹೋಗಿಬಿಟ್ಟವು. ಕೆಲಸಕಾರ್ಯಗಳು ನಡೆಯುವುದಿಲ್ಲ ಅಂದರೆ, ಜನರಿಗೆ ಉದ್ಯೋಗ ಸಿಗುವುದಿಲ್ಲ. ಇಂತಹ ಪ್ರಶ್ನೆ ಕೂಡ ಬಂತು. ಹೆಚ್ಚಿನ ವಿವರಕ್ಕೆ ನಾನು ಈಗ ಹೋಗುವುದಿಲ್ಲ. ಈ ಅಧಿವೇಶನದಲ್ಲಿ ಈಗ ಮುಂಗಾರು ತಡವಾದರೂ ಕೂಡ ಮಳೆ ಬಂತು ಅಂತ ತಾವು ಬಿಟ್ಟುಬಿಟ್ಟಿದ್ದೀರಿ. ಮತ್ತೆ ಆಗಸ್ಟ್ ತಿಂಗಳ ಪ್ರಾರಂಭದಲ್ಲಿ ಮಳೆ ಹೊರಟು ಹೋಗಿಬಿಟ್ಟಿದೆ. ಅನೇಕ ಭಾಗಗಳಲ್ಲಿ, ಬಿಜಾಪುರ ತೆಗೆದು ಕೊಂಡರೆ ಮಳೆಯೇ ಬರಲಿಲ್ಲ. ಇದೇ ರೀತಿ ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಹೈದರಾಬಾದ್ ಕರ್ನಾಟಕ, ಮುಂಬೈ ಕರ್ನಾಟಕ ಭಾಗದಲ್ಲಿ, ಮತ್ತು ಬೆಳಗಾವಿ ಜಿಲ್ಲೆಯ ಕೆಲವು ಭಾಗಗಳು, ಬಿಜಾಪುರ ಜಿಲ್ಲೆಯ ಬಹುಭಾಗ, ಸ್ವಲ್ಪ ಭಾಗಗಳಲ್ಲಿ ಮಾತ್ರ ಮಳೆ ಬಿತ್ತು. ಧಾರವಾಡದಲ್ಲಿ ಒಂದು ಭಾಗ ಮಾತ್ರ ಚೆನ್ನಾಗಿ ಇದೆ. ಉತ್ತರ ಭಾಗದಲ್ಲಿ ರೋಣ. ಮುಂಡರಗಿ ಭಾಗದಲ್ಲಿ ಸ್ವಲ್ಪ ಪರವಾಗಿಲ್ಲ. ಆದರೆ ಧಾರವಾಡ ಜಿಲ್ಲೆಯಲ್ಲೂ ಮತ್ತೆ ಒಣಗಿಹೋಗಿದೆ, ಹಳೆ ಮೈಸೂರು ಭಾಗದಲ್ಲಿ, ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ ಘಟ್ಟಪ್ರದೇಶಗಳು ಏನಿವೆ ಅಲ್ಲಿ ಈ ಪ್ರಶ್ನೆ ಅಷ್ಟು ಕಾಣುತ್ತಿಲ್ಲ. ಕೋಲಾರ ಜಿಲ್ಲೆಯಂತೂ ಯಾವಾಗಲೂ ಬರಗಾಲಕ್ಕೆ ತುತ್ತಾಗತಕ್ಕಂಥ ಪ್ರದೇಶ. ಶ್ರೀ ಹೆಚ್. ಟಿ. ಕೃಷ್ಣಪ್ಪನವರ ನೆಲಮಂಗಲ ತಾಲ್ಲೂಕು ಯಾವಾಗಲೂ ಬರಗಾಲದಿಂದ ಕೂಡಿದ ಪ್ರದೇಶ. ಅದೇರೀತಿ ಹಾಸನ ಮತ್ತು ಚಿಕ್ಕಮಗನೂರು ಜಿಲ್ಲೆಯ ಅರ್ಧ ಭಾಗ ಕಡೂರು, ತರೀಕೆರೆ ಭಾಗಗಳೂ ಕೂಡ. ಶಿವಮೊಗ್ಗ ಜಿಲ್ಲೆಯ ನಾನ್ ಇರಿಗೇಟಡ್ ಏರಿಯಾ ಹೊನ್ನಾಳಿ ತಾಲ್ಲೂಕು, ಇಲ್ಲಿ ಸಹ ಮಳೆ ಹೊರಟುಹೋಗಿದೆ. ಚನ್ನಗಿರಿ ತಾಲ್ಲೂಕು, ಭದ್ರಾವತಿ ತಾಲ್ಲೂಕು, ಶಿಕಾರಿಪುರ ತಾಲೂಕುಗಳ ಅನೇಕ ಭಾಗಗಳು ಮತ್ತು ನನ್ನ ಕ್ಷೇತ್ರವಾದ ಸೊರಬ ತಾಲೂಕಿನ ಕೆಲವು ಭಾಗಗಳು ಹೊರಟು ಹೋಗಿವೆ. ಎಲ್ಲಾ ನೀರು ಬೇಕಾದ ಬೆಳೆಗಳಿಗೆ ಪರಿಸ್ಥಿತಿ ತುಂಬಾ ಕಷ್ಟವಾಗಿದೆ, ಕೆಲವು ಕಡೆಗಳಲ್ಲಂತೂ ಸಂಪೂರ್ಣವಾಗಿ ನಾಶವಾಗಿದೆ ಇದರಿಂದ ಏನು ಗೊತ್ತಾಗುತ್ತದೆ ಎಂದರೆ, ಬೆಳೆಗೆ ಬೇಕಾದಂಥ ಮಳೆ ಇಲ್ಲ. ಮಲೆನಾಡು ಪ್ರದೇಶದಲ್ಲಿ ತಮಗೆ ಗೊತ್ತಿರುವ ಹಾಗೆ ಇವತ್ತಿನ ಬೆಳಗಿನ ವರದಿ ಪ್ರಕಾರ ಮಟಮಟ ಮಧ್ಯಾಹ್ನದಲ್ಲಿ ಯುಗಾದಿ ಯಲ್ಲಿ ಯಾವ ರೀತಿ ಬಿಸಿಲು ಬೀಳುತ್ತದೆಯೋ, ಅಂತಹ ಬಿಸಿಲು ಧಾರವಾಡ ಕಡೆಯಲ್ಲಿ ಈ ಮಳೆಗಾಲದಲ್ಲಿ ಬೀಳುತ್ತಿದೆ ಇದರಿಂದಾಗಿ ಜನರು ಚಿಂತಾಕ್ರಾಂತರಾಗತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಅದರೆ ಯಾವ ರೀತಿ ಕಾಮಗಾರಿಗಳನ್ನು ತೀವ್ರಗತಿಯಲ್ಲಿ, ದೊಡ್ಡ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕಿತ್ತೋ ಅದನ್ನು ತೆಗೆದುಕೊಂಡಿಲ್ಲ. ಜನರಿಗೆ ಈಗಾಗಲೇ ಉದ್ಯೋಗ ಇಲ್ಲದೆ, ಹಳಿಯಾಳದಂಥ ಹಳ್ಳಿಗಳ ಜನರೇ ಊರು ಬಿಡಬೇಕಾದಂಥ ಪರಿಸ್ಥಿತಿ ಇದೆ. ಇನ್ನು ಬೇಸಿಗೆಯಲ್ಲಿ ಹೇಗೆ ಆಗಬಹುದು ? ನಾನು ಹೆಚ್ಚು ವಿವರಣೆ ಕೊಟ್ಟು ಮಾತನಾಡತಕ್ಕಂಥ ಸಂದರ್ಭ ಇದು ಅಲ್ಲ. ಈಗ ವಿವರಣೆ ಕೇಳಿ ರಿಪೇರಿ ಮಾಡಲಿಕ್ಕೂ ಸಾಧ್ಯವಿಲ್ಲ. ಪರಿಸ್ಥಿತಿ ಹದ್ದುಮೀರಿ ಹೋಗತಕ್ಕಂಥ ಸಂದರ್ಭ ಸ್ಪಷ್ಟವಾಗಿ ಇದೆ. ಅದಕ್ಕಾಗಿ ನಾನು ಹೇಳುವುದೇನೆಂದರೆ ನಾಳೆಯೇ ಅಧಿವೇಶನದ ಕೊನೆ ದಿನ. ಕ್ಷಮಿಸಬೇಕು,

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಬಂಗಾರಪ್ಪ ಈ ಸಲಹೆ ಮಾಡುತ್ತಿದ್ದಾರಲ್ಲ ಎಂದು ತಾವು ತಿಳಿದುಕೊಳ್ಳಬಹುದು. ನಾಳೆ ಒಂದೇ ದಿವಸ ಉಳಿದಿದೆ. ನಾಡದ್ದು ಶನಿವಾರ ಬೆಳಿಗ್ಗೆ ಸಹ ನಾವು ಕುಳಿತು ಬರದ ಬಗ್ಗೆ ಪ್ರತ್ಯೇಕವಾಗಿ ಚರ್ಚೆ ಮಾಡಿದರೆ ಮಾನ್ಯ ಸದಸ್ಯರುಗಳು, ಹೈದರಾಬಾದ್ ಕರ್ನಾಟಕ, ಮುಂಬೈ ಕರ್ನಾಟಕ, ಹಳೆ ಮೈಸೂರು ರಾಜ್ಯದ ಎಲ್ಲಾ ಸದಸ್ಯರೂ ಕೂಡ ಮಾತನಾಡುವುದಕ್ಕೆ ಅವಕಾಶ ಆಗುತ್ತದೆ. ಈಗ ಮಾನ್ಯ ಕಂದಾಯ ಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ. ನಿಜ ಆವತ್ತು ಸದನದ ಕಾರ್ಯಕಲಾಪಗಳ ಸಮಿತಿಯಲ್ಲಿ ಇದು ಬಂದಿತ್ತು. ನಾನು ಈಗ ಬರಗಾಲದ ಬಗ್ಗೆ ಪ್ರಶ್ನೆ ಕೇಳುವುದಕ್ಕೆ ಹೋಗುವುದಿಲ್ಲ. ಆದರೆ, ಮಾನ್ಯ ಸದಸ್ಯರಿಗೆ ಹೇಳಬೇಕಾದ ವಿಷಯಗಳಿವೆ. ಆದ್ದರಿಂದ ಶನಿವಾರ ದಿವಸ ಸೇರಿ ಬರಗಾಲದ ಬಗ್ಗೆಯೇ ಪ್ರತ್ಯೇಕವಾಗಿ ವಿಚಾರ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು. ಬೆಳಿಗ್ಗೆ ಒಂಬತ್ತು ಗಂಟೆಗೆ ಸೇರಿ ಎರಡು–ಮೂರು ಗಂಟೆ ಕುಳಿತುಕೊಂಡರೆ, ಮಧ್ಯಾಹ್ನ ೧೨ ಗಂಟೆವರೆಗೂ ಕುಳಿತುಕೊಂಡರೆ ಸಾಕು. ಎಲ್ಲಾ ಮಾನ್ಯ ಸದಸ್ಯರೂ ಚರ್ಚೆಯಲ್ಲಿ ಭಾಗವಹಿಸುವಂಥ ಸಂದರ್ಭ ಇದೆ. ನಾಳೆ ದಿವಸ ಬೇರೆ ಬೇರೆ ಕಾರ್ಯಕ್ರಮಗಳು ಇವೆ. ಆದ್ದರಿಂದ ಮಾನ್ಯ ಸಭಾಧ್ಯಕ್ಷರೇ ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ, ಏನೆಂದರೆ, ಈಗಿರತಕ್ಕಂಥ ಕಲಾಪಗಳನ್ನು ನಾಳೆ ಮುಗಿಸಿ ಉಳಿದ ವಿಚಾರವನ್ನು ಶನಿವಾರ ತೆಗೆದುಕೊಳ್ಳೋಣ. ಇದು ನನ್ನ ಸ್ಪಷ್ಟವಾದ ಸಲಹೆ. ಈಗ ಇಷ್ಟು ಹೇಳಿದ್ದೇನೇ ವಿನಹ ವಿವರಕ್ಕೆ ಹೋಗಲು ಸಾಧ್ಯವಾಗುವುದಿಲ್ಲ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೇ, ವಿವರವಾಗಿ ಮಾತನಾಡಲು ಸಮಯ ವಿಲ್ಲದ ಕಾರಣ ಕೆಲವು ಮುಖ್ಯವಾದ ಅಂಶಗಳನ್ನು ಮಾತ್ರ ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಮಂತ್ರಿಗಳು ಹೇಳಿಕೆ ಕೊಡುವಾಗ ಬರಗಾಲ ಪರಿಹಾರ ಕಾಮಗಾರಿಗಳಲ್ಲಿ ಶಾಶ್ವತವಾಗಿ ನಡೆಯುವಂತಹ ಕೆಲವು ಕೆಲಸಗಳನ್ನು ಸೇರಿಸಿದ್ದೇವೆ ಮತ್ತು ಆರ್.ಎಲ್.ಇ.ಜಿ.ಪಿ., ಎನ್.ಆರ್.ಇ.ಪಿ. ಹಾಗೂ ಡಿ.ಪಿ.ಎ.ಪಿ. ಮೂಲಕ ಕೆಲಸ ಒದಗಿಸಲು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆಂದು ಹೇಳಿದರು. ಆದರೆ ನಾವು ಹಳ್ಳಿಗಳಿಗೆ ಹೋದಾಗ, ಅಲ್ಲಿ ಇದು ಯಾವ ಕೆಲಸವೂ ಆಗಿಲ್ಲವೆಂದು ನಮಗೆ ಅಲ್ಲಿನ ಜನರು ಹೇಳಿದರೆ, ಅದಕ್ಕೆ ನಾವು ಉತ್ತರ ಕೊಡುವುದು ಕಷ್ಟವಾಗುತ್ತದೆ. ಈ ಬಗ್ಗೆ ಮಾನ್ಯ ರೆವಿನ್ಯೂ ಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳು ಬಳ್ಳಾರಿ ಜಿಲ್ಲೆಗೆ ಬಂದಾಗ ಮಾತನಾಡಿದ್ದೇವೆ. ಈಗ ಮಾನ್ಯ ಮಂತ್ರಿಗಳು ತಮ್ಮ ವರದಿಯಲ್ಲಿ "ಜೂನ್ ೧೯೮೭ರ ಅಂತ್ಯದವರೆಗೆ ಅಭಾವ ಪರಿಹಾರ ಶೀರ್ಷಿಕೆಯಲ್ಲಿ ಕೈಗೊಂಡ ಕಾಮಗಾರಿಗಳಿಗೆ ಕೊಡಬೇಕಾಗಿದ್ದ ಬಾಕಿ ಮಜೂರಿ ಹಣವನ್ನು ಪಾವತಿ ಮಾಡಲು ೧೦೦.೦೦ ಲಕ್ಷ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಿದೆ." ಎಂದು ಹೇಳಿದ್ದಾರೆ. ಇದನ್ನು ಕೋಟಿ ರೂಪಾಯಿಗಳ ಮೊತ್ತದಲ್ಲಿ ಹೇಳಿದರೆ ಕಡಿಮೆ ಯಾಗಿ ಕಾಣುತ್ತದೆಂದು, ನೂರು ಲಕ್ಷ ಎಂದು ಹೇಳಿದ್ದಾರೆ. ನೋಡುವವರಿಗೆ ಇದು ದೊಡ್ಡ ಮೊತ್ತದ ತರಹ ಕಾಣುತ್ತದೆ. ಬಳ್ಳಾರಿ ಜಿಲ್ಲೆ ಒಂದರಲ್ಲಿಯೇ ೭೪ ಲಕ್ಷ ರೂಪಾಯಿಗಳಷ್ಟು ಬಾಕಿ ಇದೆ. ಇದನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ೪೨ ಲಕ್ಷ ರೂಪಾಯಿಗಳಷ್ಟು ಕೂಲಿಯನ್ನು ಬಾಕಿ ಕೊಡಬೇಕಾಗಿದೆ. ಕಳೆದ ೩ ತಿಂಗಳಿಂದ ಬಾಕಿ ಇದೆ. ಈಗ ಇದರಲ್ಲಿ ೯ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಈ ಬಗ್ಗೆ ನನಗೆ ಪತ್ರ ಬರೆದು ತಿಳಿಸಿದ್ದಾರೆ. ಈ ಹಣವನ್ನು ಸಹ ಕಾಳಿನ ರೂಪದಲ್ಲಿ ಕೊಟ್ಟರೆ, ಇನ್ನುಳಿದ ಬಾಕಿಯನ್ನು ಯಾವಾಗ ಕೊಡಲಾಗುತ್ತದೆಂಬುದನ್ನು ತಿಳಿಸಿಲ್ಲ. ಇಷ್ಟೊಂದು ಬಾಕಿ ಇರುವಾಗ ಮಳೆ ಬರದ ಕಡೆಗಳಲ್ಲಿ ಇನ್ನು ಒಂದು ವಾರದಲ್ಲಿ ಮತ್ತೆ ಕಾಮಗಾರಿ ಕೆಲಸಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇದು ಸಹ ಕಾರ್ಯರೂಪಕ್ಕೆ ಬರುತ್ತದೋ ಅಥವಾ ಇಲ್ಲವೋ ಎಂಬ ಅನುಮಾನ ಬರುತ್ತಿದೆ. ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಎಲ್ಲ ಕಡೆಯೂ ಒಂದೇರೀತಿ ಮಳೆ ಆಗಿಲ್ಲ. ಒಂದು ಭಾಗದಲ್ಲಿ ಭಾರಿ ಮಳೆಯಾಗಿದ್ದರೆ ಮತ್ತೊಂದು ಕಡೆ ಮಳೆ ಆಗಿಲ್ಲ. ಇದಕ್ಕಾಗಿಯೇ ಒಂದು ದಿನದ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ವಿವರವಾಗಿ ಹೇಳಬಹುದು. ಮುಖ್ಯವಾಗಿ ಕೂಲಿ ಹಣವನ್ನು ತಕ್ಷಣವೇ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಧರ್ಮಸಿಂಗ್ (ಜೇವರ್ಗಿ),—ಮಾನ್ಯ ಅಧ್ಯಕ್ಷರೇ, ಮಾನ್ಯ ರೆವಿನ್ಯೂ ಮಂತ್ರಿಗಳು ೬ ತಿಂಗಳಿಗೆ ಒಂದು ಸಲ ಇಂತಹ ಹೇಳಿಕೆ ಕೊಡುತ್ತಾರೆ. ಹೋದ ಸಲ ಅಧಿವೇಶನ ಸೇರಿದ ಕೊನೆಯ ದಿನ ಬರಗಾಲಕ್ಕೆ ತುತ್ತಾದ ಎಲ್ಲ ಪ್ರದೇಶಗಳಲ್ಲಿಯೂ ಕೆಲಸಗಳನ್ನು ಪ್ರಾರಂಭ ಮಾಡುವುದಾಗಿ ಇಲ್ಲಿ

ಆಶ್ವಾಸನೆ ಕೊಟ್ಟಿದ್ದರು. ಈಗ ೬ ತಿಂಗಳ ನಂತರ ಮತ್ತೆ ಇದೇ ಮಾತನ್ನು ಹೇಳುತ್ತಿದ್ದಾರೆ. ಮುಖ್ಯ ಮಂತ್ರಿಗಳು ಸಹ ಇದೇ ಮಾತನ್ನು ಹೇಳಿದ್ದಾರೆ ಪ್ರತಿ ಪಂಚಾಯಿತಿ ಮಟ್ಟದಲ್ಲಿ ಜನರಿಗೆ ಕೆಲಸ ಕೊಡುತ್ತೇವೆಂದು ಇಲ್ಲಿ ಹೇಳುತ್ತಾರೆ. ಆದರೆ ಬರಗಾಲವಿರುವ ಕಡೆ ಕೆಲಸ ತೆಗೆದುಕೊಳ್ಳಲು ೨೮೯ನೇ ಹೆಡ್ ಕೆಳಗೆ ಸ್ಕೇರ್ಸಿಟಿ ಫಂಡ್ ಎಂದು ಡಿ.ಸಿ. ಅವರ ಕಡೆ ಇವರು ಯಾವ ಫಂಡ್ಸನ್ನು ಸಹ ಕೊಟ್ಟಿಲ್ಲ. ಪ್ರತಿ ಪಂಚಾಯಿತಿ ಮಟ್ಟದಲ್ಲಿ ಒಂದು ಸಾವಿರ ಇಲ್ಲವೇ ಎರಡು ಸಾವಿರ ಜನ ಕೆಲಸ ಮಾಡುತ್ತೇವೆಂದು ಮುಂದೆ ಬಂದರೆ, ಅವರಿಗೆ ಕೆಲಸ ಒಗಿಸುವ ಅಧಿಕಾರವನ್ನು ಇವರು ತಹಶೀಲ್‌ದಾರರಿಗೆ ಕೊಟ್ಟಿಲ್ಲ. ಜಿಲ್ಲಾಧಿಕಾರಿಗಳಿಗೆ ಎಲ್ಲ ರೀತಿಯ ಅಧಿಕಾರ ಕೊಟ್ಟಿದ್ದೇವೆಂದು ಇಲ್ಲಿ ಇವರು ಹೇಳುತ್ತಾರೆ. ಆದರೆ ಅವರಿಗೆ ಹಣವನ್ನೇ ಕೊಟ್ಟಿಲ್ಲ. ಈ ಹಿಂದೆ ಇವರು ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದರು ಅವರು ಬರಗಾಲವಿರುವ ಪ್ರದೇಶಗಳಿಗೆಲ್ಲಾ ಹೋಗಿ ಅಧ್ಯಯನ ಮಾಡಿಕೊಂಡು ಬಂದು, ಜನರಿಗೆ ಕೆಲಸ ಕೊಡಲು ದಿನಕ್ಕೆ ಒಂದು ಕೋಟಿ ರೂಪಾಯಿಗಳ ಪ್ರಕಾರ ಖರ್ಚು ಮಾಡಬೇಕೆಂದು ವರದಿ ಕೊಟ್ಟರು. ಕಳೆದ ಮಾರ್ಚ್. ಏಪ್ರಿಲ್ ಮತ್ತು ಮೇ ತಿಂಗಳು ಗಳಲ್ಲಿ ಪರಿಸ್ಥಿತಿ ಬಹಳಷ್ಟು ಹದಗೆಟ್ಟು ಹೋಗಿತ್ತು. ನಮ್ಮ ಜೇವರ್ಗಿ ತಾಲ್ಲೂಕ್‌ನಲ್ಲಿಯೇ ಸುಮಾರು ೩೦ ಸಾವಿರ ಜನರು ಕೆಲಸ ಹುಡುಕಿಕೊಂಡು ಮಂಗಳೂರು ಮುಂತಾದ ಕಡೆಗಳಿಗೆ ಹೋಗಿದ್ದಾರೆ. ಗುಲ್ಬರ್ಗ ಜಿಲ್ಲೆಯಿಂದ ಸಹ ಹೋಗಿದ್ದಾರೆ. ಬೆಂಗಳೂರಿಗೆ ಸಹ ಬಂದಿದ್ದಾರೆ. ಎಲ್ಲರಿಗೂ ಕೆಲಸ ಕೊಡುವಂತಹ ಕಾರ್ಯವನ್ನು ಈ ಸರ್ಕಾರ ಮಾಡಲಿಲ್ಲ. ದನಗಳ ಮೇವಿಗೆ ತೊಂದರೆಯಾಗದಂತೆ ಎಲ್ಲ ಕಡೆ ಮೇವಿನ ಬ್ಯಾಂಕ್‌ಗಳನ್ನು ತೆರೆಯಲಾಗಿದೆ ಎಂದು ಇವರು ಹೇಳುತ್ತಾರೆ. ನನ್ನ ಕ್ಷೇತ್ರದಲ್ಲಿ ಒಂದೂ ಸಹ ಫಾಡರ್ ಬ್ಯಾಂಕ್ ಇಲ್ಲ. ಬರಗಾಲ ಬಂದಿರುವ ಕಡೆಗಳಲ್ಲಿ ವಾಟರ್-ಟೇಬಲ್ ಡೌನ್ ಆಗಿರುವುದ ರಿಂದ ಕುಡಿಯುವ ನೀರನ್ನು ಒದಗಿಸಲು ಬೇರೆ ವ್ಯವಸ್ಥೆ ಮಾಡುತ್ತೇವೆಂದು ಹೇಳಿದರು. ಮಿನಿ ವಾಟರ್ ಸಪ್ಲೈ ಸ್ಕೀಮಿಗೆ ಹಣ ಒದಗಿಸುವುದಾಗಿ ಹೇಳಿದ್ದರು. ಈ ಬಗ್ಗೆ ಎಷ್ಟು ಸ್ಕೀಮುಗಳು ಸಕ್‌ಸಸ್ ಆಗಿವೆ ಎಂಬುದನ್ನು ತಾವು ತಿಳಿಸಬೇಕು. ಈ ಯೋಜನೆಗಳಿಗೆ ಸಂಬಂಧಪಟ್ಟಂತೆ ಯಾರೂ ಸಹ ಬೆಂಗಳೂರಿಗೆ ಬಂದು ಇಲ್ಲಿನ ಚೀಫ್ ಇಂಜಿನಿಯರ್ ಅವರನ್ನು ಕಾಣುವಂತಹ ಅಗತ್ಯ ಬರಬಾರದೆಂದು ಕೊಂಡು, ಈ ಒಂದು ಅಧಿಕಾರವನ್ನು ಸಹ ಜಿಲ್ಲಾಧಿಕಾರಿಗಳಿಗೆ ಕೊಡುತ್ತೇವೆಂದು ಹೇಳಿದ್ದರು. ಆದರೆ ಅವರಿಗೆ ಈ ಅಧಿಕಾರ ಕೊಡಲಿಲ್ಲ, ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಡಿ ಎಂದು ನಾವು ಹೇಳಿದರೂ ಸಹ ಕೊಡಲಿಲ್ಲ. ಮಾನ್ಯ ಬಂಗಾರಪ್ಪನವರು ಹೇಳಿದಂತೆ ಮಳೆ ಬಂದಿದೆ ಎಂಬ ಕಾರಣದಿಂದ ಕೆಲಸಗಳನ್ನು ನಿಲ್ಲಿಸುವುದು ಸರಿಯಲ್ಲ. ನಮ್ಮ ಕಡೆ ಸಹ ಒಂದು ತಿಂಗಳ ಹಿಂದೆ ಮಳೆ ಆಯಿತು. ಆದರ ನಂತರ ಮತ್ತೆ ಮಳೆಯಾಗಿದ್ದರೆ ಸಜ್ಜೆ, ಜೋಳ ಮುಂತಾದವನ್ನು ಬೆಳೆಯಬಹುದಾಗಿತ್ತು. ಆದರೆ ಈಗ ಭೂಮಿ ಶೇಂಗಾ, ಹತ್ತಿ ಮುಂತಾದವನ್ನು ಮಾತ್ರ ಬೆಳೆಯಲು ಯೋಗ್ಯವಾಗಿದೆ. ೬ ತಿಂಗಳ ನಂತರ ಈಗ ಅಧಿವೇಶನ ಕರೆದಿದ್ದಾರೆ. ಎನ್.ಆರ್.ಇ.ಪಿ ಆರ್.ಎಲ್.ಇ.ಜಿ.ಪಿ. ಮುಂತಾದ ಕೆಲವು ಕಾರ್ಯ ಕ್ರಮಗಳಿಗೆ ಕೇಂದ್ರದಿಂದ ಹಣ ಬರುತ್ತದೆ, ಈಗ ನೀವು ಕೂಲಿ ಬಾಕಿ ಕೊಡಲು ಬಿಡುಗಡೆ ಮಾಡು ವಂತಹ ನೂರು ಲಕ್ಷ ರೂಪಾಯಿಗಳ ಬಗ್ಗೆ ಮಾನ್ಯ ಭೂಪತಿ ಅವರು ಹೇಳಿದಂತೆ ನಾಳೆ ಪತ್ರಿಕೆಗಳಲ್ಲಿ ದೊಡ್ಡದಾಗಿ ಬರುತ್ತದೆ. ಬರಗಾಲದ ನಿವಾರಣೆಗೆ ಸರ್ಕಾರದ ವತಿಯಿಂದ ಮಾನ್ಯ ಬೊಮ್ಮಾಯಿ ಅವರು ಹಣ ಕೊಡುವ ವ್ಯವಸ್ಥೆ ಮಾಡಿದ್ದಾರೆಂಬ ಬಗ್ಗೆ ದೊಡ್ಡ ಪ್ರಚಾರವಾಗುತ್ತದೆ. ಈ ಬಗ್ಗೆ ಕೇವಲ ಪ್ರಚಾರವಾದರೆ ಸಾಲದು. ವ್ಯವಸ್ಥಿತವಾಗಿ ಕೆಲಸಗಳು ನಡೆಯಬೇಕು. ಈ ಬಗ್ಗೆ ಈ ಮನೆಯ ಎಲ್ಲ ಸದಸ್ಯರು ಸಲಹೆ ಸೂಚನೆಗಳನ್ನು ಕೊಡುವ ಸಲುವಾಗಿ ಇದರ ಬಗ್ಗೆ ಕೂಲಂಕಷವಾದ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕು. ಮಾನ್ಯ ಬಂಗಾರಪ್ಪನವರು ಹೇಳಿದಂತೆ ನಮಗೆಲ್ಲಾ ಮಾತನಾಡಲು ಹೆಚ್ಚಿನ ಸಮಯ ಕೊಟ್ಟರೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಶ್ರೀ ಕೆ.ಎಚ್. ಪಾಟೀಲ್ (ಗದಗ್).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ರಾಜ್ಯದ ಬರಗಾಲದ ಬಗ್ಗೆ ಒಂದು ಸುದೀರ್ಘವಾದಂಥ ಹೇಳಿಕೆಯನ್ನು ಕೊಟ್ಟಿದ್ದಾರೆ. ಈಗ ಕೊಟ್ಟಿರುವ ಹೇಳಿಕೆಯನ್ನು ಈ ಹಿಂದೆ ಕೊಟ್ಟಿರುವ ಹೇಳಿಕೆಗೆ ಹೋಲಿಸಿ ನೋಡಿದರೆ, ಇವರು ಈ ಸದನಕ್ಕೆ ಕೊಟ್ಟಿದ್ದ ವಚನವನ್ನು ಪಾಲನೆ ಮಾಡಿಲ್ಲ ಎಂಬುದು ತಿಳಿಯುತ್ತದೆ. ಕೇಂದ್ರದಿಂದ ಬಂದಿರುವ ಹಣದ ಬಗ್ಗೆ ಮತ್ತು ಇವರು ಖರ್ಚು ಮಾಡಿರುವ ಬಗ್ಗೆ ಇಲ್ಲಿ ವಿವರಗಳನ್ನು ಕೊಟ್ಟಿದ್ದಾರೆ. ಕಳೆದ ಸಲ ಇವರು ದಿನಕ್ಕೆ ಒಂದು ಕೋಟಿ ರೂಪಾಯಿಗಳ ಪ್ರಕಾರ ಬರಗಾಲ ಇರುವವರೆಗೆ ಖರ್ಚು ಮಾಡುವುದಾಗಿ ಇಲ್ಲಿ ಆಶ್ವಾಸನೆ ಕೊಟ್ಟಿದ್ದರು. ಆದರೆ ಇವರ ಹೇಳಿಕೆ ಪ್ರಕಾರ ಯಾವ ಅಧಿಕಾರಿಯೂ ಹಣ ಖರ್ಚು ಮಾಡ

ಲಿಲ್ಲ. ನಾವು ಕೇಳಿದಾಗ ಹಣ ಇಲ್ಲ ಎಂದು ಹೇಳಿದರು. ಅನೇಕ ಕಡೆ ನಡೆದಿರುವಂತಹ ಕೆಲಸಗಳಿಗೆ ಇನ್ನೂ ಕೂಲಿ ಕೊಟ್ಟಿಲ್ಲ. ಆದರೂ ಇಂತಹ ಹೇಳಿಕೆಗಳನ್ನು ಏತಕ್ಕೆ ಇಲ್ಲಿ ಕೊಡುತ್ತಾರೋ ಗೊತ್ತಿಲ್ಲ. ಇದರ ಬಗ್ಗೆ ಇಲ್ಲಿ ಚರ್ಚೆ ಮಾಡಲು ಅವಕಾಶ ಕೊಟ್ಟಿಲ್ಲ. ಪ್ರಶ್ನೆ ಕೇಳೋಣವೆಂದರೆ, ಕಾಲವಿಂತಿಗನುಗುಣವಾಗಿ ಪ್ರಶ್ನೆ ಕೇಳಲು ಅವಕಾಶ ಕೊಡುವುದಾಗಿ ತಾವು ಹೇಳುತ್ತೀರಿ. ಆದರೆ ಇಂತಹ ಪ್ರಶ್ನೆಯನ್ನು ಕೆಲವೇ ನಿಮಿಷಗಳಲ್ಲಿ ಕೇಳಿ ಮುಗಿಸುವುದಕ್ಕಾಗುವುದಿಲ್ಲ. ಕಳೆದ ಸಲ ತಾವೇ ೧೮ ಜಿಲ್ಲೆಗಳಲ್ಲಿ ಬರಗಾಲ ಬಂದಿದೆ ಎಂದು ಹೇಳಿದ್ದಿರಿ. ಈಗ ಕೆಲವು ಕಡೆ ಮಳೆ ಆಗಿದೆ ಮತ್ತೆ ಕೆಲವು ಕಡೆ ಮಳೆ ಆಗಿಲ್ಲ. ಮಳೆ ಆಗಿರುವ ಕಡೆ ರೈತರಿಗೆ ಉಳುಮೆ ಮಾಡಲು ಬೀಜ ಮತ್ತು ಗೊಬ್ಬರದ ವ್ಯವಸ್ಥೆ ಮಾಡಿದ್ದೀರಾ ಎಂದು ಕೇಳಿದರೆ, ಅದಕ್ಕೆ ಉತ್ತರವಿಲ್ಲ. ಬರಗಾಲ ಪೀಡಿತ ಪ್ರದೇಶಗಳ ಜನರಿಗೆ ಮತ್ತೆ ಸಾಲ ಕೊಡುವ ವಿಚಾರದಲ್ಲಿ ನಬಾರ್ಡ್‌ನವರು ಎಲ್ಲ ಕಡೆ ರಿವ್ಯೂ ಮಾಡುವಂತೆ ತಿಳಿಸಿದರು. ಇದಾದ ನಂತರ ಮತ್ತೆ ಸಾಲ ಕೊಡುವ ಪ್ರಶ್ನೆ ಬಂದಾಗ ಯಾವ ಬ್ಯಾಂಕ್‌ನವರೂ ಸಹ ಸಾಲ ಕೊಡುವ ವ್ಯವಸ್ಥೆ ಮಾಡಲಿಲ್ಲ. ಕೂಲಿ ಕೆಲಸ ಮಾಡಿದವರಿಗೆ ಕೂಲಿ ಹಣ ಕೊಡಲಿಲ್ಲ. ದನಗಳ ರಕ್ಷಣೆಗೆಂದು ಎಲ್ಲ ಕಡೆ ಗೋಶಾಲೆಗಳನ್ನು ತೆರೆದು ೪೦ ಸಾವಿರ ಚಿಲ್ಲರೆ ದನಗಳನ್ನು ರಕ್ಷಣೆ ಮಾಡಿದ್ದಾಗಿ ಇಲ್ಲಿ ಹೇಳಿದ್ದೀರಿ. ನಮ್ಮಲ್ಲಿ ೨೦ ಸಾವಿರ ಹಳ್ಳಿಗಳಲ್ಲಿ ಬರ ಬಂದಿದೆ. ನಿಮ್ಮ ಲೆಕ್ಕವನ್ನೇ ತೆಗೆದುಕೊಂಡರೂ ಸಹ ಒಂದು ಹಳ್ಳಿಯ ಎರಡು ದನಗಳನ್ನು ರಕ್ಷಣೆ ಮಾಡಿದಂತೆ ಆಯಿತು. ಎಲ್ಲ ದನಗಳನ್ನು ರಕ್ಷಣೆ ಮಾಡಲು ನಿಮ್ಮ ಕೈಯಲ್ಲಿ ಆಗದ ಕಾರಣ, ಎಷ್ಟೋ ಸಾವಿರ ದನಗಳು ಕಟುಕರ ಅಂಗಡಿಗಳಿಗೆ ಹೋಗಬೇಕಾಯಿತು. ಪರಿಸ್ಥಿತಿ ಈ ರೀತಿ ಇರುವಾಗ ನೀವು ನಿಮ್ಮ ದಕ್ಷತೆಯನ್ನು ಯಾವ ರೀತಿ ತೋರಿಸುತ್ತೀರಿ ಎಂದು ನಾನು ಕೇಳುತ್ತೇನೆ?

೫-೦೦ ಪಿ.ಎಂ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ಹೇಳಿಕೆಯ ಕಡೆಯ ಭಾಗದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ ಹಿಂದಿನಂತೆಯೂ ಈ ಸಾರಿ ಕೂಡಾ ಬರಗಾಲ ಪರಿಸ್ಥಿತಿ ರಾಜ್ಯದಲ್ಲಿ ಉಂಟಾಗಿದೆ ಆದ್ದರಿಂದ ಇನ್ನೂ ಮುಂದೆ ಈ ರೀತಿಯ ಪರಿಸ್ಥಿತಿ ಬರದಂತೆ ಸರ್ಕಾರ ಎಚ್ಚರವಹಿಸುತ್ತದೆ ಎಂದು ಮತ್ತು ಪರಿಹಾರವನ್ನು ಸರ್ಕಾರ ಒದಗಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತದೆ ಎಂದು ಹೇಳಿದ್ದಾರೆ. ಈ ರೀತಿ ಹೇಳುವುದರಿಂದ ಜನರ ಹೊಟ್ಟೆ ತುಂಬಿದಂತಾಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಬೊಮ್ಮಾಯಿಯವರು ಕೋಲಾರ ಜಿಲ್ಲೆಗೆ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಸುಮಾರು ೧೧ ತಾಲ್ಲೂಕುಗಳಲ್ಲಿ ಬೆಳೆ ಇಲ್ಲ ಎನ್ನುವ ಮಾತನ್ನು ನಾವು ಹೇಳಿದ್ದೆವು. ಅಲ್ಲಿ ಹಿಂಗಾರು ಮತ್ತು ಮುಂಗಾರು ಬೆಳೆಗಳು ಇಲ್ಲ. ವರ್ಷದಲ್ಲಿ ಒಂದೇ ಒಂದು ಬೆಳೆಯನ್ನು ಮಾತ್ರ ರೈತ ತೆಗೆಯುವುದು. ಆದರೆ ಈ ಸಾರಿ ಅದು ಕೂಡ ಇಲ್ಲ. ಈಗ ಕೋಲಾರ ಜಿಲ್ಲೆಯಲ್ಲಿ ೪ ಹನಿ ಮಳೆ ಕೂಡ ಆಗಿಲ್ಲ. ಇಂತಹ ಒಂದು ಪರಿಸ್ಥಿತಿ ಇದೆ. ಎಲ್ಲಾ ಬೆಳೆಗಳು ಒಣಗಿ ಹೋಗಿವೆ. ಇತ್ಯಾದಿ ಇತ್ಯಾದಿಯನ್ನು ಹೇಳಿದಾಗ ಅವರು ನಮಗೆ ಒಂದು ಆಶ್ವಾಸನೆಯ ಮಾತನ್ನು ಹೇಳಿದರು. ಅದೇನೆಂದರೆ ಆಗಸ್ಟ್ ಎರಡನೇ ತಾರೀಖಿನ ದಿವಸ ಜಿಲ್ಲಾಧಿಕಾರಿಗಳ ಮತ್ತು ವಿಭಾಗಾಧಿಕಾರಿಗಳ ಒಂದು ಮೀಟಿಂಗ್ ಕರೆದಿದ್ದೇವೆ, ಆಗ ಎಲ್ಲಾ ವಿಚಾರಗಳನ್ನು ರಿವ್ಯೂ ಮಾಡಿ ಎಲ್ಲೆಲ್ಲಿ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಸೂಚನೆ ಕೊಡುತ್ತೇವೆಂದು. ಆದರೆ ಆ ಮೀಟಿಂಗ್ ಆದ ಮೇಲೆ ೧೫ನೇ ತಾರೀಖಿನವರೆವಿಗೂ ಕಾದು ನೋಡುವುದು ಎಂದು ಆಯಿತು. ಇದುವರೆವಿಗೂ ಯಾವುದೇ ಪರಿಹಾರ ಕಾಮಗಾರಿ ಕೆಲಸ ಯಾವುದೇ ಹಳ್ಳಿಯಲ್ಲಿ ಕೈಗೊಂಡಿಲ್ಲ. ನಮ್ಮ ಜಿಲ್ಲೆಯಿಂದ ಸುಮಾರು ಒಂದು ಲಕ್ಷ ಜನ ಹಳ್ಳಿ ಬಿಟ್ಟು ಬೆಂಗಳೂರು ಮತ್ತು ಸುತ್ತಮುತ್ತ ಪ್ರದೇಶಗಳಿಗೆ ಈಗಾಗಲೇ ಬಂದು ಬಿಟ್ಟಿದ್ದಾರೆ. ಇನ್ನು ಕೆಲವರು ತಮಿಳುನಾಡಿಗೆ ಮತ್ತು ಆಂಧ್ರ ಪ್ರದೇಶಕ್ಕೆ ವಲಸೆ ಹೋಗಿದ್ದಾರೆ. ಈ ಪರಿಸ್ಥಿತಿ ಇರುವಾಗ ನೀವು ಜನರಿಗೆ ಭಯಪಡುವುದು ಬೇಡವೆಂದು ಯಾವ ಆಧಾರದ ಮೇಲೆ ಹೇಳುತ್ತೀರಿ ? ನೀವು ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳುವ ವೇಳೆಗೆ ಪೂರ್ತಿ ಜನ ವಲಸೆ ಹೋಗಿರುತ್ತಾರೆ. ಇದು ಸರಿಯಾದುದು ಅಲ್ಲ. ಆದ್ದರಿಂದ ನಾವು ಊರುಗಳಿಗೆ ಹೋಗುವುದಕ್ಕಿಂತ ಮುಂಚಿತವಾಗಿ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡಿ. ನಾವು ಊರುಗಳಿಗೆ ಹೋದಾಗ ಜನ ಬಂದು ನಮ್ಮನ್ನು ಕೇಳಿದರೆ ಸೂಚನೆ ಕೊಟ್ಟಿದ್ದಾರೆಂದಾದರೂ ಹೇಳಿಕೊಳ್ಳೋಣ. ಇನ್ನು ನಮ್ಮ ಜಿಲ್ಲೆಯ ಎಲ್ಲಾ ಶಾಸಕರು ಸೇರಿ ಒಂದು ಗಮನ ಸೆಳೆಯುವ ಸೂಚನೆಯನ್ನು ತಂದಿದ್ದೇವೆ. ಅದು ನಾಳೆ ಬರುವ ಸಾಧ್ಯತೆಗಳು ಇವೆ. ಇದರ ಬಗ್ಗೆ ತಾವು ಈಗ

ಒಂದು ತೀರ್ಮಾನ ತೆಗೆದುಕೊಳ್ಳಿ. ತಮ್ಮ ಒಂದು ಲೆಕ್ಕಚಾರದ ಪ್ರಕಾರ ಸುಮಾರು ೯ ಜಿಲ್ಲೆಗಳಲ್ಲಿ ಕ್ಷಾಮ ಪರಿಸ್ಥಿತಿ ಇದೆ ಎಂದು ಹೇಳಿದ್ದೀರಿ. ರಾಜ್ಯದ ಕೆಲವು ಕಡೆಗಳಲ್ಲಿ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಆದ್ದರಿಂದ ದಯಮಾಡಿ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟು ಪರಿಹಾರ ಕಾಮಗಾರಿ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುವಂತೆ ಮಾಡಿ. ಬರೀ ಆಶ್ವಾಸನೆಗಳನ್ನು ಕೊಡುವುದರಿಂದ ಆ ಬಡ ಜನರ ಹೊಟ್ಟೆ ತುಂಬುವುದಿಲ್ಲ ಮಾನ್ಯ ಧರ್ಮಸಿಂಗ್‌ರವರು ಮತ್ತು ಭೂಪತಿಯವರು ಹೇಳಿದ ಹಾಗೆ ಇಲ್ಲಿ ಏನೋ ನಡೆದು ಹೋಯಿತು ಎಂದು ಪತ್ರಿಕೆಗಳಲ್ಲಿ ಬರುತ್ತದೆ. ಆದರೂ ಹಳ್ಳಿಗಳ ಜನರಿಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಈಗ ತಾವೇನು ಒಂದು ಹೇಳಿಕೆ ಕೊಟ್ಟಿದ್ದೀರಿ ಅದು ವೇಗ್ ಆಗಿದೆ. ಈಗ ತಾವು ಕೊಟ್ಟಿರುವ ಹೇಳಿಕೆ ತೆಲುಗಿನಲ್ಲಿ ಸೂಸ್ತಾಂ ಚೇಸ್ತಾಂ ಎಂದು ಹೇಳುವಂತಿದೆ, ಅಂದರೆ ನೋಡೋಣ, ಮಾಡೋಣ ಎಂದು ಹೇಳಿದ ಹಾಗೆ. ಅದು ಬೇಡ. ಸ್ಪಷ್ಟವಾದ ಒಂದು ಹೇಳಿಕೆ ಈ ಸದನದಲ್ಲಿ ಕೊಡಬೇಕು. ಜನರು ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಇಷ್ಟು ಹೇಳಿ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಚಂದ್ರಶೇಖರ ಎಂ. ಮಾಮನಿ (ಸೌಂದತ್ತಿ).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಬೊಮ್ಮಾಯಿಯವರು ಬರಗಾಲ ಪರಿಸ್ಥಿತಿಯ ಬಗ್ಗೆ ಒಂದು ಸವಿಸ್ತಾರವಾದಂಥ ವರದಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈ ಬರಗಾಲ ಪರಿಸ್ಥಿತಿ ದುರಾದೃಷ್ಟವಶಾತ್ ನಮ್ಮ ರಾಜ್ಯದಲ್ಲಿ ಕಳೆದ ನಾಲ್ಕೈದು ವರ್ಷಗಳಿಂದಲೂ ಇದೆ. ಕೆಲವು ಭಾಗಗಳಲ್ಲಿ ಮಳೆ ಆಗಿಲ್ಲ, ಉದಾಹರಣೆಗೆ ಹೇಳುವುದಾದರೆ ನಮ್ಮ ಸೌಂದತ್ತಿ ತಾಲ್ಲೂಕಿನಲ್ಲಿ ಸುಮಾರು [illegible]೪ ಹಳ್ಳಿಗಳಲ್ಲಿ ಇನ್ನು ಬಿತ್ತನೆ ಕೆಲಸ ಆಗಿಲ್ಲ. ಮಲಪ್ರಭಾ ರಿಜರ್ವಾಯರ್‌ನಲ್ಲಿ ಸುಮಾರು ೧೫ ಟಿ.ಎಂ.ಸಿ.ಯಷ್ಟು ನೀರು ಸಹ ಕಡಿಮೆಯಾಗಿದೆ. ಜೂನ್ ತಿಂಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಪರಿಹಾರ ಕಾಮಗಾರಿ ಕೆಲಸಕಾರ್ಯಗಳು ಬಂದ್ ಆದವು. ಆ ಮೇಲೆ ಅಲ್ಪಸ್ವಲ್ಪ ಮಳೆ ಆಯಿತು. ಆಗಸ್ಟ್ ತಿಂಗಳಲ್ಲಿ ಸಂಪೂರ್ಣವಾಗಿ ಮಳೆಯಾಗಿಲ್ಲ, ಆದ್ದರಿಂದ ಆದಷ್ಟು ಬೇಗ ಪರಿಹಾರ ಕಾಮಗಾರಿ ಕೆಲಸಕಾರ್ಯಗಳನ್ನು ತೆಗೆದುಕೊಂಡು ಬಡ ಜನರಿಗೆ ಉದ್ಯೋಗವನ್ನು ಕೊಡಬೇಕೆಂದು ಕೇಳಿಕೊಂಡು ನನ್ನ ನಾಲ್ಕು ಮಾತಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಶ್ರೀ ರತ್ನಾಕರ್‌ರವರೇ ಮಾತನಾಡಿ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ನಾನು ಪಟ್ಟಮಕ್ಕಿ ರತ್ನಾಕರ್‌ರವರನ್ನು ಕರೆದಿದ್ದೇನೆ ನಿಮ್ಮ ಪಾಳಿ ಬಂದಾಗ ನೀವು ಮಾತನಾಡುವಿರಂತೆ.

ಶ್ರೀ ಪಟ್ಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ ತಮ್ಮ ಉದಾರತೆಗೆ ನಾನು ವಂದಿಸಿ ಮಾತನಾಡುವುದಕ್ಕೆ ತಮ್ಮ ಅಪ್ಪಣೆಯನ್ನು ಕೋರುತ್ತೇನೆ. ಬಹುಶಃ ನಮ್ಮ ತೀರ್ಥಹಳ್ಳಿ ತಾಲ್ಲೂಕು ಮಲೆನಾಡು ಪ್ರದೇಶವಾದ್ದರಿಂದ ಅಲ್ಲಿ ಬರಗಾಲ ಪರಿಸ್ಥಿತಿ ಇರುವುದಿಲ್ಲವೆಂದೂ ಅಲ್ಲಿ ವಿಪರೀತವಾದ ಮಳೆ ಬಂದಿದೆಯೆಂದೂ ಬೆಳೆ ಚೆನ್ನಾಗಿ ಆಗಿದೆಯೆಂದೂ ಅಲ್ಲಿನ ಜನರ ಬದುಕು ಹಸನಾಗಿದೆ ಎಂದೂ ಯಾರಾದರೂ ತಿಳಿದುಕೊಂಡಿದ್ದರೆ ಅದು ತಪ್ಪು ಕಲ್ಪನೆಯಾದೀತು ಎಂದು ನಾನಾದರೂ ಮಾನ್ಯ ಸಚಿವರಿಗೂ ಮತ್ತು ಮಾನ್ಯ ಸದಸ್ಯರಿಗೂ ಮನವರಿಕೆ ಮಾಡಿಕೊಟ್ಟರೆ ತಪ್ಪಾಗುವುದಿಲ್ಲವೆಂದು ತಿಳಿದುಕೊಂಡಿದ್ದೇನೆ. ನಮ್ಮ ಭಾಗದಲ್ಲಿ ಕಾಲಕಾಲಕ್ಕೆ ಸರಿಯಾಗಿ ಮಳೆಯಾಗದೆ ತೀರ್ಥಹಳ್ಳಿ, ಹೊಸನಗರ, ಸಾಗರ ಕಡೆಗಳಲ್ಲಿ ಮಳೆಯಾಗಿದೆ ಎಂದೂ ಬಿತ್ತನೆ ಮಾಡಿದರೂ ಸಹ ವಿಪರೀತ ಮಳೆಯಿಂದಾಗಿ ನಾವು ಬಿತ್ತನೆ ಮಾಡಿದ ಬೀಜಗಳು ಸಂಪೂರ್ಣವಾಗಿ ನಾಶವಾಗಿವೆ. ನಮ್ಮ ಭಾಗದಲ್ಲಿ ಸತತವಾಗಿ ಒಂದು ತಿಂಗಳ ಕಾಲ ಮಳೆ ಆಯಿತು. ಬಿತ್ತನೆ ಮಾಡುವಂತಹ ಕಾಲದಲ್ಲಿ ಹಾಕಿದ ಗೊಬ್ಬರ ಬೀಜ ಎಲ್ಲಾ ನಾಶವಾಗಿ ಹೋಯಿತು. ಮತ್ತು ನೆರೆಯ ಹಾವಳಿಯಿಂದ ವಿಪರೀತವಾದಂಥ ನಷ್ಟವನ್ನು ಅಲ್ಲಿನ ಜನತೆ ಅನುಭವಿಸಿದ್ದಾರೆ. ಆದರೆ ಈಗ ಆ ಪ್ರದೇಶದಲ್ಲಿ ಒಂದು ಹನಿ ಮಳೆ ಸಹ ಇಲ್ಲ. ಅಲ್ಪ ಸ್ವಲ್ಪ ಬೀಜ ಬಿತ್ತನೆಯಾಗಿ ಮೊಳಕೆ ಬಂದಿದ್ದರೆ ಆ ಸಸಿಯೆಲ್ಲ ಇವತ್ತು ನಾಶವಾಗಿದೆ. ಈ ವಿಚಾರವನ್ನು ಮಾನ್ಯ ಸದಸ್ಯರಾದಂಥ ಶ್ರೀ ಮಾನ್ ಬಂಗಾರಪ್ಪನವರು ಸಹ ಪ್ರಸ್ತಾಪ ಮಾಡಿದರು. ತೀರ್ಥಹಳ್ಳಿ ಸಾಗರ, ಮತ್ತು ಹೊಸನಗರ ಹಾಗೂ ಚಿಕ್ಕಮಗಳೂರು ಈ ಮಲೆನಾಡು ಸರಹದ್ದಿನಲ್ಲಿ ಬರತಕ್ಕಂಥ ಪ್ರದೇಶಗಳಲ್ಲಿ ಇದೇ ಒಂದು ಪರಿಸ್ಥಿತಿ ಉಂಟಾಗಿದೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಜಿಲ್ಲೆಯನ್ನು ಕ್ಷಾಮ ಪೀಡಿತ ಪ್ರದೇಶವೆಂದು ಘೋಷಣೆ ಮಾಡಿ ಎಂದು ಅಲ್ಲಿನ ಅಧಿಕಾರಿಗಳನ್ನು

ಕೇಳಿದಾಗ ಅವರು ಹೇಳುತ್ತಾರೆ ಸ್ವಾಮಿ ನಾವೇನು ಮಾಡುವುದು ಸರ್ಕಾರದ ಒಂದು ಅಂಕಿಅಂಶಗಳ ಪ್ರಕಾರ ಇಂತಿಷ್ಟು ಪ್ರಮಾಣ ಮಳೆಯಾದರೆ ಆ ಪ್ರದೇಶವನ್ನು ಕ್ಷಾಮಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಡಿ ಎಂದು ಹೇಳುತ್ತಾರೆಂದು ನಿಜವಾಗಿ ಬರಗಾಲ ಪರಿಸ್ಥಿತಿ ಇರುವಂತಹ ಜಾಗಗಳಲ್ಲಿ ಜನ ಎಷ್ಟು ಕಷ್ಟ ಪಡುತ್ತಾರೋ ಅದಕ್ಕಿಂತ ಹೆಚ್ಚು ಕಷ್ಟವನ್ನು ಈ ಭಾಗದ ಜನ ಪಡುತ್ತಿದ್ದಾರೆ. ಬೇಸಿಗೆ ಕಾಲದಲ್ಲಿ ಅಂತರ್‌ಜಲ ನೀರಿನ ಮಟ್ಟ ಕೆಳಗಡೆ ಹೋಗಿ ಅಲ್ಲಿ ಬಾವಿಗಳನ್ನು ತೋಡಿದರೆ ನೀರು ಸಿಗುವುದೇ ಇಲ್ಲ ಕೊಳವೇ ಬಾವಿಗಳು ತೋಡಿದರೂ ಸಹ ನೀರು ಸಿಗುವುದಿಲ್ಲ. ಮಾನ್ಯ ಮಂತ್ರಿಗಳನ್ನು ಹೋಗಿ ನಮ್ಮ ಭಾಗದಲ್ಲಿ ಕೊಳವೆ ಭಾವಿಗಳನ್ನು ತೋಡಿಸಿ ಕೊಡಿ ಎಂದು ಕೇಳಿದರೆ ಅವರು ನಿಮಗೇತಕ್ಕೆ ಬೇಕು ಎಂದು ಕೇಳುತ್ತಾರೆ. ಈ ಪರಿಸ್ಥಿತಿ ನಮಗೆ ಇದೆ. ಈಗ ಮಾನ್ಯ ಮಂತ್ರಿಗಳು ಕೊಳವೆ ಬಾವಿಗಳ ಬಗ್ಗೆ ಕೊಟ್ಟಿರುವ ಅಂಕಿಅಂಶಗಳನ್ನು ನೋಡಿದರೆ ಇದರಲ್ಲಿ ಕೆಟ್ಟು ಹೋಗಿರುವ ಕೊಳವೆ ಬಾವಿಗಳ ಸಂಖ್ಯೆಯೇ ಜಾಸ್ತಿ ಇದೆ.

ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲೂ ಬರಗಾಲವನ್ನು ಕಂಡಿದ್ದೇವೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಹೊಸನಗರ, ತೀರ್ಥಹಳ್ಳಿ ಕಡೆಗಳಲ್ಲಿನ ಎಷ್ಟೋ ರೈತರು ಅರ್ಧದಷ್ಟು ಗದ್ದೆಗಳನ್ನು ಕಟಾವು ಮಾಡದೇ ಹಾಗೆಯೇ ಬಿಟ್ಟಿದ್ದಾರೆ. ಹಾಗೆಯೇ ದನಗಳು ತಿಂದುಕೊಂಡು ಹೋಗಲಿ ಎಂದು ಬಿಟ್ಟುಬಿಟ್ಟಿದ್ದಾರೆ. ಆದುದರಿಂದ, ಮಾನ್ಯ ಸಚಿವರು ಈ ತಾಲ್ಲೂಕುಗಳ ಬಗ್ಗೆ ಸಹಾನುಭೂತಿಯಿಂದ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಕೊಳವೆ ಬಾವಿಗಳು, ಕಿರುನೀರಾವರಿ ಯೋಜನೆಗಳು. ತೆರೆದ ಬಾವಿಗಳು ಕೊಡುವುದರ ಜೊತೆಗೆ, ನಮ್ಮ ಪ್ರದೇಶದಲ್ಲಿ ಸಕಾಲಕ್ಕೆ ಮಳೆ ಆಗಿದೆಯೋ, ಅದರ ಪ್ರತಿಫಲವನ್ನು ರೈತರು ಪಡೆದಿದ್ದಾರೆಯೋ ಎಂಬುದನ್ನು ಗುರುತಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ (ಬೀರೂರು).—ಮಾನ್ಯ ಅಧ್ಯಕ್ಷರೇ, ಬರಗಾಲದ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ, ಸರ್ಕಾರ ಶರವೇಗದಲ್ಲಿ, ಸಾಕಷ್ಟು ಮಟ್ಟಿಗೆ ಕೆಲಸ ಮಾಡಿದೆ ಎನ್ನುವ ಮಾತನ್ನು ಸಮರ್ಥಿಸುತ್ತೇನೆ. ಒಂದು ಮಾತನ್ನು ಹೇಳುವುದಾದರೆ, ಸಾಮಾನ್ಯವಾಗಿ, ಒಂದು ವರ್ಷ ಬರಗಾಲ ಬಂದರೆ, ಒಂದು ಜಿಲ್ಲೆಯಲ್ಲಿ ೨-೩ ತಾಲ್ಲೂಕು, ಹಾಗೂ ಹೋಬಳಿಗಳಲ್ಲಿ ಈ ಬರಗಾಲವನ್ನು ನೋಡುತ್ತಿದ್ದೇವೆ. ಸಮಗ್ರವಾಗಿ, ೧೯೭೩-೭೪, ೧೯೭೪-೭೫ ಮತ್ತು ೧೯೭೫-೭೬ ಈ ಮೂರು ವರ್ಷಗಳಲ್ಲೂ ಬಂದಿರುವಂಥ ಕ್ಷಾಮವನ್ನು, ಸರ್ಕಾರ ಎಷ್ಟು ಮಟ್ಟಿಗೆ ಎದುರಿಸಿದೆ ಎಷ್ಟರಮಟ್ಟಿಗೆ ಕಾರ್ಯನಿರ್ವಹಿಸಿದೆ ಎನ್ನುವುದನ್ನು ಆ ಭಾಗದ ಹಿರಿಯ ಕಿರಿಯ ಸದಸ್ಯರೂ ಕೂಡ ಸ್ವಾಗತಿಸಬೇಕು. ಕುಡಿಯುವ ನೀರಿನ ವ್ಯವಸ್ಥೆಯಲ್ಲಿ . ಸರ್ಕಾರ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಿದೆ ಎಂಬುದು ಅವರಿಗೂ ಗೊತ್ತಿರತಕ್ಕ ವಿಚಾರ. ಆದರೆ ಸರ್ಕಾರ ಎಷ್ಟು ಒಳ್ಳೆಯ ಕೆಲಸ ಮಾಡಿದರೂ ಕೂಡ, ಅದು ಆಗಲಿಲ್ಲ; ಇದು ಆಗಲಿಲ್ಲ ಎಂದು ಆ ಕಡೆಯ ಸದಸ್ಯರು ಹೇಳುತ್ತಾರೆ. ಸ್ವಾಮಿ, ೧೯೭೦ನೇ ಇಸವಿಯಿಂದಲೂ ನಾವು ಕ್ಷಾಮವನ್ನು ನೋಡಿದ್ದೇವೆ. ಎಷ್ಟು ಜಾನುವಾರುಗಳು ಸತ್ತು ಹೋದವು ಕುಡಿಯಲು ನೀರು ಇಲ್ಲದೆ ಎಷ್ಟು ಜನಗಳು ಸತ್ತಿದ್ದಾರೆ ಎಂಬ ಅಂಕಿಅಂಶಗಳನ್ನು ಅವರು ಒದಗಿಸಿಕೊಡುತ್ತಾರೆಯೋ ? ಅವರು ಇದನ್ನು ಅರ್ಥಮಾಡಿಕೊಳ್ಳಬೇಕು. ಸರ್ಕಾರ ಎಷ್ಟರಮಟ್ಟಿಗೆ ಬರಗಾಲ ಪರಿಸ್ಥಿತಿಯನ್ನು ಎದುರಿಸಿದೆ, ಯಾವ ರೀತಿ ಕಾರ್ಯನಿರ್ವಹಿಸಿದೆ ಎಂಬುದನ್ನು ತಿಳಿದುಕೊಳ್ಳಬೇಕು. ರಾಜ್ಯದಿಂದ ೨೪ ಜನರನ್ನು ಕೇಂದ್ರಕ್ಕೆ ಆರಿಸಿ ಕಳುಹಿಸಿದ್ದಾರೆ. ಅವರು ಇವತ್ತು ರಾಜ್ಯದ ಪರಿಸ್ಥಿತಿಯನ್ನು ತಿಳಿದುಕೊಂಡು, ರಾಜ್ಯದ ಬರಗಾಲಕ್ಕೆ ಕೇಂದ್ರದಿಂದ ಸಹಾಯ ಪಡೆಯಲು ಏನು ಮಾಡಿದರು, ತಾವು ಹೇಳಬೇಕು... ...

(ಗೊಂದಲ)

ಶ್ರೀ ಕೆ. ಹೆಚ್ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್, ಈ ಸದನದೊಳಗೆ ಪಾರ್ಲಿಮೆಂಟ್ ಸದಸ್ಯರ ಬಗ್ಗೆ ಟೀಕೆ ಮಾಡುವುದಕ್ಕೆ ಬರುತ್ತದೆಯೇ, ತಾವು ದಯಮಾಡಿ. ರೂಲಿಂಗ್ ಕೊಡಬೇಕು.

ಅಧ್ಯಕ್ಷರು.—ಮಾನ್ಯ ಲಕ್ಷ್ಮಯ್ಯನವರೇ ತಾವು ದಯವಿಟ್ಟು ಡೀವಿಯೇಷನ್ ಮಾಡಬಾರದು. ಬರಗಾಲವನ್ನು ಎದುರಿಸಲು ನೀವಿಬ್ಬರೂ ಹೋರಾಡಬೇಕು.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಸಾಲದ ಮರುಪಾವತಿ ಬಗ್ಗೆ ಸರ್ಕಾರ ಮನ್ನಾ ಮಾಡಿದೆ. ಈ ಮೂರು ವರ್ಷದ ಅವಧಿಯಲ್ಲಿ ಸಹಕಾರ ಸಂಘಗಳು ಕೊಟ್ಟಂಥ ಸಾಲಗಳು ಮರುಪಾವತಿ ಆಗಿಲ್ಲ, ಸರ್ಕಾರ ಕೊಟ್ಟಂಥ ಸಾಲಗಳು ಮರುಪಾವತಿ ಆಗಿಲ್ಲ. ರಾಜ್ಯದ ೧೯ ಜಿಲ್ಲೆಗಳಲ್ಲೂ ವ್ಯಾಪಕವಾಗಿ ಕಂದಾಯವನ್ನು ಮನ್ನಾ ಮಾಡಿದೆ. ಇಂತಹ ಸಂದರ್ಭದಲ್ಲಿ ಉತ್ಪಾದನೆ ಇಲ್ಲದೇ ಹೋದರೂ ಸರ್ಕಾರದವರು ಎಷ್ಟರಮಟ್ಟಿಗೆ ಕೆಲಸವನ್ನು ನಿರ್ವಹಿಸಿದ್ದಾರೆ, ಎಷ್ಟರಮಟ್ಟಿಗೆ ಕಷ್ಟಕಾಲದಲ್ಲಿ ಜನಗಳಿಗೆ ನೀರು, ಜಾನುವಾರುಗಳಿಗೆ ಮೇವು ಒದಗಿಸುವ ಕಡೆ ಚಿಂತನೆ ಮಾಡಿದ್ದಾರೆ ಎಂಬುದು ಗೊತ್ತಿದೆ. ಇದನ್ನು ನಾನು ಸಮರ್ಥನೆ ಮಾಡುತ್ತೇನೆ. ರಾಜ್ಯಾದ್ಯಂತ ವ್ಯಾಪಕವಾಗಿ ಮಾಡದೇ ಹೋದರೂ, ಅಲ್ಪಸ್ವಲ್ಪವಾದರೂ, ಜನಗಳಿಗೆ, ಜಾನುವಾರುಗಳಿಗೆ, ನೀರು, ಮೇವು ಒದಗಿಸಿ, ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿರುವುದರ ಬಗ್ಗೆ ಮಾನ್ಯ ರಾಮಕೃಷ್ಣ ಹೆಗಡೆ ಯವರು ಮತ್ತು ಮಾನ್ಯ ಬೊಮ್ಮಾಯಿಯವರ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ.

ಕೊನೆಯದಾಗಿ, ಸರ್ಕಾರ ಮಾಡಿರತಕ್ಕಂಥ ಕೆಲಸಗಳ ಬಗ್ಗೆ ಸಮರ್ಥನೆ ಮಾಡುತ್ತಾ, ಒಳ್ಳೆಯದು ಮಾಡಿದೆಯೋ, ಕೆಟ್ಟದ್ದು ಮಾಡಿದೆಯೋ ಎಂಬುದರ ಬಗ್ಗೆ ಬರತಕ್ಕಂಥ ಮಂಡಲ್ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ನಿಮ್ಮ ಹಾಗೂ ನಮ್ಮ ಫಲಿತಾಂಶಗಳನ್ನು ನೋಡಿ ತೀರ್ಮಾನ ಮಾಡಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇಂತಹ ಕ್ಲಾರಿಫಿಕೇಷನ್ ನಾವು ಎಂದೂ ಕೇಳಿರಲಿಲ್ಲ. ಮೂವತ್ತು ವರ್ಷಗಳಿಂದ, ಲಕ್ಷ್ಮಯ್ಯನವರು ಕೇಳಿದಂತಹ ಕ್ಲಾರಿಫಿಕೇಷನ್ ಕೇಳಿರಲಿಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಅಧ್ಯಕ್ಷರೇ, ನಾವು ಈ ಬರಗಾಲದ ಪರಿಸ್ಥಿತಿ ಯನ್ನು ಪಕ್ಷಾತೀತವಾಗಿ ಬಗೆಹರಿಸಬೇಕಾಗಿದೆ. ಇವತ್ತು, ನಾವು ಏನು ಕಷ್ಟವನ್ನು ಎದುರಿಸುತ್ತಿದ್ದೇ ವೆಂಬುದು ಅವರಿಗೆ ಗೊತ್ತಿದೆ, ಅವರು ಏನು ಕಷ್ಟವನ್ನು ಅನುಭವಿಸುತ್ತಿದ್ದಾರೆ ಎಂಬುದು ನಮಗೂ ಗೊತ್ತಿದೆ. ಮಂಡಲ್ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ ಚುನಾವಣೆ ಗೆಲ್ಲುವ ಪ್ರಶ್ನೆ ಬೇರೆ. ಬರುವ ನವೆಂಬರ್ ತಿಂಗಳಲ್ಲಿ ಚುನಾವಣೆ ಮಾಡುತ್ತೇವೆಂದು ಹೇಳುತ್ತಿದ್ದಾರೆ, ಅದಕ್ಕೆ ನಾವೆಲ್ಲಾ ತಯಾರಾಗಿದ್ದೇವೆ. ಅದರಲ್ಲಿ ಜನರು ತೀರ್ಪು ಕೊಡುತ್ತಾರೆ.

ಸ್ವಾಮಿ, ಈಗ ನಮಗೆ ಬಂದಿರುವ ಕಷ್ಟ ಇಷ್ಟೆ. ಈ ಅಸೆಂಬ್ಲಿ ಮುಗಿದ ಮೇಲೆ ನಾವೆಲ್ಲಾ ನಮ್ಮ ಕ್ಷೇತ್ರಕ್ಕೆ ಹೋಗಬೇಕು. ಇವತ್ತು ಪತ್ರಿಕೆಗಳಲ್ಲಿ ದೊಡ್ಡದಾಗಿ ಹಾಕುತ್ತಾರೆ. ಇವತ್ತು ನಾವು ಎಲ್ಲಿ ಕೆಲಸ ಕೊಡಬೇಕು. ಡಿ.ಡಿ.ಸಿ. ಮೀಟಿಂಗ್‌ನಲ್ಲಿ ಕೆಲಸಗಳನ್ನು ನಿಲ್ಲಿಸಿ ಎಂದು ಹೇಳಿದ್ದಾರೆ. ಬರ ಪರಿಹಾರ ಕೆಲಸಗಳನ್ನು ನಿಲ್ಲಿಸಿದರೆ ನಾವು ಏನು ಮಾಡಬೇಕು ? ಇವತ್ತು ನೀವು ನಿಮ್ಮ ಕ್ಷೇತ್ರಕ್ಕೆ ಹೋಗಿ ಏನು ಮಾಡುತ್ತೀರಿ ? ಈ ವಿಚಾರವನ್ನು ನಾನು ರಾಜಕೀಯವಾಗಿ ಮಾತನಾಡುವುದಿಲ್ಲ, ಈ ಬಗ್ಗೆ ನಮ್ಮ ಸಹಕಾರವೂ ಇದೆ. ಹಿಂದಿನ ವರ್ಷ ನಮ್ಮ ತಾಲ್ಲೂಕಿನಲ್ಲಿ ಕೆಲವು ಭಾಗಗಳಲ್ಲಿ ಒಳ್ಳೆಯ ಮಳೆ ಬೆಳೆ ಆಗಿದ್ದು, ನೂರು ಲೋಡ್ ಮೇವನ್ನು ಕಳುಹಿಸಿಕೊಟ್ಟಿದ್ದೇವೆ. ಇದು ಮಾನ್ಯ ಬೊಮ್ಮಾಯಿಯವರಿಗೂ ಗೊತ್ತಿದೆ. ಗುಬ್ಬಿ ತಾಲ್ಲೂಕಿನ ಮೂರು ಹೋಬಳಿಗಳಲ್ಲಿ ಈ ವರ್ಷ ತೊಂದರೆಯಾಗಿದೆ. ಚಂದ್ರಶೇಖರಪುರ ಹೋಬಳಿಯಲ್ಲಿ ಹೋದವರ್ಷ ಬಂಪರ್ ಕ್ರಾಪ್ ಆಗಿತ್ತು. ಈ ವರ್ಷ ಇವತ್ತು, ನಾಳೆ ಮಳೆ ಆಗದೆಹೋದರೆ, ಬೆಳೆಗಳೆಲ್ಲಾ ನಾಶವಾಗುತ್ತವೆ. ಹಾಗೆಯೇ ಕಡಬ, ಚೇಳೂರು ಹೋಬಳಿಗಳಲ್ಲೂ ಪೂರ್ಣವಾಗಿ ತೊಂದರೆಯಾಗಿದೆ. ಕಾಮಗಾರಿ ಕೆಲಸಗಳನ್ನು ತೆಗೆದು ಕೊಳ್ಳಬೇಕು. ಹಾಗೆಯೇ ತಿಪಟೂರು ತಾಲ್ಲೂಕಿನಲ್ಲೂ ಪಾವಗಡ ತಾಲ್ಲೂಕಿನಲ್ಲಿ ಮಳೆ ಇಲ್ಲದೆ ಮಂಡ್ಯ ಜಿಲ್ಲೆಯ ಕಡೆಗೆ ಜನ ಬರುತ್ತಿದ್ದಾರೆ. ಚಿಕ್ಕನಾಯ್ಕನಹಳ್ಳಿ ತಾಲ್ಲೂಕಿನಲ್ಲಿ ಮಳೆ ಇಲ್ಲ. ಮಧುಗಿರಿ ತಾಲ್ಲೂಕಿನ ಎರಡು ಹೋಬಳಿಗಳಲ್ಲಿ ಮಳೆ ಇಲ್ಲ. ಯಾವ ರೀತಿಯಾಗಿ, ಸಮರ್ಪಕವಾಗಿ ಕಾರ್ಯ ನಿರ್ವಹಿಸಬೇಕೆಂಬುದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಈಗ ಸರ್ಕಾರದವರು ಬರಗಾಲ ಕೆಲಸಗಳ ಬಗ್ಗೆ ಲಿಸ್ಟ್ ಕೇಳಿದ್ದಾರೆಂದು ಗೊತ್ತಾಯಿತು. ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳು, ಹೊಸದಾಗಿ ಬಂದಿದ್ದಾರೆ. ಯಾವ ಲಿಸ್ಟ್ ಕಳುಹಿಸಿದ್ದಾರೋ ನನಗೆ ಗೊತ್ತಿಲ್ಲ. ಯಾವ ರಿಪೋರ್ಟ್ ಮೇಲೆ ಕಳುಹಿಸಿದ್ದಾರೋ ಗೊತ್ತಿಲ್ಲ. ಅವರು ಯಾವ ಭಾಗಕ್ಕೂ ಹೋಗಿ ವೀಕ್ಷಣೆ ಮಾಡಿದಂಥ ವಿಷಯ ನನಗೆ ಗೊತ್ತಾಗಲಿಲ್ಲ. ಎಲ್ಲೂ ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಿಲ್ಲ. ಎಲ್ಲೂ ಹೋಗಿಲ್ಲ. ಯಾವ

ರಿಪೋರ್ಟ್ ಆಧಾರದ ಮೇಲೆ ಇದನ್ನು ಕಳುಹಿಸಿದ್ದಾರೆ ಎಂದೂ ನನಗೆ ಅರ್ಥವಾಗಿಲ್ಲ. ಮಳೆ ಎಲ್ಲೆಲ್ಲಿ ಆಗಿಲ್ಲ ಎಂಬುದನ್ನು ನೀವು ಬರೆದುಕೊಂಡು ವೆರಿಫೈ ಮಾಡಿ ಸೂಕ್ತವಾದ ವ್ಯವಸ್ಥೆ ಮಾಡಲು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಬರೀ ಅಂಕಿಅಂಶಗಳ ದೊಂಬರಾಟದಿಂದ ಏನೂ ಪ್ರಯೋಜನ ಆಗುವುದಿಲ್ಲ. ೨೧೦ ಕೋಟಿ ರೂಪಾಯಿನಲ್ಲಿ ಕೇವಲ ೧೬ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇದು ಯಾರನ್ನು ಸಮಾಧಾನಪಡಿಸುವುದಕ್ಕೆ ಕೊಟ್ಟಿರತಕ್ಕಂಥ ಅಂಕಿಅಂಶಗಳು ? ನಮ್ಮ ಜಿಲ್ಲೆಯ ಒಳಗೆ ೨೯.೬೭ ಲಕ್ಷ ರೂಪಾಯಿ ಏನೋ ನೀವು ಇನ್ನೂ ಕೊಡಬೇಕು. ಬರಗಾಲದ ಕೆಲಸ ಪ್ರಾರಂಭ ಮಾಡುವುದು ಏತಕ್ಕೆ ? ಹೊಟ್ಟೆ ಹಸಿವಾಗಿರುವವರಿಗೆ ದಿನಗೂಲಿ ಕೊಡಬೇಕೆಂದು. ಮೂರು ತಿಂಗಳ ಕೂಲಿ ಕೊಡುವುದಕ್ಕೇ ಆಗಿಲ್ಲ. ನಾವೆಲ್ಲಾ ಅವರಿಗೆ ಉತ್ತರ ಕೊಡಬೇಕು. ಮೊದಲು ಮೂರು ತಿಂಗಳ ಕೂಲಿಯನ್ನು ಕೊಡಿಸಿಕೊಡಿ. ಎಲ್ಲೆಲ್ಲಿ ತೊಂದರೆಯಾಗಿದೆ ಅಲ್ಲಿ ಜನಗಳಿಗೆ ಕೆಲಸ ಕೊಡತಕ್ಕಂಥ ಯೋಜನೆ ಇಮ್ಮೀಡಿಯಟ್ ಆಗಿ ಆಗಬೇಕು. ಈಗ ಬರಗಾಲ ಕೆಲವು ಕಡೆ ಪ್ರಾರಂಭವಾಗಿದೆ. ಪಾವಗಡ ತಾಲ್ಲೂಕಿನ ಜನ ವಲಸೆ ಹೋಗುತ್ತಿದ್ದಾರೆ. ಮಂಡ್ಯ ಹಾಗೂ ಶಿವಮೊಗ್ಗ ಕಡೆ ಹೋಗುತ್ತಿದ್ದಾರೆ. ಅಲ್ಲಿ ಮಳೆ ಆಗಿದೆ ಎಂದು ಹೋಗುತ್ತಿದ್ದಾರೆ. ಕನ್‌ಫ್ಯೂಸ್ ಆಗಿ ಜನ ಎಲ್ಲೆಲ್ಲೋ ಅಲೆದಾಡುವುದು ಬೇಡ. ನಿರ್ದಿಷ್ಟವಾಗಿ ಇಷ್ಟು ಕೊಡುತ್ತೇವೆ ಎಂದು ಹೇಳಿ. ಇಂಥಿಂಥ ಕಡೆ ಇಂಥಿಥ ಕೆಲಸ ತೆಗೆದುಕೊಳ್ಳುತ್ತೇವೆ ಎಂದು ಜನತೆಗೆ ಆಶ್ವಾಸನೆಯನ್ನು ಕೊಡಬೇಕೆಂದು ಹೇಳುತ್ತೇನೆ. ನಿಮ್ಮ ವಿವರಣೆಯಿಂದ ಏನೂ ಆಗುವುದಿಲ್ಲ ಎಂದು ನನ್ನ ಭಾವನೆ. ಇಷ್ಟು ಹೇಳಿ ನನ್ನ ಮಾತಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ).—ಸನ್ಮಾನ್ಯ ಅಧ್ಯಕ್ಷರೇ, ಕಳೆದ ನಾಲ್ಕು ವರ್ಷಗಳಿಂದ ಸತತವಾಗಿ ಅಭಾವಕ್ಕೆ ತುತ್ತಾದ ಈ ರಾಜ್ಯದಲ್ಲಿ ಸುಮಾರು ಎರಡು ಕೋಟಿಗಿಂತಲೂ ಹೆಚ್ಚು ಜನರು ಕಷ್ಟಕ್ಕೆ ಸಿಕ್ಕಿದ್ದಾರೆ. ಒಂದು ಕೋಟಿಗಿಂತಲೂ ಹೆಚ್ಚು ಜಾನುವಾರುಗಳ ಮೇವಿನ ಅಭಾವದಿಂದ ಪರಿತಾಪಕ್ಕೆ ಒಳಗಾಗಿವೆ, ಇಂತಹ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯಸರಕಾರವು, ಹಿಂದೆ ಯಾವುದೇ ಸರಕಾರ ಮಾಡದಷ್ಟು ಅಭಾವ ಪರಿಹಾರ ಕಾರ್ಯಗಳನ್ನು ಮಾಡಿತು. ಇದು ಕೇವಲ ಹೊಗಳಿಕೆಯ ಮಾತಲ್ಲ. ನನ್ನ ಅನೇಕ ಮಿತ್ರರು, ವಿರೋಧ ಪಕ್ಷದವರೂ ಸಹ ಇದನ್ನು ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ

ಸನ್ಮಾನ್ಯ ಅಧ್ಯಕ್ಷರೇ, ಅನೇಕ ಜನ ಮಿತ್ರರು, ಕೆಲವು ಕಾರ್ಯಕ್ರಮಗಳು ಸರಿಯಾಗಿ ನಡೆದಿಲ್ಲ ಎಂದು ಹೇಳಿದರೂ ಸಹ, ಹಿಂದೆ ಮಾಡಿದಂಥ ಕಾರ್ಯಕ್ರಮಗಳನ್ನು ಹೋಲಿಕೆ ಮಾಡಿದಾಗ ಹೆಚ್ಚಿನ ಪ್ರಮಾಣದಲ್ಲಿ ಜನರಿಗೆ ತೊಂದರೆ ಆದಾಗ ರಾಜ್ಯ ಸರಕಾರ ತನ್ನ ಆರ್ಥಿಕ ಇತಿಮಿತಿಯಲ್ಲಿ ಸಾಕಷ್ಟು ಕೆಲಸ ಮಾಡಿದೆ ಎಂಬುದನ್ನು ಖಂಡಿತವಾಗಿ ಔದಾರ್ಯದ ದೃಷ್ಟಿಯಿಂದಲಾದರೂ ಒಪ್ಪುತ್ತಾರೆ ಎಂದು ಭಾವಿಸುತ್ತೇನೆ. ತಮಗೆ ಗೊತ್ತಿರುವ ಹಾಗೆ ೧೯೮೫ನೇ ಇಸವಿಯಿಂದ ಇವತ್ತಿನವರೆಗೂ ರಾಜ್ಯ ಸರಕಾರದವರು ಕೇಂದ್ರ ಸರಕಾರಕ್ಕೆ ಮೊರೆ ಹೋದರು. ಬರಪರಿಹಾರ ಕಾರ್ಯಕ್ರಮಕ್ಕೋಸ್ಕರ ಕೇಂದ್ರ ಸರಕಾರದವರು ಸಹಾಯ ಮಾಡಬೇಕೆಂದು ಕೇಳಿದರು,

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ, ಇದು ಏನಾಗುತ್ತಿದೆ. ಚರ್ಚೆ ಆಗುತ್ತಿದೆಯೋ ಸ್ಟೇಟ್‌ಮೆಂಟ್ ಬಗ್ಗೆ ಕ್ಲಾರಿಫಿಕೇಷನ' ಆಗುತ್ತಿದೆಯೋ, ಏನಾಗುತ್ತಿದೆ ಎಂಬುದು ಗೊತ್ತಾಗಬೇಕಲ್ಲ,

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ.—ವಾಸ್ತವವಾದ ಸ್ಥಿತಿಯನ್ನು ನಾನು ಅವರ ಮುಂದಿಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ, ನಾವು ಕೇಂದ್ರಸರಕಾರಕ್ಕೆ ಎಷ್ಟು ಹಣ ಕೇಳಿದ್ದೇವೆ ಎಂದರೆ ಅದು ಸ್ಟೇಟ್‌ಮೆಂಟ್‌ನಲ್ಲಿ ಇದೆ. ನಾವು ೧-೪-೮೫ರಿಂದ ಇದುವರೆಗೆ ಒಟ್ಟು ೫೮೮ ಕೋಟಿ ರೂಪಾಯಿಗಳನ್ನು ಕೇಳಿದ್ದೇವೆ. ಆದರೆ ಅವರು ಕೊಟ್ಟಿರತಕ್ಕಂಥ ಹಣ ಎಷ್ಟು ಸ್ವಾಮಿ ? ನಾನು ಏನಾದರೂ ಹೇಳುವ ಪ್ರಯತ್ನ ಮಾಡಿದಾಗ ನಮ್ಮ ಸರಕಾರವನ್ನು ಹೊಗಳುತ್ತಿದ್ದೇನೆ ಎಂದು ಹೇಳುತ್ತಾರೆ. ಇಲ್ಲಿ ಹೊಗಳುವ ಅವಶ್ಯಕತೆ ಏನೂ ಇಲ್ಲ. ನಾನು ನಮ್ಮ ಸರಕಾರವನ್ನು ಹೊಗಳುವುದಕ್ಕಿಂತ ಹೆಚ್ಚಾಗಿ ವಿರೋಧ ಪಕ್ಷದವರು ನಮ್ಮ ಸರಕಾರವನ್ನು ಟೀಕೆ ಮಾಡುವಂತಹ ನೈತಿಕ ಹಕ್ಕು ಅವರಿಗಿಲ್ಲ. ಆದರೆ ಇವತ್ತು ನಾವೇ ನಮ್ಮ ಸರಕಾರವನ್ನು ಟೀಕೆ ಮಾಡುವುದಕ್ಕೆ ತಯಾರಾಗಿದ್ದೇವೆ, ಏನು ಸುಮಾರು ೫೮೪ಕೋಟಿ ರೂಪಾಯಿಗಳನ್ನು ನಾವು ಕೇಳಿದ್ದೇವೆ...

ಶ್ರೀ ಕೆ. ಹೆಚ್. ಪಾಟೀಲ್.—ಎರಡು ಪಾಯಿಂಟ್ ಕ್ಲಾರಿಫಿಕೇಷನ್ ಮಾಡುತ್ತೇನೆ. ಆದರು ಕೇಳಿದ ಪ್ರಶ್ನೆ ವಿರೋಧ ಪಕ್ಷದವರು ತಪ್ಪು ಮಾತನಾಡುತ್ತಿದ್ದಾರೆ ಎಂದು, ಅದಕ್ಕೆ ಉತ್ತರ ನಾನು ಹೇಳಬೇಕಾಗುತ್ತದೆ. ಮಂತ್ರಿಗಳಲ್ಲ...

ಅಧ್ಯಕ್ಷರು.—ಏಕಾಂತಯ್ಯನವರೇ, ಉತ್ತರ ಹೇಳುವುದಕ್ಕೆ ಮಂತ್ರಿಗಳಿದ್ದಾರೆ. ನೀವು ಬೇರೆ ವಿಷಯ ಏನಾದರೂ ಇದ್ದರೆ ಹೇಳಿಬಿಡಿ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ.—ನಾನು ಅವರಿಗೆ ಉತ್ತರ ಹೇಳುತ್ತಿಲ್ಲ ಸ್ವಾಮಿ...

ಅಧ್ಯಕ್ಷರು.—ಪಾಟೀಲರೇ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹೆಚ್. ಏಕಾಂತಯ್ಯ.—ಕೇಂದ್ರ ಸರಕಾರದಿಂದ ನಾವು ೧೯೮೫ನೇ ಇಸವಿ ಏಪ್ರಿಲ್‌ನಿಂದ ಇವತ್ತಿನವರೆಗೆ ೫೮೮ ಕೋಟಿ ರೂಪಾಯಿಗಳನ್ನು ನೇರವಾಗಿ ಕೇಳಿದ್ದೇವೆ. ಆದರೆ ಅದರಲ್ಲಿ ಬಿಡುಗಡೆ ಮಾಡಿರತಕ್ಕ ಹಣ ಕೇವಲ ೮೦ ಕೋಟಿ ರೂಪಾಯಿ. ಅಷ್ಟನ್ನೂ ನಾನು ಹೇಳಬಾರದೇ ?

ಶ್ರೀ ಧರ್ಮಸಿಂಗ್.—ಕೇಂದ್ರ ಸರಕಾರ ಕೊಟ್ಟಿರುವುದು ಇಷ್ಟೇ ಹಣ ಅಲ್ಲ. ಈ ೮೦ ಕೋಟಿ ಜೊತೆಗೆ ಬೋನಸ್ ಸ್ಕೀಂನಲ್ಲಿ ೨ ಕೋಟಿ ೮೪ ಲಕ್ಷ ಕೊಟ್ಟಿದ್ದಾರೆ. ಕೇಂದ್ರ ಸರಕಾರದಿಂದ ಒಂದು ವರ್ಷದಲ್ಲಿ ಈ ಸ್ಕೀಂನಲ್ಲಿ ಮೂರು ಕೋಟಿ ಬಂದಿದೆ. ತಾವು ತಿಳಿದುಕೊಳ್ಳದೆ ಹೇಳಬಾರದು.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ.—ಇದರಲ್ಲಿ ಇರುವುದನ್ನು ನಾನು ಹೇಳಬಾರದೇ ? ಅಂಕಿ ಅಂಶಗಳು ತಪ್ಪಿದ್ದರೆ, ತಪ್ಪಿದೆ ಎಂದು ಹೇಳುವ ಅಧಿಕಾರ ನಿಮಗೆ ಇದೆ.

ಅಧ್ಯಕ್ಷರು.—ನೀವು ಹೇಳಿರುವುದು ರೆಕಾರ್ಡ್‌ಗೆ ಹೋಗಿದೆ.

ಶ್ರೀ ಧರ್ಮಸಿಂಗ್.—ಸರಕಾರದಿಂದ ಶಾಸಕರಿಗೆ ಒಂದು ಪತ್ರ ಬಂದಿದೆ. ಕೇಂದ್ರ ಸರಕಾರದವರು ಬೋನಸ್ ಸ್ಕೀಂನಲ್ಲಿ ೨ ಕೋಟಿ ೮೪ ಲಕ್ಷ ರೂಪಾಯಿ ಕೊಟ್ಟಿದ್ದಾರೆ. ತಮ್ಮ ತಮ್ಮ ಕ್ಷೇತ್ರದಲ್ಲಿ ಯಾವ ಯಾವ ಕೆಲಸಗಳನ್ನು ತೆಗೆದು ಕೊಳ್ಳಬೇಕು ಎಂಬುದನ್ನು ತಿಳಿಸಿ ಎಂದು ಬಂದಿದೆ. ಏಪ್ರಿಲ್ ತಿಂಗಳ ಒಳಗಾಗಿ ಇದರ ಬಗ್ಗೆ ನಿರ್ದಿಷ್ಟ ಆದೇಶ ಕೊಟ್ಟರೂ ಕೂಡಾ ಸರಕಾರ ಖರ್ಚು ಮಾಡುವುದಕ್ಕೆ ಆಗಲಿಲ್ಲ ಇದು ಅಪರಾಧ ಅಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಧರ್ಮಸಿಂಗ್‌ರವರು ಕೇಂದ್ರ ಸರಕಾರದಿಂದ ರಾಜ್ಯ ಸರಕಾರಕ್ಕೆ ಬೋನಸ್ ಹಣ ಸಿಕ್ಕಿತು ಎಂದು ಹೇಳಿದರು. ಅದು ಯಾವ ಕಾರಣಕ್ಕಾಗಿ ಎಂಬುದನ್ನು ಹೇಳಲಿಲ್ಲ. ಇಡೀ ರಾಷ್ಟ್ರದಲ್ಲಿ ಉತ್ತಮ ರೀತಿಯಿಂದ ಹೆಚ್ಚು ಕೊಳವೆ ಬಾವಿಗಳನ್ನು ತೆಗೆದು ನೀರು ಸರಬರಾಜು ಮಾಡಿದುದರಿಂದ ಬೋನಸ್ ಬಂತು. ಇಂತಹದ್ದು ನಿಮಗೆ ಕಾಣುವುದಿಲ್ಲ, ಅದನ್ನು ನೀವು ಹೇಳುವುದಿಲ್ಲ. ಬೋನಸ್ ಹಣ ಬಿಡುಗಡೆ ಮಾಡುವುದಕ್ಕೆ ತಡವಾಗಿರುವುದರಿಂದ ಖರ್ಚು ಮಾಡುವುದಕ್ಕೂ ತಡವಾಗಿದೆ. ಹಣ ಬಂದಿರುತ್ತದೆ, ಅದನ್ನು ಖರ್ಚು ಮಾಡೋಣ.

ಶ್ರೀ ಧರ್ಮಸಿಂಗ್.—ತಮ್ಮ ಸ್ಕೀಮ್ ರೆಡಿಯಾಗಿರಲಿಲ್ಲ. ತಮ್ಮ ಸ್ಕೀಮ್ ರೆಡಿಯಾಗಿರಲಿಲ್ಲ ಎಂಬ ಮಾತನ್ನೂ ಸಹ ಹೋದ ಅಧಿವೇಶನದಲ್ಲಿ ಹೇಳಿದ್ದೇನೆ. ಮೂರು ಕೋಟಿಯನ್ನು ಖರ್ಚು ಮಾಡಿ ಹಳ್ಳಿಗಾಡಿಗೆ ನೀರು ಒದಗಿಸಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಷ್ಟು ಖರ್ಚು ಮಾಡಿದ್ದೇವೆ, ಅದನ್ನು ಕೊಟ್ಟಿದ್ದೇನೆ. ಅದೆಲ್ಲಾ ಇದೆ. ನಾನು ಕೊಟ್ಟ ಲೆಕ್ಕದಲ್ಲಿ ಬೋನಸ್ ಅಲ್ಲದೆ ಸ್ಕೀಂ ಸ್ಕೇರ್ಸಿಟಿ, ಎನ್.ಆರ್.ಇ.ಪಿ. ಇವುಗಳ ಕೆಳಗೆ ಎಷ್ಟು ಹಣ ಖರ್ಚಾಗಿದೆ ಎಂಬುದನ್ನು ಸ್ಪಷ್ಟವಾಗಿ ಕೊಟ್ಟಿದ್ದೇನೆ. ಯಾವ ಯೋಜನೆ ಕೆಳಗೆ ಎಷ್ಟು ಖರ್ಚಾಗಿದೆ ಎಂಬುದನ್ನು ಸ್ಪಷ್ಟವಾಗಿ ಕೊಟ್ಟಿದ್ದೇನೆ. ಯಾವುದನ್ನೂ ಮುಚ್ಚತಕ್ಕಂಥ ಪ್ರಯತ್ನ ಇಲ್ಲ. ಎಲ್ಲಾ ಸ್ಪಷ್ಟವಾಗಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಬೋನಸ್ ಎಂದು ತಪ್ಪಾಗಿ ಟೈಪ್ ಆಗಿರಬಹುದು ನೋಡಿ. ಅದು ಬೋಗಸ್ ಎಂದು ಇರಬಹುದು,

ಅಧ್ಯಕ್ಷರು.—ಅದನ್ನು ನೋಡುವುದಕ್ಕೆ ತಮಗೇ ಅವಕಾಶಕೊಡುತ್ತೇನೆ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ.—ಸರಕಾರದ ವಿಫಲತೆ ಇದ್ದರೆ ನಾವು ಚೆನ್ನಾಗಿ ಹೇಳುತ್ತೇವೆ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ.—ನಿಮ್ಮ ಹತ್ತಿರ ಭಾಷಣ ಬರೆಸಿಕೊಂಡು ಬಂದು ಓದಿಬಿಡುತ್ತೇನೆ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ.—೧-೪-೮೫ ರಿಂದ ೩೦-೪-೮೫ರವರೆಗೆ ೨೭೮ ಕೋಟಿ ರೂಪಾಯಿಗಳನ್ನು ಯೋಜನಾ ವೆಚ್ಚ ಸೇರಿದಂತೆ ರಾಜ್ಯ ಸರಕಾರ ಖರ್ಚು ಮಾಡಿದೆ. ೧೫ ಕೋಟಿಗಿಂತಲೂ ಹೆಚ್ಚು ಮಾನವ ದಿನಗಳನ್ನು ನಾವು ಇವತ್ತಿನ ದಿವಸ ನಿರ್ಮಾಣ ಮಾಡಿದ್ದೇವೆ. ಇಷ್ಟು ಮಾನವ ದಿನಗಳನ್ನು ನಿರ್ಮಾಣ ಮಾಡಿ ಕೂಲಿಗಾರರು ಮತ್ತು ಅತೀ ಸಣ್ಣ ರೈತರಿಗೆ ಅನುಕೂಲ ಮಾಡಿಕೊಟ್ಟು ಅವರಿಗೆ ಜೀವನ ಮಾಡುವುದಕ್ಕೆ ಒಂದು ಅವಕಾಶ ಮಾಡಿಕೊಟ್ಟಿದ್ದೇವೆ.

ಶ್ರೀ ಆರ್. ಎನ್. ನಾಯಕ್.—ಅವರು ೧೫ ಕೋಟಿ ಮಾನವದಿನಗಳನ್ನು ನಿರ್ಮಾಣ ಮಾಡಿದ್ದೇವೆ ಎಂದರು. ಹಾಗೆಂದರೆ ಏನು ?

(ಗೊಂದಲ)

ಅಧ್ಯಕ್ಷರು.—ನಾಯಕ್‌ರವರೇ ದಯವಿಟ್ಟು ಕುಳಿತುಕೊಳ್ಳಿ

(ಗೊಂದಲ)

ಅಧ್ಯಕ್ಷರು.—ಅವರು ಮಾತನಾಡಿ ಮುಗಿಸಲಿ. ಏಕಾಂತಯ್ಯನವರೇ ತಾವು ಮಾತನಾಡಿ.

ಶ್ರೀ ಹೆಚ್. ಏಕಾಂತಯ್ಯ.—ಈ ಒಂದು ಹಿನ್ನೆಲೆಯನ್ನು ನಾವು ತೆಗೆದುಕೊಂಡಾಗ...

ಅಧ್ಯಕ್ಷರು.—ಏಕಾಂತಯ್ಯನವರೇ. ನಾನು ಒಂದು ಮಾತು ಹೇಳುತ್ತೇನೆ ಕೇಳಿ. ಇಲ್ಲಿ ಮಂತ್ರಿಗಳು ಇದ್ದಾರೆ. ಅವರು ಉತ್ತರವನ್ನು ಅವರಿಗೆ ಕೊಡುತ್ತಾರೆ. ನೀವು ಸುಮ್ಮನೆ ಮಾತನಾಡಿ.

ಶ್ರೀ ಎಚ್. ಏಕಾಂತಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಬರಗಾಲ ಕಾಮಗಾರಿಗಾಗಿ ಸಾಕಷ್ಟು ಹಣವನ್ನು ಖರ್ಚು ಮಾಡಿದ್ದೇವೆ. ಹಣ ಖರ್ಚು ಮಾಡುವಾಗ ಕೆಲವು ಲೋಪದೋಷಗಳು ಆಗಿರಬಹುದು. ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಈಗ ಮಳೆಗಾಲವಾಗಿದ್ದರೂ ಮಳೆ ಸರಿಯಾಗಿ ಬರದೇ ಇರುವುದರಿಂದ ಇನ್ನೂ ಬರಗಾಲ ಬರಬಹುದು. ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಬಹುಶಃ ಅನೇಕ ಭಾಗಗಳಲ್ಲಿ ಮಳೆ ಸರಿಯಾಗಿ ಬಿದ್ದಿಲ್ಲ, ಕೆಲವು ಪ್ರದೇಶಗಳಲ್ಲಿ ಮಾತ್ರ ಮಳೆ ಅಲ್ಪಸ್ವಲ್ಪ ಆಗಿದೆ. ನಾನು ಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರುವುದಕ್ಕೆ ಇಷ್ಟಪಡುತ್ತೇನೆ, ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು ೩೬೦ ಸಣ್ಣ ಕೆರೆಗಳು ಇವೆ. ಆ ಸಣ್ಣ ಕೆರೆಗಳ ಪೈಕಿ ೧೦ ಕೆರೆಗಳು ಮಾತ್ರ ನೀರಿನಿಂದ ತುಂಬಿವೆ. ಇದರಿಂದಲೇ ಗೊತ್ತಾಗುತ್ತದೆ ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಮಳೆ ಆಗಿಲ್ಲ ಎನ್ನುವುದು ಮೊದಲು ಬಿದ್ದ ಮಳೆಯನ್ನು ನಂಬಿಕೊಂಡು ಜನರು ಬೀಜವನ್ನು ಬಿತ್ತಿದರು. ಇನ್ನು ಕೆಲವು ದಿನಗಳ ಕಾಲ ಮಳೆ ಬರದೇ ಇದ್ದರೆ ಖಂಡಿತ ಫಸಲು ರೈತರ ಕೈಗೆ ಸಿಕ್ಕುವುದಿಲ್ಲ. ಆದ್ದರಿಂದ ಸರ್ಕಾರವು ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಬರಗಾಲ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ಹೇಳಿ ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

5-30p. m.

SRI MOHAMED LAIQUDDIN (Bidar).—Mr. Speaker, Sir, Bidar District was also included as a drought affected district and the relief works have been started. I would like to bring to the kind notice of the Hon'ble Revenue Minister that nodoubt relief-work

was started at Bidar but at the time when the amount was released' Bidar taluk was removed from the relief work and great injustice has been done to Bidar Taluk in which my Constituency is there Sir, throughout the year, Bidar was treated as a drought affected district and Bidar taluk was also treated as drought affected taluk but in the month of April and May, Bidar taluk has been removed from the drought affected area. This has caused great injustice to the people of Bidar Taluk. Sir. This has been done because there was no Tahsildar and nobody was there to report to the higher authorities about the drought conditions in Bidar Taluk. The Tahsildar was under suspension and it is because of non-submission of the report to the higher authorities, Bidar taluk was removed from the drought affected area and all the works which were going on under the drought relief head and other works were stopped including the repairs the roads, formation of roads, metalling and asphalting of roads etc., This matter was brought to the notice of the Deputy Commissioner and the Deputy Commissioner assured me that the on-going works will be completed and brought to the safe stage, including the schemes taken up under NREP, RLEGP etc., but all these promises were not fulfilled. Therefore, whatever drought relief work started in Bidar Taluk was badly damaged after the monsoon. Sir, once again I wish to bring to the notice of the Hon'ble Revenue Minister that when the amount was released tothe Bidar District, Bidar taluk was removed from the drought affected area. The average rainfall was taken and Bidar taluk was treated as a drought affected taluk but now they have removed it. This has caused great injustice to the people of Bidar Taluk. On account of this, all the on-going works have been stopped and the amount sofar spent has become totally wasted. As regards minor irrigation there are 4-5 tanks which were under repair but no repair work was undertaken and no new work was also taken up in Bidar Taluk This time no doubt certain crops have come after the monsoon but there was no rain for one month and because of the gap, all the crops, khariff crops etc., have withered away. There after, rains have come but it was not useful at all. In Bidar Taluk, some areas like Chitaguppa circle, are still drought affected. I there fore request the Government to take up drought relief work in those areas particularly in the revenue circles where there is no sufficient quantum of rains during this year also. In Bidar Taluk i. e., in my Constituency, there are 40 villages. I therefore once again request the Government to treat Bidar Taluk also as drought affected taluk and take up drought relief works. They have to take up 12 roads for repairs and some more new roads for

formation. I request that all these roads should be completed either under the caption of drought relief work or under NREP, RLEGP etc.,

I thank the Chair of having given me some time to speak and conclude.

ಅಧ್ಯಕ್ಷರು.—ಮಾನ್ಯ ಉದಾಸಿಯವರೇ ಮಾತನಾಡಿ,

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಸದಸ್ಯರುಗಳಿಗೆ ಕ್ಲಾರಿಫಿಕೇಷನ್ ಕೇಳಿ ಎಂದು ಹೇಳುತ್ತಿದ್ದೀರೋ ಅಥವಾ ಭಾಷಣ ಮಾಡಿ ಎಂದು ಹೇಳುತ್ತಿದ್ದೀರೋ. ಭಾಷಣ ಮಾಡಲಿ ಅದಕ್ಕೆ ನನ್ನ ಅಭ್ಯಂತರ ಏನೂ ಇಲ್ಲ. ಈಗಾಗಲೇ ಸಮಯ ಆಗಿದೆ, ನಾಳೆ ಒಂದು ದಿನ ಮಾತ್ರ ಸೆಷನ್ ಇರುವುದು, ಶನಿವಾರವೂ ಸೆಷನ್ ಇರುತ್ತದೋ ಇಲ್ಲವೋ ಎಂದು ಮಾನ್ಯ ಮಂತ್ರಿಗಳು ಹೇಳಲಿ.

ಅಧ್ಯಕ್ಷರು.—ಈ ಕಡೆಯವರು ಮಾತನಾಡಬೇಕೆಂದು ಕೈ ಎತ್ತುತ್ತಾರೆ. ಆ ಕಡೆಯವರು ಕೈ ಎತ್ತುತ್ತಾರೆ.

ಶ್ರೀ ಎಸ್ ಬಂಗಾರಪ್ಪ.—ನೀವು ಕ್ಲಾರಿಫಿಕೇಷನ್ ಮಾತ್ರ ಕೇಳುವುದಕ್ಕೆ ಅವಕಾಶ ಕೊಡಿ. ಈ ರೀತಿ ಮಾಡುವುದು ಒಳ್ಳೆಯದಲ್ಲ.

ಅಧ್ಯಕ್ಷರು.—ಕ್ಲಾರಿಫಿಕೇಷನ್ ಮಾತ್ರ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಕ್ಲಾರಿಫಿಕೇಶನ್ ಕೇಳಲಿ. ಭಾಷಣಕ್ಕೆ ಏಕೆ ಅವಕಾಶ ಕೊಡಬೇಕು? ಭಾಷಣ ಮಾಡಬಾರದೆಂದು ನೀವು ರೂಲಿಂಗ್ ಕೊಡಿ

ಅಧ್ಯಕ್ಷರು.—ಸದಸ್ಯರ ಹಕ್ಕುಗಳನ್ನು ಮೊಟಕುಗೊಳಿಸಬಾರದು ಎನ್ನುವ ಉದ್ದೇಶದಿಂದ ಅವರುಗಳಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತಿದ್ದೇನೆ. ಈಗ ಲೈಕುದ್ದೀನ್‌ರವರು ಮಾತನಾಡಿದರು. ನೋಡಿ ಅಲ್ಲಿ ನಿಮ್ಮ ಕಡೆಯವರೇ ಚಿನ್ನಪ್ಪನವರು ಮಾತನಾಡಬೇಕೆಂದು ಕೇಳುತ್ತಿದ್ದಾರೆ, ಸದಸ್ಯರ ಅಭಿಪ್ರಾಯದಂತೆ ಸದನವನ್ನು ನಡೆಸಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಭಾಷಣ ಏಕೆ ಮಾಡಿಸಬೇಕು ? ಕ್ಲಾರಿಫಿಕೇಷನ್ ಅಂದರೆ ಕ್ಲಾರಿಫಿಕೇಷನ್ ಕೇಳಬೇಕು.

ಅಧ್ಯಕ್ಷರು.—ನಿಮ್ಮ ಕಡೆಯವರಿಗೆ ನೀವು ಹೇಳಿ. ಯಾರು ಮಾತನಾಡಬಾರದು ಎಂದು ಮಾತನಾಡುವುದಕ್ಕೆ ಅವಕಾಶ ಕೊಡದೇ ಇದ್ದರೆ ಗಲಾಟೆ ಮಾಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಅದಕ್ಕೆ ನಾವೇನು ಮಾಡುವುದಕ್ಕಾಗುತ್ತದೆ ? ನೀವು ಹೇಳಿ ಯಾರೂ ಭಾಷಣ ಮಾಡಬಾರದು ಎಂದು, ಶನಿವಾರ ಅಧಿವೇಶನ ಇದೆಯೋ ಇಲ್ಲವೇ ಎಂದು ಮಾನ್ಯ ಮಂತ್ರಿಯವರು ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾಡಿದ್ದುವರೆಗೆ ಏಕೆ ಸುಮ್ಮನೆ ಇಟ್ಟುಕೊಳ್ಳಬೇಕು. ಇವತ್ತೇ ಎಲ್ಲರೂ ಮಾತನಾಡಲಿ

ಶ್ರೀ ಎಸ್. ಬಂಗಾರಪ್ಪ.—ಶನಿವಾರದವರೆಗೂ ಏಕೆ ಇಟ್ಟುಕೊಳ್ಳಬಾರದು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅದಕ್ಕೆ ಉತ್ತರವನ್ನು, ಆಮೇಲೆ ಕೊಡುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಅಧಿವೇಶನ ಇನ್ನೂ ೪ ದಿನ ಹೆಚ್ಚಿಗೆ ಆದರೆ ಏನು ಸ್ವಾಮಿ ತೊಂದರೆ ?

ಶ್ರೀ ಎಸ್. ಬಂಗಾರಪ್ಪ.—ಬೇರೆ ಸಬ್ಜೆಕ್ಟನ್ನು ನಾನು ರೈಸ್ ಮಾಡುವುದು ಇದೆ. ಅದು ತೆಗೆದುಕೊಳ್ಳಬೇಕೆಂಬ ತೀರ್ಮಾನ ಇಲ್ಲವೇ ಹಾಗಿದ್ದರೆ ?

ಅಧ್ಯಕ್ಷರು.—ತೆಗೆದುಕೊಳ್ಳುವುದಿದೆ. ಈಗ ಇದನ್ನು ಮುಗಿಸೋಣ. ತಾವು ದಯವಿಟ್ಟು ಕುಳಿತು ಕೊಳ್ಳಿ.

ಶ್ರೀ ಆರ್. ಎನ್. ನಾಯಕ್.—ಈ ವಾದ ಏಕೆ ಹೀಗೆ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿದೆ.

ಅಧ್ಯಕ್ಷರು.—ತಾವು ಏನು ಮಾತನಾಡುತ್ತಿದ್ದೀರಿ ? ಈ ರೀತಿಯಾಗಿ ಮಾತನಾಡುವುದು ಸರಿಯಲ್ಲ. ಸದನದಲ್ಲಿ ಈ ಕಡೆಯವರು, ಆ ಕಡೆಯವರು, ಎಲ್ಲರೂ ಮಾತನಾಡುತ್ತಾರೆ.

(ಗೊಂದಲ)

ಶ್ರೀ ಕೆ. ಮಲ್ಲಪ್ಪ.—ಅವರು ಹೇಳಿದ್ದನ್ನು ಕೇಳಿಕೊಂಡು ಹೋಗುವುದಾದರೆ ನಮಗೆ ಅವಕಾಶ ಇಲ್ಲವೇ ?

ಅಧ್ಯಕ್ಷರು.—ಬೊಮ್ಮಾಯಿಯವರು ಮಾತನಾಡಿ.........

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಶನಿವಾರದವರೆಗೆ ಮುಂದುವರಿಸುವುದಕ್ಕೆ, ಸರಕಾರದ ಅಭಿಪ್ರಾಯವನ್ನು ನೀವು ಮೊದಲು ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಉದಾಸಿಯವರ ಮಾತನ್ನು ಮುಗಿಸಿದ ಮೇಲೆ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಉದಾಸಿಯವರ ಮಾತಿನ ವಿಚಾರ ಅಲ್ಲ. ನಾನು ಹೇಳುವುದನ್ನು ದಯವಿಟ್ಟು ಅರ್ಥ ಮಾಡಿಕೊಳ್ಳಿ......

ಅಧ್ಯಕ್ಷರು.—ಬಂಗಾರಪ್ಪನವರೇ, ಈ ಉದಾಸಿಯವರು, ಶಾಣಪ್ಪನವರು, ಚಿನ್ನಪ್ಪನವರು, ಮಾತನಾಡಲಿದ್ದಾರೆ.....

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಮಾನ್ಯ ಬಂಗಾರಪ್ಪನವರು, ಮತ್ತು ಕೆಲವು ಸದಸ್ಯರೂ ಈ ವಿಚಾರದಲ್ಲಿ ಚರ್ಚೆಯನ್ನು ಶನಿವಾರದ ದಿವಸ ಏಕೆ ಮಾಡಬಾರದು ? ಎಂದು ಸಲಹೆ ಮಾಡಿದ್ದಾರೆ. ಈ ವಿಚಾರದಲ್ಲಿ ನಾನು ಇಷ್ಟನ್ನು ಹೇಳಬಯಸುತ್ತೇನೆ, ನನ್ನ ಹೇಳಿಕೆಯಲ್ಲಿ ಹೋದ ವರ್ಷದ ಬಗ್ಗೆ ಏನು ಅಂಕಿಅಂಶಗಳನ್ನು ಕೊಡಬೇಕೋ ಅದನ್ನು ಕೊಟ್ಟಿದ್ದೇನೆ. ಈ ವರ್ಷದ ಬಗ್ಗೆ ಎರಡು ಪ್ಯಾರಾದಲ್ಲಿ ಹೇಳಿದ್ದೇನೆ. ಇದು ಚರ್ಚೆ ಮಾಡತಕ್ಕಂತಹ ಅವಶ್ಯಕತೆ ಇಲ್ಲ. ಎಲ್ಲಾ ಸದಸ್ಯರನ್ನು ಕೇಳಿ, ತುರ್ತು ಏನು ಮಾಡಬೇಕೆಂಬ ಬಗ್ಗೆ ಹೇಳಿಕೆ ಕೊಡುತ್ತೇನೆ. ಶನಿವಾರ ಪುನಃ ಚರ್ಚೆ ಮಾಡತಕ್ಕಂತಹ ಅವಶ್ಯಕತೆ ಇಲ್ಲ. ಸರಕಾರ ಏನೇನು ಕಾರ್ಯ ಕ್ರಮವನ್ನು ತೆಗೆದುಕೊಳ್ಳುತ್ತದೆ ಎಂಬ ಬಗ್ಗೆ ಹೇಳಿದ್ದೇನೆ. ಸದಸ್ಯರ ಅಭಿಪ್ರಾಯವನ್ನು ಕೇಳಿ ಕೊನೆಗೆ ಉತ್ತರ ಕೊಡುತ್ತೇನೆ. ಶನಿವಾರ ಚರ್ಚೆ ಮಾಡುವ ಅವಶ್ಯಕತೆ ಇಲ್ಲ.

ಅಧ್ಯಕ್ಷರು.—ಉದಾಸಿಯವರು ತಮ್ಮ ಮಾತುಗಳನ್ನು ಬೇಗ ಮುಗಿಸಿ.

ಶ್ರೀ ಸಿ.ಎಂ. ಉದಾಸಿ.—ಕಳೆದ ವರ್ಷ ನಡೆದಂತಹ ಬರಗಾಲ ಕಾಮಗಾರಿಗಳ ಬಗ್ಗೆ ಬರೇ ಹೊಗಳಲಿಕ್ಕೆ ಅಥವಾ ಕೇಂದ್ರ ಸರಕಾರದವರಿಂದ ಸರಿಯಾದ ಸಹಾಯವು ಸಿಕ್ಕಿಲ್ಲ ಎಂದು ತೆಗಳಲಿಕ್ಕೆ ನಾನು ಇಲ್ಲಿ ಹೋಗುವುದಿಲ್ಲ. ಆದರೆ ಸರಕಾರದವರು ಮಾಡಿದಂತಹ ಮೆಚ್ಚತಕ್ಕಂತಹ ಕೆಲಸಗಳಲ್ಲಿ, ಕುಡಿಯುವ ನೀರಿನ ಕೆಲಸಗಳಾಗಿರಲೀ, ರಸ್ತೆಗಳ ಕೆಲಸವಾಗಿರಲೀ, ನೀರಾವರಿಗಾಗಿ ಮಾಡತಕ್ಕಂತಹ ಕೆಲಸವಾಗಿರಲಿ, ಸಾಕಷ್ಟು ಪ್ರಗತಿದಾಯಕವಾಗಿ ಆಗಿವೆ. ಕಳೆದ ವರ್ಷದ ಬರಗಾಲ ಕಾಮಗಾರಿಗಳಲ್ಲಿ ಎಲ್ಲಾ ಒಳ್ಳೆಯ ಕೆಲಸಗಳು ಆಗಿವೆ. ಆದರೂ ಕೂಡ ನಿರೀಕ್ಷಿತ ಮಟ್ಟದಲ್ಲಿ ಕೆಲವಾರು ಕೆಲಸ ಕಾರ್ಯಗಳನ್ನು ಮಾಡುವುದಕ್ಕಾಗುವುದಿಲ್ಲ ಎಂಬ ವಿಷಯ ಎಲ್ಲರಿಗೂ ಗೊತ್ತು. ಇದರ ಬಗ್ಗೆ ಪ್ರತಿಯೊಬ್ಬರೂ ಅನುಭವ ಹೊಂದಿದ್ದಾರೆ.

ಶ್ರೀ ಎಂ. ಎಸ್. ಪಾಟೀಲ್.—ಅಧ್ಯಕ್ಷರೇ, ಅವರ ಕಡೆಯಿಂದ ಎಷ್ಟು ಜನ ಮಾತನಾಡುತ್ತಾರೆ ಎಂದು ಹೇಳಿ ಬಿಡಿ. ಆ ಮೇಲೆ ನಮ್ಮ ಕಡೆಯಿಂದ ಎಷ್ಟು ಜನ ಮಾತನಾಡುವವರಿದ್ದಾರೆ ಎಂದು

ಹೇಳುತ್ತೇವೆ. ಅವರೂ ಮಾತನಾಡಲಿ, ನಾವು ಮಾತನಾಡುವವರಿದ್ದೇವೆ. ಆದುದರಿಂದ ಶನಿವಾರದ ವರೆಗೆ ಮುಂದುವರಿಸಬೇಕು ಸಭೆಯನ್ನು.

ಶ್ರೀ ಆರ್. ಎನ್. ನಾಯಕ್.—ಮಾತನಾಡುವ ಸದಸ್ಯರ ಲಿಸ್ಟನ್ನು ಕೊಡಿ......

ಅಧ್ಯಕ್ಷರು.—ಲಿಸ್ಟ್ ಎಂದು ಕೇಳುವುದಕ್ಕೆ ನೀವೂ ಕೊಟ್ಟಿಲ, ಅವರೂ ಕೊಟ್ಟಿಲ್ಲ. ಆದಷ್ಟು ಬೇಗ ಮುಗಿಸೋಣ.

ಶ್ರೀ ಸಿ. ಎಂ. ಉದಾಸಿ.—ಕಳೆದ ವರ್ಷ ಮುಖ್ಯವಾಗಿ ಆಗಿರತಕ್ಕಂತಹ ಕೆಲಸಕಾರ್ಯಗಳಲ್ಲಿ, ರಸ್ತೆ ಕೆಲಸಗಳಾಗಲೀ, ಕುಡಿಯುವ ನೀರಿನ ಕೆಲಸಗಳಾಗಲೀ, ಕೆರೆಕಟ್ಟೆಗಳ ಕೆಲಸವಾಗಲೀ, ಎಲ್ಲವನ್ನೂ ಮಾಡಿದ್ದರೂ ಸಹಿತ, ನನಗೆ ಗೊತ್ತಿರುವ ಹಾಗೆ ಹೆಚ್ಚಿಗೆ ಎಲ್ಲಿ ಕೆರೆಕಟ್ಟೆಗಳ ಕೆಲಸ ಮಾಡಿದ್ದಾರೋ ಎಲ್ಲ ಕೆರೆಕಟ್ಟೆಗಳ ಚಾನಲ್ ಕೆಲಸ ಮಾಡಿದ್ದಾರೋ ಅಲ್ಲಿ ಹೆಚ್ಚಿಗೆ ನೀರು ಬರುವುದಕ್ಕೆ ಸಾಧ್ಯವಾಗಿದೆ. ಈ ವರ್ಷವೂ ಬರಗಾಲ ಪರಿಸ್ಥಿತಿ ಗಂಭೀರ ಇದೆ ಎನ್ನುವುದನ್ನು ಮನಗಾಣಬೇಕಾಗಿದೆ. ನಮ್ಮಲ್ಲಿ ಆಗಸ್ಟ್ ೧೩ನೇ ತಾರೀಖಿನವರೆಗೂ ಮಳೆ ಆಗದೆ ಇರುವುದರಿಂದ ಸುಮಾರು ೮೫ ಹಳ್ಳಿಗಳು ನನ್ನ ಕ್ಷೇತ್ರದಲ್ಲಿ ಭತ್ತದ ಬೆಳೆಯನ್ನು ಕಾಣಲಿಲ್ಲ. ಬೇರೆ ಬೆಳೆ ಬೆಳೆಯಬೇಕಾದ ಪರಿಸ್ಥಿತಿ ಬಂದಿದೆ. ಹಿಂದಿನ ವರ್ಷ ನಾವು ಎಂದೂ ಕಾಣದಂತಹ ಒಂದು ಸೌಕರ್ಯವನ್ನು ಪಡೆದಿದ್ದೇವೆ. ಬೆಳೆ ವಿಮೆಯ ಲಾಭವನ್ನು ಪಡೆಯಬೇಕಾದಾಗ ನಾವು ಕಳೆದ ವರ್ಷ, ತಾಲ್ಲೂಕಿಗೆ ತಾಲ್ಲೂಕು ಪೂರ್ತಿ ಬೆಳೆ ಹೋದಾಗ ಮಾತ್ರ ವಿಮೆ ಯೋಜನೆಯ ಲಾಭವನ್ನು ಪಡೆದಿದ್ದೇವೆ. ಈ ವರ್ಷವೂ ಗಂಭೀರ ಪರಿಸ್ಥಿತಿ ಬರಬಹುದು. ಏಕೆಂದರೆ ತಾಲ್ಲೂಕು ವೈಸ್ ಯೂನಿಟ್ ಹಿಡಿದು, ಇನ್‌ಶೂರೆನ್ಸ್‌ನವರು ವಿಮೆ ಲಾಭವನ್ನು ಕೊಡುವ ಬಗ್ಗೆ ಕಾನೂನು ಮಾಡಿರುವುದರಿಂದ, ಆ ಕಾನೂನಿನಲ್ಲಿ ತಿದ್ದುಪಡಿ ಆಗದಿದ್ದರೆ, ಈ ವರ್ಷ ನಮ್ಮ ೮೫ ಹಳ್ಳಿಗಳಲ್ಲಿ ಏನೂ ಬೆಳೆ ಬಾರದಿದ್ದರೆ, ಬರಗಾಲ ತನ್ನ ಪರಿಣಾಮವನ್ನು ಅಲ್ಲಿ ಬೀರಿದರೆ, ನಮಗೆ ಬೆಳೆ ವಿಮೆಯ ಲಾಭ ಸಿಗುವುದಿಲ್ಲ ಎಂಬ ಹೆದರಿಕೆಯಿಂದ ಜನರು ಇರುವುದರಿಂದ ಈ ಕುರಿತಾಗಿ ಸರಕಾರದವರು ಚಿಂತನೆ ಮಾಡಬೇಕಾಗಿದೆ. ತಾಲ್ಲೂಕು ವೈಸ್ ಯೂನಿಟ್ ಮಾಡಬೇಕಾದ ಕಾನೂನು ಇರುವುದರಿಂದ, ಅದು ಸ್ವಲ್ಪ ತೊಂದರೆಯಾಗುತ್ತದೆಯಾದುದರಿಂದ ಗ್ರಾಮ ಮಟ್ಟವನ್ನು ಯೂನಿಟ್ ಎಂದು ಮಾಡಿ ಇನ್‌ಶೂರ್ ಕ್ಲೈಮ್ ಆಗುವಂತೆ ಒಂದು ಅನುಕೂಲವನ್ನು ಮಾಡಿಕೊಡುವಂತಹ ವ್ಯವಸ್ಥೆಗೆ ಇವೊತ್ತು ರಾಜ್ಯ ಸರಕಾರದವರು ಕೇಂದ್ರ ಸರಕಾರದವರ ಮೊರೆ ಹೋಗುವ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಈ ದಿಶೆಯಲ್ಲಿ ತಮ್ಮ ಪ್ರಯತ್ನದ ಮೂಲಕ ಸೂಕ್ತ ಪರಿಹಾರವನ್ನು ಕಂಡು ಹಿಡಿಯಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಈಗ ಮುಂಗಾರು ಬೆಳೆಗಳು ಬರುತ್ತಾ ಇವೆ, ಇಂತಹ ಸಂದರ್ಭದಲ್ಲಿ ಕಳೆದ ಎರಡು ವರ್ಷಗಳಿಂದ ರೈತರಿಗೆ ಬೆಳೆಗಳು ಬಾರದಿದ್ದಂತಹ ಸಮಯದಲ್ಲಿ, ಗಂಭೀರವಾದ ಪರಿಸ್ಥಿತಿಯನ್ನು ಎದುರಿಸಲು ಸಾಕಷ್ಟು ಸಾಲದ ಹೊರೆಯನ್ನು ಇಟ್ಟು ಕೊಂಡಿದ್ದಾರೆ. ಈಗ ಬೆಳೆ ಬಂದಾಗ ಧಾನ್ಯಗಳನ್ನು ಮಾರಾಟ ಮಾಡತಕ್ಕಂತಹ ಪರಿಸ್ಥಿತಿ ಬಂದಿರುವಾಗ, ಅವನಿಗೆ ಸರಿಯಾದ ಬೆಲೆ ಸಿಗುತ್ತಾ ಇಲ್ಲ ಜೋಳ ಮುಸುಕಿನ ಜೋಳ, ಹೆಸರು. ಮುಂತಾದವುಗಳಿಗೆ ಸರಿಯಾದ ಬೆಲೆ ಸಿಗಬೇಕಾಗಿದೆ. ಈಗಲೂ ರೈತರು ನಷ್ಟಕ್ಕೆ ಒಳಗಾಗದ ರೀತಿಯಲ್ಲಿ ನೋಡಿ ಕೊಳ್ಳಲು ಒಂದು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಎಷ್ಟೋ ಒಳ್ಳೆಯ ಕೆಲಸಗಳನ್ನು ಮಾಡಿದ ಸರಕಾರದವರು ಕಳೆದ ೨೫ ವರ್ಷಗಳಿಂದಲೂ ಹಾಗೆಯೇ ಉಳಿದಿರತಕ್ಕಂತಹ ಕೆರೆಕಟ್ಟೆಗಳ ಕೆಲಸವನ್ನು ಪ್ರಾರಂಭಿಸಿ ಬರಗಾಲ ಕಾಮಗಾರಿಗಳಲ್ಲಿ ಆ ಕೆಲಸಗಳಿಗೆ ಆದ್ಯತೆಯನ್ನು ಕೊಟ್ಟು ತನ್ಮೂಲಕ ರೈತಾಪಿ ಜನರಿಗೆ ಅನುಕೂಲವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಹಿಂದಿನ ವರ್ಷ ಸರಕಾರದವರು ತೆಗೆದುಕೊಂಡ ಕಾಮಗಾರಿಗಳ ಬಗ್ಗೆ ಎಲ್ಲಾ ಜನರೂ ತಮ್ಮ ಮೆಚ್ಚುಗೆಯನ್ನು ವ್ಯಕ್ತ ಮಾಡಿದ್ದಾರೆ. ೫೦ ವರ್ಷಗಳಿಂದ ಆಗದಿರತಕ್ಕಂತಹ ಕೆಲಸಕಾರ್ಯಗಳು ಈಗ ಆಗುತ್ತಿವೆ ಎಂಬ ಬಗ್ಗೆ ಹೆಮ್ಮೆಯನ್ನು ವ್ಯಕ್ತಮಾಡಿದ್ದಾರೆ. ಇದನ್ನು ಸರಕಾರದವರು ಮುಂದುವರಿಸಿಕೊಂಡು ಹೋಗಬೇಕಾಗಿ ಕೇಳಿಕೊಂಡು, ನೀರಾವರಿ ಕಾಮಗಾರಿಗಳಿಗೆ ಮೊದಲ ಆದ್ಯತೆ ಕೊಟ್ಟುಕೊಂಡು, ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಪ್ರಾರ್ಥಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಶಾಣಪ್ಪನವರು ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ನಮಗೆ ಈಗ ಅರ್ಥವಾಗುತ್ತಾ ಇದೆ. ಈ ರೀತಿಯಲ್ಲಿ ಇದ್ದಲ್ಲಿ ನಾವು ಯಾರೂ ಕೂಡ ಚರ್ಚೆಯಲ್ಲಿ ಭಾಗವಹಿಸುವುದಿಲ್ಲ.

ಅಧ್ಯಕ್ಷರು.—ಶಾಣಪ್ಪನವರು ಮಾತನಾಡಿ.

ಶ್ರೀ ರಾಜ್‌ವರ್ಧನ್.—ಅಧ್ಯಕ್ಷರೇ, ಬರಗಾಲದ ಪರಿಸ್ಥಿತಿ ಮುಖ್ಯವಾದಂತಹ ವಿಚಾರ. ನಮ್ಮ ಕಡೆಯಿಂದ ಇನ್ನೂ ಕೆಲವರು ಸದಸ್ಯರುಗಳು ಮಾತನಾಡುವವರಿದ್ದಾರೆ. ಕ್ಲಾರಿಫಿಕೇಶನ್ ಕೇಳುವವರಿದ್ದಾರೆ....

(ಗೊಂದಲ)

ಶ್ರೀ ಎಂ. ಎಸ್. ಪಾಟೀಲ್.—ಈ ಚರ್ಚೆಯು ಬರಗಾಲದ ಬಗ್ಗೆ ಸರಕಾರ ತನ್ನ ಪ್ರಚಾರ ಮಾಡಿಕೊಳ್ಳುವುದಕ್ಕೆ ಅಲ್ಲ,...

ಶ್ರೀ ಎಸ್. ಬಂಗಾರಪ್ಪ.—ನಮಗೆ ಈ ರೀತಿಯಾದರೆ ಕಷ್ಟವಾಗುತ್ತದೆ. ವಿಪ್‌ರವರು ಹೋಗಿ ಸದಸ್ಯರನ್ನು ಒತ್ತಾಯ ಮಾಡಿ ಭಾಗವಹಿಸಬೇಕೆಂದು ಹೇಳುತ್ತಾ ಇದ್ದಾರೆ, ಹೀಗೆ ಮಾಡಿ ಟೈಮ್‌ಡ್ರಾಫ್ಟ್ ಮಾಡತಕ್ಕಂತಾದ್ದೂ ಇದೆ. ಕ್ಲಾರಿಫಿಕೇಶನ್ ಕೇಳುವುದನ್ನು ಬಿಟ್ಟು ಅವರುಗಳು ಭಾಷಣ ಮಾಡಿದರೂ ತಾವು ಹಾಗೇ ಕುಳಿತಿದ್ದೀರಿ. ಅವರಿಗೆ ಭಾಷಣ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಹಾಗೆ ಆಗಿದೆ. ಇದಕ್ಕೆ ಏನೆಂದು ಹೇಳಬೇಕು. ನಾವು ಯಾರೂ ಕೂಡ ಚರ್ಚೆಯಲ್ಲಿ ಭಾಗವಹಿಸುವುದಿಲ್ಲ. ಹಾಗೆಯೇ ಕುಳಿತುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಬಂಗಾರಪ್ಪನವರು ಮಾನ್ಯ ಸಭಾಧ್ಯಕ್ಷರ ಮೇಲೆ ಕೋಪ ಮಾಡತಕ್ಕಂತಹ ಅವಶ್ಯಕತೆ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ನಮಗೆ ಅರ್ಥವಾಗುತ್ತದೆ. ಪೂರ್ತಿಯಾಗಿ ಅರ್ಥವಾಗುತ್ತಿದೆ.

(ಗೊಂದಲ)

ಶ್ರೀ ಆರ್. ಎನ್. ನಾಯಕ್.— ಅಧ್ಯಕ್ಷರೇ, ಕ್ಲಾರಿಫಿಕೇಶನ್ ಅಂದರೆ ಏನು ಮತ್ತು ಅದಕ್ಕೆ ಎಷ್ಟು ಸಮಯ ಅವಕಾಶ ಇದೆ ಎಂಬ ಬಗ್ಗೆ ಒಂದು ರೂಲಿಂಗ್ ಕೊಡಬೇಕು. ಅರ್ಧ ಘಂಟೆಯ ಅವಧಿಯೇ, ೪೫ ನಿಮಿಷಗಳ ಅವಧಿಯೇ ಎಂಬ ಬಗ್ಗೆ ರೂಲಿಂಗ್‌ನ್ನು ಕೊಡಿ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಆರ್. ಎನ್. ನಾಯ್ಕ.—ನಾನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಮಂತ್ರಿಯವರು ಏನು ಹೇಳುತ್ತಾರೆ ಕೇಳಿ...

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಸದಸ್ಯರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಆ ಕುರಿತು ತಾವುಗಳು ಒಂದು ಸಮಯ ನಿಗದಿ ಮಾಡಬಹುದು. ತಾವುಗಳು ಕ್ಲಾರಿಫಿಕೇಶನ್ ಎಷ್ಟು ಸಮಯಾವಕಾಶ ಹೊಂದಿದೆ. ಇತ್ಯಾದಿಯಾಗಿ ಒಂದು ನಿರ್ಣಯವನ್ನು ಮಾಡಿದ ಮೇಲೆ ನಾವು ಅದನ್ನು ಅನುಸರಿಸಬೇಕಾಗುತ್ತದೆ. ಅದನ್ನು ಮಾಡೋಣ. ಒಂದೊಂದು ಸಲ ಆ ಕಡೆಯವರು ಒಂದೊಂದು ಕ್ಲಾರಿಫಿಕೇಶನ್‌ಗೆ ಮೂರು ಗಂಟೆಗಳ ಕಾಲ ತೆಗೆದುಕೊಂಡಾಗ ಮಾನ್ಯ ಬಂಗಾರಪ್ಪನವರು ಹತೋಟಿ ತೆಗೆದುಕೊಳ್ಳಲಿಲ್ಲ. ಅನೇಕ ಸಲ ಮೂರು–ನಾಲ್ಕು ಗಂಟೆಗಳನ್ನು ತೆಗೆದುಕೊಂಡಿದ್ದಾರೆ. ಈಗ ವಿಷಯದ ಮಹತ್ವದ ಅನುಗುಣವಾಗಿ ಸದಸ್ಯರಿಗೆ ಮಾತನಾಡಲಿಕ್ಕೆ ತಾವುಗಳು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಎಲ್ಲ ಸದಸ್ಯರುಗಳು ಮಾತನಾಡಿದ್ದಾರೆ. ಅವಕಾಶವನ್ನು ಕೇಳಿದಾಗ ಕೊಡುವುದು ಮಾನ್ಯ ಅಧ್ಯಕ್ಷರಿಗೆ ಬಿಟ್ಟಂತಹ ವಿಷಯವಾಗಿದೆ.

(ಗೊಂದಲ)

ಶ್ರೀ ಎಂ. ಎಸ್. ಪಾಟೀಲ್.—ಶನಿವಾರ ಮಾತನಾಡಿಲಿಕ್ಕೆ ನಾವುಗಳು ತಯಾರಾಗಿದ್ದೇವೆ...

ಶ್ರೀ ಎಸ್. ಬಂಗಾರಪ್ಪ.—ನೀವು ಸಮಯ ಜಾಸ್ತಿ ಕೊಡಿ. ಸರಕಾರದವರು ಒಪ್ಪಿ ನಿಮ್ಮ ಮಾತನ್ನು ಆಧಾರವಾಗಿಟ್ಟುಕೊಂಡು ಸಭೆಯನ್ನು ಶನಿವಾರವೂ ಇಟ್ಟುಕೊಳ್ಳೋಣ. ಎಲ್ಲಾ ಸದಸ್ಯರೂ ಚರ್ಚೆ ಮಾಡೋಣ...

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರ ಅಭಿಪ್ರಾಯಕ್ಕೆ ಬಿಟ್ಟದ್ದು...

(ಗೊಂದಲ)

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್‌ಗೆ ನಾನು ಹೇಳುತ್ತೇನೆ, ತಾವುಗಳು ದಯಮಾಡಿ ಎಲ್ಲರೂ ಕುಳಿತುಕೊಳ್ಳಿ...

ಶ್ರೀ ಧರ್ಮಸಿಂಗ್.—ಅವರು ಬರಗಾಲದ ವಿಷಯವಾಗಿ, ಸಾಕಷ್ಟು ಜನ ಸದಸ್ಯರು ಚರ್ಚೆಯಲ್ಲಿ ಭಾಗವಹಿಸುತ್ತಾರೆ ಎಂದು ಹೇಳಿದರು. ಮಾನ್ಯರು ಸ್ಟೇಟ್‌ಮೆಂಟ್ ಮಾಡಿದಮೇಲೆ ಶನಿವಾರ ಮುಂದೂಡಬೇಕೆಂಬ ಬಗ್ಗೆ ಕೇಳಿಕೆ ಇದ್ದಾಗ ಅವರು ಇಲ್ಲ ಎಂದು ಹೇಳಿದರು. ಈಗ ಕೆಲವರಿಗೆ ಅವಕಾಶವನ್ನು ಕಲ್ಪಿಸಿಕೊಟ್ಟು ಕೆಲವರಿಗೆ ಅವಕಾಶವನ್ನು ಕಲ್ಪಿಸಿಕೊಡದಿದ್ದರೆ ಉದ್ದೇಶಪೂರ್ವಕವಾಗಿ ಮಾಡುತ್ತಿದ್ದಾರೆ ಎಂದು ಭಾವಿಸಬೇಕಾಗುತ್ತದೆ.

ಅಧ್ಯಕ್ಷರು.—ನಾನು ಚರ್ಚೆಗೆ ಅವಕಾಶವನ್ನು ಒಂದೇ ಪಕ್ಷದವರಿಗೆ ಕೊಟ್ಟಿಲ್ಲ. ಬೊಮ್ಮಾಯಿ ಯವರು ಸ್ಟೇಟ್‌ಮೆಂಟ್ ಕೊಟ್ಟ ಮೇಲೆ ಅಂಕಿ ಅಂಶಗಳನ್ನು ಎರಡೂ ಕಡೆಯ ಸದಸ್ಯರಿಗೆ ಕೊಟ್ಟಿದ್ದಾರೆ. ಕೊಟ್ಟ ಮೇಲೆ ಎರಡೂ ಕಡೆಯವರು ಮಾತನಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ನಮ್ಮ ಕಡೆಯವರು ಒಂದೆರಡು ನಿಮಿಷವೂ ಮಾತನಾಡಿಲ್ಲ.

(ಗೊಂದಲ)

ಶ್ರೀ ಕೆ. ಮಲ್ಲಪ್ಪ.—ಯಾವ್ಯಾವುದೋ ವಿಷಯಕ್ಕೆ ಅವರು ಕಾಲಹರಣ ಮಾಡುತ್ತಿದ್ದಾರೆ. ಆದರಿಂದ ವಿನಾಕಾರಣ ಬಹಳ ಸಮಯವನ್ನು ಅವರು ತೆಗೆದುಕೊಳ್ಳುತ್ತಿದ್ದಾರೆ. ಈಗಾಗಲೇ ಈ ಒಂದು ಬಿಲ್‌ನ್ನು ಪಾಸ್ ಮಾಡಬೇಕಾದರೆ ಅವರು ಸಾಕಷ್ಟು ಚರ್ಚೆ ಮಾಡಿದ್ದಾರೆ. ಈಗ ಸಭೆಯ ಮುಂದಿರತಕ್ಕಂಥ ಅವಶ್ಯಕವಾಗಿರತಕ್ಕಂಥಾ ಈ ಬರಗಾಲದ ವಿಷಯದ ಬಗ್ಗೆ ಚರ್ಚೆ ಮಾಡೋಣ ಎಂದರೆ ಬೇಡ ಎಂದರೆ ಏನು ಅರ್ಥ?

(ಗೊಂದಲ)

ಅಧ್ಯಕ್ಷರು.—ಎಲ್ಲರೂ ದಯವಿಟ್ಟು ಕೂಡಿರಿ. ದಯವಿಟ್ಟು ಈ ಸಭೆಯ ಮುಂದಿರತಕ್ಕಂಥಾ ವಿಷಯಕ್ಕೆ ಬನ್ನಿ. ಡೀವಿಯೇಷನ್ ಮಾಡುವುದಕ್ಕೆ ಹೋಗಬೇಡಿ. ಈ ಕಡೆಯಲ್ಲಿ ಒಬ್ಬರಿಗೆ ಆ ಕಡೆಯಲ್ಲಿರುವ ಒಬ್ಬರಿಗೆ ಮಾತನಾಡಿ ಎಂದು ಹೇಳಿದ್ದೇನೆ. ನಾನು ಮೊದಲು ಏನು ಹೇಳಿದೆ ಯಾರು ಇದರ ಬಗ್ಗೆ ಮಾತನಾಡಬೇಕೆಂದಿದ್ದೀರಿ ಅವರು ಕೈ ಎತ್ತಿರಿ ಅಂತ ಹೇಳಿದೆ. ಅವರು ಕೈ ಎತ್ತಿದರು. ಅದರಂತೆ ಈ ಕಡೆಯಲ್ಲಿ ಒಬ್ಬರಿಗೆ ಆ ಕಡೆಯಲ್ಲಿರುವರೊಬ್ಬರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಏನೋ ಹೇಳಬಹುದಾಗಿತ್ತು ಆದರೆ ಹೇಳಲಿಲ್ಲ ಅವರಿಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೇನೆ. ನಾನು ಮೊದಲೇ ರೂಲಿಂಗ್ ಕೊಟ್ಟಿದ್ದೇನೆ. ಶ್ರೀ ಲಕ್ಕಪ್ಪನವರಿಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೇನೆ. ಎಲ್ಲರೂ ಸೇರಿ ಈ ವಿಷಯವನ್ನು ಈಹೊತ್ತು ಮುಕ್ತಾಯ ಮಾಡಬೇಕು. ಶ್ರೀಮಾನ್ ಎಸ್. ಆರ್. ಬೊಮ್ಮಾಯಿಯವರು ಈ ಬಗ್ಗೆ ಒಂದು ಅಂಕಿಅಂಶ ಕೊಟ್ಟಮೇಲೆ ಎಲ್ಲರಿಗೂ ಕೇಳುವುದಕ್ಕೆ ಒಂದು ಅವಕಾಶ ಕೊಡುವುದು ಬಹಳ ಮುಖ್ಯ ಎಂದು ತಿಳಿದು ಅವಕಾಶ ಕೊಟ್ಟಿದ್ದೇನೆ. ಅದೇ ರೀತಿ ಮಲೆನಾಡಿನ ಭಾಗದಲ್ಲೂ ಸ್ವಲ್ಪ ಬರಗಾಲ ಇದೆ ಎಂದು ತಿಳಿದು ಆ ಭಾಗದವರಿಗೂ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಈಗ ಇದರ ಬಗ್ಗೆ ಮಾತನಾಡುವುದು ಈ ಕಡೆಯೂ ಆಯಿತು, ಆ ಕಡೆಯೂ ಆಯಿತು. ಈಗ ಇನ್ನೇನಾದರೂ ಇದ್ದರೆ ಇದರ ಕ್ಲಾರಿಫಿಕೇಷನ್ ಕೇಳಿ ಸಾಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈಗ ಸಭೆಯ ಮುಂದಿರುವ ಸಬ್ಜೆಕ್ಟನ್ನು ಮುಗಿಸಿದ ತಕ್ಷಣ ಮುಂದಿನ ಸಬ್ಜೆಕ್ಟನ್ನು ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು.—ಈ ಸಬ್ಜೆಕ್ಟ್ ಮುಗಿದ ಮೇಲೆ ಅದನ್ನೂ ತೆಗೆದುಕೊಳ್ಳುತ್ತೇನೆ.

ಶ್ರೀ ರಾಜವರ್ಧನ್.—ನಾವು ಇನ್ನು ಎಷ್ಟು ಗಂಟೆಯವರೆಗೆ ಇಲ್ಲಿ ಕೂತುಕೊಳ್ಳಬೇಕು ಅನ್ನುವುದನ್ನು ನಿಗದಿ ಮಾಡಿ, ಆ ಸಬ್ಜೆಕ್ಟನ್ನೂ ತೆಗೆದುಕೊಳ್ಳುವುದಾದರೆ.

ಶ್ರೀ ಕೆ. ಬಿ. ಶಾಣಪ್ಪ.—ನಾವೇನಾದರೂ ಮಾತನಾಡಬೇಕು ಎದ್ದು ನಿಂತರೆ ಆ ಕಡೆಯವರೆಲ್ಲಾರೂ ಕೂಡ ಎದ್ದು ನಿಂತುಕೊಂಡು ಗಲಾಟೆ ಮಾಡುವಾಗ, ಅವರು ನಮ್ಮ ಹೆಸರನ್ನು ಉಪಯೋಗಿಸಿ ಕೊಳ್ಳುತ್ತಿದ್ದಾರೆ. ಅವರು ಮಾತನಾಡುವಾಗ ನಮ್ಮ ಹೆಸರೇ ಬರುತ್ತದೆ. ಇದು ನಮ್ಮ ಹಣೆ ಬರಹ. This is wonderful time, you are calling me.

ಅಧ್ಯಕ್ಷರು.—ಮಾತನಾಡಿರಿ.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಕಂದಾಯ ಸಚಿವರನ್ನು ನಾನು ಒಂದು ವಿಷಯವನ್ನು ಮಾತ್ರ ಕೇಳಬಯಸುತ್ತೇನೆ. ೧೯೮೬ರಲ್ಲಿ ಒಟ್ಟು ೨೭೮.೫೯ ಕೋಟಿ ರೂಪಾಯಿಯಷ್ಟು ಹಣವನ್ನು ಈ ಬರಗಾಲದ ಪರಿಸ್ಥಿತಿಗೆ ಖರ್ಚು ಮಾಡಿದ್ದೇವೆಂದು ಅವರು ವರದಿಯಲ್ಲಿ ಹೇಳಿದ್ದಾರೆ. ಇದು ಸ್ಟೇಟ್‌ಮೆಂಟಿನ ೫ನೇ ಪೇಜಿನಲ್ಲಿದೆ. ಎನ್‌ಆರ್‌ಇಪಿ, ಆರ್‌ಎಲ್‌ಇಜಿಪಿ, ಡಿಪಿಎಪಿ ಮುಂತಾದ ಇದಕ್ಕೆ ಖರ್ಚು ಮಾಡಬೇಕಾದ ಹಣ ಒಟ್ಟು ೨೧೮೫.೯೨ ಕೋಟಿ ಸ್ಯಾಂಕ್ಷನ್ ಆದರೆ ಆಕ್ಚುಯಲ್ ಆಗಿ ಖರ್ಚು ಮಾಡಿರುವುದು ೧೫೩.೨೩ ಕೋಟಿ ರೂಪಾಯಿ. ಇದರಲ್ಲಿ ಇನ್ನೂ ಉಳಿದ ೭ ಕೋಟಿ ರೂಪಾಯಿ ಹಣ ಏನು ಇದೆ ಅದನ್ನು ಏತಕ್ಕೆ ಖರ್ಚು ಮಾಡಲಿಲ್ಲ? ತಾವು ಇದರಲ್ಲಿ ಏನು ಹಣ ತೋರಿಸಿದ್ದೀರಿ ಇದರಲ್ಲಿ ಕೇಂದ್ರ ಸರ್ಕಾರದ ಏಡ್ ಎಷ್ಟು ?

ಶ್ರೀ ಎಸ್, ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಸ್ಯಾಂಕ್ಷನ್ ಆದ ಹಣದಲ್ಲಿ ೭ ಕೋಟಿ ರೂಪಾಯಿ ಉಳಿದಿದೆ ಅದನ್ನು ಏತಕ್ಕೆ ಖರ್ಚು ಮಾಡಲಿಲ್ಲ ಎಂದು ಕೇಳಿದರು. ಅದಕ್ಕೆ ಹೇಳಬೇಕಾದರೆ ೭½ ಕೋಟಿ ರೂಪಾಯಿ ಏನು ಇದೆ ಆ ಹಣಕ್ಕೆ ರಿಗ್ಸ್ ಖರೀದಿ ಮಾಡಲಿಕ್ಕೆ ಇಟ್ಟಿದ್ದೇವೆ. ರಿಗ್ಸನ್ನು ಖರೀದಿ ಮಾಡುತ್ತಿದ್ದೇವೆ.

ಶ್ರೀ ಕೆ. ಬಿ. ಶಾಣಪ್ಪ.—ತಾವು ಹೇಳಿದ ಪ್ರಕಾರ ಗುಲ್ಬರ್ಗ ಜಿಲ್ಲೆಯಲ್ಲಿ ಇನ್ನೂ ಇತರ ಜಿಲ್ಲೆಗಳಲ್ಲೂ ಒಟ್ಟು ೧೮ ಜಿಲ್ಲೆಗಳಲ್ಲಿ ಈ ಬರಗಾಲ ಇದೆ. ಎಲ್ಲಾ ಜಿಲ್ಲೆಗಳಿಗೂ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಅನ್ನುವುದರ ಬಗ್ಗೆ ವಾಸ್ತವಾಂಶವನ್ನು ತಮ್ಮ ರಿಪೋರ್ಟಿನಲ್ಲಿ ತೋರಿಸಿದ್ದೀರಿ. ಗುಲ್ಬರ್ಗ ಜಿಲ್ಲೆಯಲ್ಲಿ ತಾವು ಅನುಕೂಲವಾದ ಕೆಲಸಗಳನ್ನು ಮಾಡಿದ್ದೀರಿ. ಅಲ್ಲಿ ರೋಡ್ ಫಾರ್ಮೇಷನ್ ಕೆಲಸ ಮಾಡಿದ್ದೀರಿ. ಎನ್‌ಆರ್‌ಇಪಿ, ಸ್ಕೇರ್ಸಿಟಿ ಮತ್ತು ಅಡಿಷನ್ ಆ್ಯಕ್ಷನ್ ಪ್ಲಾನ್‌ನಲ್ಲಿ ೨ ಲಕ್ಷ, ೫ ಲಕ್ಷ, ೭ ಲಕ್ಷ ಹೀಗೆಲ್ಲಾ ಖರ್ಚು ಮಾಡಿದ್ದೀರಿ. ಆದರೆ ತಾವು ಮಾರ್ಚಿ ತಿಂಗಳಲ್ಲಿ ಈ ಕೆಲಸವನ್ನು ನಿಲ್ಲಿಸಿದ್ದೀರಿ. ತಮ್ಮ ಸ್ಟೇಟ್‌ಮೆಂಟಿನಲ್ಲಿ ಈ ರೀತಿ ಹೇಳಿದ್ದೀರಿ. Upto June, this Government is prepared to spend money for scarcity ಎಂದು, ಆದರೆ ಅಲ್ಲಿ ನೋಡಿದರೆ ಏನೂ ಕೆಲಸ ಮಾಡಿಲ್ಲ. ಅಲ್ಲದೆ ಈ ಬಗ್ಗೆ ಮೀಟಿಂಗ್ ಕೂಡ ಆಯಿತು. The last meeting of scarcity was held in the month of April 1st week that the legislators could attend it. ಆದರೂ ಏಪ್ರಿಲ್‌ನಿಂದ ಜೂನ್‌ವರೆಗೂ ಅಲ್ಲಿ ಯಾವ ವರ್ಕ್ಸ್‌ನ್ನೂ ತೆಗೆದುಕೊಳ್ಳಲಿಲ್ಲ. ಆದರೆ ಸ್ಕೇರ್ಸಿಟಿ ವರ್ಕ್ಸ್ ಅನ್ನುವ ಹೆಸರಿನಲ್ಲಿ ಬಿಲ್ ಮಾತ್ರ ೭೦-೮೦ ಲಕ್ಷಕ್ಕೆ ಆಗಿದೆ. ಅಲ್ಲಿ ನೋಡಿದರೆ ಯಾವ ರೋಡೂ ಆಗಿಲ್ಲ, ಯಾವ ಕೆಲಸವೂ ಆಗಿಲ್ಲ. ಮಾನ್ಯ ಸಚಿವರಿಂದ ಈ ಬಗ್ಗೆ ಒಂದು ಉತ್ತರವನ್ನು ಕೇಳಬಯಸುತ್ತೇನೆ, ಮಾನ್ಯ ಅಧ್ಯಕ್ಷರು ನನಗೆ ಈ ಒಂದು ಕ್ಲಾರಿಫಿಕೇಷನ್ ಕೇಳುವುದಕ್ಕೆ ಅನುಮತಿ ಮಾಡಿಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಗೊಂದಲ)

ಶ್ರೀ ಕೆ. ಮಲ್ಲಪ್ಪ.—ರಾಜ್ಯದಲ್ಲಿ ಭೀಕರ ಬರಗಾಲ ಪರಿಸ್ಥಿತಿ ಬಂದಾಗ ರಾಜ್ಯ ಸರ್ಕಾರ ಇದರ ಬಗ್ಗೆ ಏನು ಮಾಡಿದೆ ಎಂದು ಹೇಳುವುದು ಬೇಡವೇ?

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ,

(ಗೊಂದಲ)

MR. SPEAKER. I have to take the sense of the House. ೧೦ ಗಂಟೆಯುವರೆಗೂ ಕೂರೋಣ. ಇದನ್ನು ಮುಗಿಸೋಣ.

ಶ್ರೀ ಬಿ. ಎ. ಉಮರಬ್ಬ.—ಮಾನ್ಯ ಅಧ್ಯಕ್ಷರೇ, ತಾವು ಈಗಾಗಲೇ ರೂಲಿಂಗ್ ಕೊಟ್ಟಿದ್ದೀರಿ. ಮತ್ತೇನು ?

ಅಧ್ಯಕ್ಷರು. ಇದು ಕೊನೇದು ಅಂತ ಹೇಳಿದ್ದಾರೆ. ಮಲ್ಲಪ್ಪನವರು ಮಾತನಾಡಲಿ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಭೀಕರ ಬರಗಾಲ ಪರಿಸ್ಥಿತಿ ಬಂದಾಗ ಜನರಿಗೆ ನಮ್ಮ ಸರ್ಕಾರದವರು ಉದ್ಯೋಗ ಕೊಟ್ಟಿದ್ದಾರೆ. ಜೊತೆಗೆ ಆಹಾರ ಧಾನ್ಯಗಳನ್ನು ವಿತರಣೆ ಮಾಡುವುದರ ಮೂಲಕ ಜನರು ನೆಮ್ಮದಿಯಿಂದ ಜೀವನ ನಡೆಸತಕ್ಕಂಥ ಪರಿಣಾಮವನ್ನು ಉಂಟು ಮಾಡಿದ್ದಾರೆ. ಅದೇ ರೀತಿಯಾಗಿ ಕುಡಿಯುವ ನೀರಿನ ವ್ಯವಸ್ಥೆ. ದನಕರುಗಳಿಗೆ ತೊಂದರೆಯಾದಂಥಾ ಸಂದರ್ಭದಲ್ಲಿ ಅವುಗಳಿಗೆ ಮೇವು ಮತ್ತು ನೀರಿನ ವ್ಯವಸ್ಥೆಯನ್ನು ಸಮರ್ಪಕವಾಗಿ ಮಾಡಿದ್ದಾರೆ. ಅಲ್ಲದೆ ರಾಷ್ಟ್ರ ಮತ್ತು ರಾಜ್ಯಗಳ ಸಂಬಂಧ ಮೂಲಕ ರಕ್ಷಣೆ ಮಾಡಿಕೊಂಡಿರತಕ್ಕಂಥಾ ಸರ್ಕಾರ ಎಂದರೆ ನಮ್ಮ ಸರ್ಕಾರವೇ ವಿನಾ ಬೇರೆ ಇದುವರೆಗೆ ಇದ್ದಂಥಾ ಸರ್ಕಾರ ಯಾವುದೂ ಮಾಡಿಲ್ಲ. ಈ ಒಂದು ದಿಶೆಯಲ್ಲಿ ನಮ್ಮ ಸರ್ಕಾರ ಒಳ್ಳೆಯ ಕಾರ್ಯಗಳನ್ನು ಮಾಡುತ್ತಾ ಇದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಹಲವಾರು ಪ್ರದೇಶಗಳಲ್ಲಿ ಇನ್ನೂ ಮಳೆ ಬಂದಿಲ್ಲ. ಜಿಲ್ಲಾಧಿಕಾರಿಯವರು ಮತ್ತು ತಹಸೀಲ್ದಾರರವರು ಅಂಕಿ ಅಂಶಗಳನ್ನು ಕೊಡುವಾಗ ಕೆಲವು ಸಂದರ್ಭಗಳಲ್ಲಿ ಉತ್ತಮವಾದ ಮಳೆಯಾಗಿದೆ, ಬೆಳೆ ಬಂದಿದೆ ಎಂದು ಹೇಳಿ ವಂಚನೆ ಮಾಡುವ ಸಂದರ್ಭ ಇದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಆದುದರಿಂದ ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಯಾವುದಾದರೂ ಒಂದು ಪ್ರದೇಶದಲ್ಲಿ ಬೆಳೆ ಬಗ್ಗೆಯಾಗಲಿ ಈ ಅಂಕಿಅಂಶಗಳನ್ನು ಸರ್ಕಾರಕ್ಕೆ ಕಳುಹಿಸತಕ್ಕಂಥಾ ಸಂದರ್ಭದಲ್ಲಿ ತಹಸೀಲ್ದಾರರಾಗಲಿ ಅಥವಾ ಜಿಲ್ಲಾಧಿಕಾರಿಯಾಗಲಿ ಆಯಾಯ ಕ್ಷೇತ್ರಕ್ಕೆ ಸಂಬಂಧಪಟ್ಟಂಥ ಶಾಸಕರನ್ನು ಜೊತೆಗೆ ಇಟ್ಟುಕೊಂಡು ಈ ಭೀಕರ ಬರಗಾಲದ ಬಗ್ಗೆ ಸಮಾಲೋಚನೆ ನಡೆಸಿದರೆ ಇದನ್ನು ಆದಷ್ಟು ಮಟ್ಟಿಗೆ ನಿವಾರಿಸತಕ್ಕಂಥ ಪ್ರಯತ್ನ ಮಾಡಬಹುದು. ಈ ಬಗ್ಗೆ ಜಿಲ್ಲಾಭಿವೃದ್ಧಿ ಸಭೆಯಲ್ಲೂ ಮತ್ತು ಶಾಸಕರ ಸಭೆಯಲ್ಲೂ ಪ್ರಸ್ತಾಪ ಮಾಡಿ ವಿಚಾರ ವಿನಿಮಯ ಮಾಡಿದ್ದೇವೆ. ತಹಸೀಲ್ದಾರರು ಮತ್ತು ಜಿಲ್ಲಾಧಿಕಾರಿಯವರು ಸರ್ಕಾರಕ್ಕೆ ಇದರ ಬಗ್ಗೆ ವರದಿಯನ್ನು ಕಳುಹಿಸುವಾಗ ನನ್ನೊಂದಿಗೂ ವಿಚಾರ ವಿನಿಮಯ ನಡೆಸಿ ವರದಿಯನ್ನು ಕಳುಹಿಸಿಕೊಡತಕ್ಕ ಕೆಲಸ ಮಾಡಬೇಕು. ಇಲ್ಲದೇ ಹೋದರೆ ಶಾಸಕರ ಗಮನಕ್ಕೆ ತರದೇ ಹೋದರೆ ಕೆಲವು ಅಧಿಕಾರಿಗಳು ಇದರಲ್ಲಿ ದುರುಪಯೋಗ ಮಾಡತಕ್ಕಂಥಾ, ವಂಚನೆ ಮಾಡತಕ್ಕಂಥಾ ಸಂದರ್ಭ ಬರಬಹುದು ಎಂದು ಹೇಳುತ್ತೇನೆ. ನಾನು ಮತ್ತೊಮ್ಮೆ ತಮ್ಮ ಗಮನಕ್ಕೆ ತರುತ್ತೇನೆ. ಜಿಲ್ಲಾಧಿಕಾರಿಗಳಿಂದ ಇಂಥಾ ವಿಚಾರದಲ್ಲಿ ವರದಿಗಳನ್ನು ತರಿಸಿಕೊಳ್ಳಬೇಕಾದರೆ ಆಯಾಯ ಕ್ಷೇತ್ರದ ಶಾಸಕರೊಂದಿಗೆ ವಿಚಾರ ವಿನಿಮಯ ಮಾಡಿದರೆ ಈ ಒಂದು ಕಾರ್ಯ ನಿವಾರಿಸುವುದಕ್ಕೆ ಪ್ರಯತ್ನ ಮಾಡಬಹುದು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಸುಮಾರು ೧೦೦ಕ್ಕೆ ೬೦ ಭಾಗದಲ್ಲಿ ಬಿತ್ತನೆಯಾಗಿಲ್ಲ. ಕುಡಿಯುವ ನೀರಿಗೆ ಮತ್ತೆ ಕಷ್ಟವಾಗತಕ್ಕ ಪರಿಸ್ಥಿತಿ ಇದೆ. ನಮ್ಮ ಜಿಲ್ಲೆಯಲ್ಲಿ ಬರಗಾಲ ಪರಿಸ್ಥಿತಿ ಇನ್ನೂ ಇರುವುದರಿಂದ ಅಲ್ಲಿ ಬರಗಾಲದ ಕಾಮಗಾರಿಗಳನ್ನು ಮುಂದುವರಿಸಬೇಕು ಎಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

೬-೦೦ ಪಿ.ಎಂ.

ಶ್ರೀ ಎಸ್, ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಈ ಕಡೆ ಮತ್ತು ಆ ಕಡೆಯ ಮಾನ್ಯ ಸದಸ್ಯರುಗಳು ಹಿಂದೆ ಆದ ಕೆಲಸಗಳ ಬಗ್ಗೆ ಮೆಚ್ಚುಗೆಯನ್ನು ಮತ್ತು ಟೀಕೆಯನ್ನು ವ್ಯಕ್ತ ಮಾಡಿದ್ದಾರೆ. ಅದರ ಬಗ್ಗೆ ಪುನ: ಪುನಃ ನಾನು ಉತ್ತರ ಕೊಡಬೇಕಾಗಿಲ್ಲ. ಕೆಲಸ ನಡೆದದ್ದು ಎಷ್ಟು, ಹೇಗೆ ಆಗಿದೆ ಎನ್ನುವುದು ರಾಜ್ಯದ ಜನತೆಯ ಮುಂದೆ ಇದೆ ಆ ವಿವರಗಳಿಗೆ ನಾನು ಹೋಗುವುದಿಲ್ಲ. ಮಾನ್ಯ ಸದಸ್ಯರು ಒಂದೆರಡು ವಿಚಾರಗಳನ್ನು ಎತ್ತಿದ್ದಾರೆ, ಅದಕ್ಕೆ ಉತ್ತರ ಕೊಡಬೇಕಾಗಿದೆ. ಕೆಲವು ಸದಸ್ಯರು ಪೆಂಡಿಂಗ್ ಬಿಲ್ಸ್ ವಿಚಾರವನ್ನು ಎತ್ತಿದ್ದಾರೆ. ಮತ್ತೆ ಸ್ಪಿಲ್ ಓವರ್ ವರ್ಕ್ಸ್ ಅರ್ಧಂಬರ್ಧ ಆಗಿದೆ, ಅದನ್ನು ಪೂರ್ಣ ಮಾಡುವ ವಿಚಾರವನ್ನು ಎತ್ತಿದ್ದಾರೆ. ಪೆಂಡಿಂಗ್ ಬಿಲ್ಸ್ ಇರಲಿಕ್ಕೆ ಕಾರಣ, ಸರ್ಕಾರದ ಆದೇಶವನ್ನು ಮೀರಿ ಕೆಲವು ಅಧಿಕಾರಿಗಳು ಹೆಚ್ಚು ಕೆಲಸವನ್ನು ಮಾಡಿದ್ದರಿಂದ ಗೊಂದಲ ವಾಯಿತು. ಗೊಂದಲವಾದರೂ ಕೆಲಸ ಏನೇನಾಗಿದೆ ಅದಕ್ಕೆ ಹಣ ಕೊಡುವುದಕ್ಕೆ ಈಗಾಗಲೇ ಆಜ್ಞೆ ಮಾಡಿದೆ. ಎಲ್ಲೆಲ್ಲಿ ಪೆಂಡಿಂಗ್ ಬಿಲ್ಸ್ ಇದೆಯೋ ಅದರ ಲೆಕ್ಕಾಚಾರ ನೋಡಿ, ಕೆಲಸ ವೆರಿಫೈಮಾಡಿ ಹಣ ಕೊಡುವುದಕ್ಕೆ ಆದೇಶ ಕೊಟ್ಟಿದ್ದೇವೆ. ಸ್ಪಿಲಓವರ್ ವರ್ಕ್ಸ್ ವಿಚಾರ ಇದೆ. ಕರೆ ಮುಂತಾದ್ದು ಅರ್ಧ ಆಗಿದೆ. ಇಂತಹ ಕೆಲಸಗಳು ಇವೆ. ಸ್ಕೇರ್ಸಿಟಿ ಹಣದಲ್ಲಿ ಕೆಲಸ ಮಾಡಿದ ಮೇಲೆ ನಿರ್ದಿಷ್ಟವಾದ ಸಮಯಕ್ಕೆ ನಿಲ್ಲಿಸಬೇಕಾಗುತ್ತದೆ. ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರದ ಇತಿಮಿತಿಯೊಳಗೆ ನಿಲ್ಲಿಸಿದ್ದೇವೆ. ಆ ಕೆಲಸಗಳನ್ನು ಬೇರೆ ಎನ್‌ಆರ್‌ಇಪಿ, ಆರ್‌ಎಲ್‌ಇಜಿಪಿ ಕಾರ್ಯಕ್ರಮಗಳಲ್ಲಿ ಸೇರಿಸು ವುದಕ್ಕೆ ಆದೇಶ ಕೊಟ್ಟಿದ್ದೇವೆ, ಅದನ್ನು ಸೇರಿಸುತ್ತೇವೆ.

ಶ್ರೀ ಮಹಮ್ಮದ್ ಲೈಕುದ್ದೀನ್ ಬುರಾನುದ್ದೀನ್ (ಬೀದರ್).—ವಿಷಯವೇನು ಸ್ವಾಮಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಬೀದರ್‌ನಲ್ಲಿ ಚೆನ್ನಾಗಿ ಆಗಿದೆ. ಹಣ ಕೊಟ್ಟಿದ್ದೇನೆ, ಇನ್ನೂ ಕೊಡೋಣ. ಪೆಂಡಿಂಗ್ ಬಿಲ್ಸ್ ಬಗ್ಗೆ ಹೇಳಿದ್ದಾರೆ. ನಿಮ್ಮ ಜಿಲ್ಲೆಯಲ್ಲಿ ಚರ್ಚೆಮಾಡಿ ಆದೇಶಕೊಟ್ಟು ಬಂದಿದ್ದೇನೆ, ವಿವರ ಬೇಡ. ಆಮೇಲೆ ಲೇಬರ್.ಬೇಸಿಸ್‌ಮೇಲೆ ಕೆಲಸ ಮಾಡತಕ್ಕಂಥಾದ್ದು ಇಲ್ಲಾ ಕಾಂಟ್ರಾಕ್ಟ್ ಕೊಡುವುದು................

ಶ್ರೀ ಯು. ಭೂಪತಿ.—ಇದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಇದರಲ್ಲಿ ಅನುಮಾನವಿದ್ದರೆ ನಮಗೆ ಭಯ ಇಲ್ಲ, ಸಿಬಿಐ, ಸಿಒಡಿಯಿಂದ ತನಿಖೆಮಾಡಿಸಿ. ನಂತರ ಕೂಲಿಕೊಡಿ. ನೀವು ನಿಂತುಕೊಂಡು ಡಿಪಾರ್ಟ್‌ಮೆಂಟ್‌ನಿಂದ ಪೇಮೆಂಟ್‌ಮಾಡಿಸಿ. ಎನ್‌ಕ್ವೈರಿ ಮಾಡಿಸಿ. ಎಲ್ಲಿ ಕಂಟ್ರಾಕ್ಟ್ ಕೊಟ್ಟಿದ್ದಾರೆ ಆ ಅಧಿಕಾರಿಗಳನ್ನು ಡಿಸ್ಮಿಸ್‌ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆಹಾರಧಾನ್ಯಗಳನ್ನು ಕೊಡಲಿಕ್ಕೆ ಆದೇಶ ಮಾಡಿದ್ದೇನೆ. ರಾಮೆಟೀರಿಯಲ್ಸ್ ಪರ್ಚೇಸ್ ಮಾಡಿದ್ದಾರೆ, ಸಿಮೆಂಟ್ ಪರ್ಚೇಸ್ ಮಾಡಿದ್ದಾರೆ, ಅದಕ್ಕೆ ಕೊಡ ಬೇಕಾದ ಹಣ ಕೊಡುತ್ತೇವೆ.

ಶ್ರೀ ಯು. ಭೂಪತಿ.—ವೇಜ್ ಕಾಂಪೊನೆಂಟ್ ೪೨ ಲಕ್ಷ, ೯ ಲಕ್ಷ ಕೊಟ್ಟಿದ್ದೀರಿ, ಉಳಿದ ಹಣ ಯಾವಾಗ ಕೊಡುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮದು ಹೇಳುತ್ತೇನೆ. ಎಲ್ಲಾ ಗೊತ್ತಿದೆ. ಬಳ್ಳಾರಿ ಜಿಲ್ಲೆಯ ಲೆಕ್ಕ ಗೊತ್ತಿದೆ. ರಸ್ತೆ ಮಾಡಿದ್ದಾರೆ, ಸಿ.ಡಿ. ವರ್ಕ್ಸ್ ಮಾಡಿದ್ದಾರೆ, ಸಿಮೆಂಟ್ ತಂದಿದ್ದಾರೆ. ಕಬ್ಬಿಣ ತಂದಿದ್ದಾರೆ ಇವೆಲ್ಲಾ ಇದೆ ಇಲ್ಲ ಎಂದು ಹೇಳುವುದಿಲ್ಲ. ಆಮೇಲೆ ಬಿಲ್ಸ್ ವಿಚಾರ ಇದೆ. ಆಮೇಲೆ ಎಲ್ಲೆಲ್ಲಿ ದನಕರುಗಳಿಗೆ ತೊಂದರೆಯಾಗಿದೆ ಅಲ್ಲಿ ಗೋಶಾಲೆಗಳನ್ನು ಮುಂದುವರಿಸಲಿಕ್ಕೆ ಆದೇಶ ಕೊಟ್ಟಿ ದ್ದೇವೆ. ಇನ್ನೂ ಜಿಲ್ಲೆಗಳಲ್ಲಿ ಗೋಶಾಲೆಗಳ ಅವಶ್ಯಕತೆ ಇದೆ ಅಲ್ಲಿ ಹೊಸದಾಗಿ ಪ್ರಾರಂಭ ಮಾಡುತ್ತೇವೆ. ಕುಡಿಯುವ ನೀರಿನ ವಿಚಾರದಲ್ಲಿ ಹೇಳುವುದಾದರೆ ಕೆಲವು ಹಳ್ಳಿಗಳಿಗೆ ನೀರನ್ನು ಟ್ರಾನ್ಸ್‌ಪೋರ್ಟ್ ಮುಖಾಂತರ ಕೊಡಬೇಕಾದ ಅವಶ್ಯಕತೆ ಇದೆ, ಅಲ್ಲೆಲ್ಲಾ ಕೊಡಲಿಕ್ಕೆ ಆದೇಶ ಕೊಟ್ಟಿದ್ದೇವೆ. ಗೋಶಾಲೆ, ಕುಡಿಯುವ ನೀರು ಮತ್ತು ಮೇವಿನ ಬಗ್ಗೆ ಈಗಾಗಲೇ ಆದೇಶ ಕೊಟ್ಟಿದ್ದೇವೆ. ಎಲ್ಲೆಲ್ಲಿ ಇವುಗಳ ಅವಶ್ಯಕತೆ ಇದೆ ಅಲ್ಲಿ ಖರ್ಚು ಮಾಡುವುದಕ್ಕೆ ಆದೇಶ ಕೊಟ್ಟಿದ್ದೇವೆ. ಎನ್.ಆರ್.ಇ.ಪಿ. ಆರ್‌ಎಲ್ ಇಜಿಪಿ ಡಿಪಿಎಪಿ ಮುಂತಾದ ಪ್ಲಾನ್‌ನಲ್ಲಿ ಹಣ ಬಿಡುಗಡೆ ಮಾಡಿದ್ದೇವೆ, ಕೆಲಸ ಮುಂದುವರಿಸುತ್ತೇವೆ. ಇನ್ನು ಕೆಲವು ಜಿಲ್ಲಾಧಿಕಾರಿಗಳಿಂದ ವರದಿ ಬಂದಿದೆ. ರಾಜ್ಯದ ಕೆಲವು ತಾಲ್ಲೂಕುಗಳಲ್ಲಿ ಮಳೆ ಬಂದಿಲ್ಲ,

ಬೆಳೆ ಚನ್ನಾಗಿ ಬಂದಿಲ್ಲ. ಅಲ್ಲಿ ಬರಗಾಲದ ಲಕ್ಷಣಗಳು ಕಾಣುತ್ತಿವೆ, ಅಭಾವ ಪರಿಸ್ಥಿತಿ ಇದೆ. ಅಲ್ಲಿ ಕೂಡಲೆ ಕೆಲಸ ಪ್ರಾರಂಭ ಮಾಡುತ್ತೇವೆ. ಮುಂದಿನ ವಾರದಿಂದ ಕೆಲಸ ಪ್ರಾರಂಭ ಮಾಡುತ್ತೇವೆ. ಇನ್ನು ಬೇರೆ ವಿಚಾರಗಳ ಬಗ್ಗೆ ಹೆಚ್ಚು ವಿವರ ಕೊಡಬೇಕಾದ ಅವಶ್ಯಕತೆ ಇಲ್ಲ. ತುಮಕೂರು ಜಿಲ್ಲೆಯಲ್ಲಿ ಪೆಂಡಿಂಗ್ ಬಿಲ್ಸ್ ವಿಚಾರ ಇದೆ, ಅಲ್ಲಿ ಪೇಮೆಂಟಾಗಿದೆ. ಈ ಬಗ್ಗೆ ಗುಲ್ಬರ್ಗ ಜಿಲ್ಲೆ, ಬಳ್ಳಾರಿ ಜಿಲ್ಲೆಯಲ್ಲೂ ಮಾಡಲಿಕ್ಕೆ ಹೇಳಿದ್ದೇನೆ. ಎಲ್ಲಾ ಜಿಲ್ಲೆಗಳಿಗೂ ಪೇಮೆಂಟ್ ಮಾಡತಕ್ಕಂಥ ಆದೇಶ ಕೊಟ್ಟಿದ್ದೇನೆ. ಬೀದರ್ ಜಿಲ್ಲೆಯಲ್ಲೂ ಪೆಂಡಿಂಗ್ಸ್ ಬಿಲ್ಸ್ ಇದೆ. ರಾಜ್ಯದ ಯಾವ ಯಾವ ಜಿಲ್ಲೆಯಲ್ಲಿ ಪೆಂಡಿಂಗ್ ಬಿಲ್ಸ್ ಇವೆ ಅಲ್ಲಿ ಲೆಕ್ಕ ವೆರಿಫೈ ಮಾಡಿ ಕೊಡುತ್ತಾ ಇದ್ದಾರೆ.

ಶ್ರೀ ಬಸವರಾಜ ಶಿವಗಪ್ಪ ಪಾಟೀಲ್.—ಹುಮ್ನಾಬಾದ್‌ನಲ್ಲಿ ಆದೇಶಕೊಟ್ಟು, ಧನಗಳಿಗೆ ಹುಲ್ಲನ್ನು ಕೊಡತಕ್ಕ ವ್ಯವಸ್ಥೆ ಮಾಡಿ.

ಶ್ರೀ ಎಸ್ ಆರ್. ಬೊಮ್ಮಾಯಿ.—ಹುಮ್ನಾಬಾದ್‌ನಲ್ಲಿ ಎಲ್ಲೆಲ್ಲಿ ಬೇಕೋ ಅಲ್ಲಿ ಕೊಡಿ ಎಂದು ಹೇಳುತ್ತೇನೆ. ಈ ತಿಂಗಳು ಮಳೆ ಆಗದೇಹೋದರೆ ಪುನಃ ಕಷ್ಟದ ದಿನಗಳನ್ನು ಎದುರಿಸಬೇಕಾಗುತ್ತದೆ. ಎಲ್ಲೆಲ್ಲಿ ಮಳೆಯಾಗಿಲ್ಲ, ಎಲ್ಲಿ ಅಭಾವ ಪರಿಸ್ಥಿತಿ ಇದೆ ಆ ಭಾಗಗಳಲ್ಲಿ ಕೆಲಸವನ್ನು ಮುಂದಿನ ವಾರ ಪ್ರಾರಂಭ ಮಾಡುತ್ತೇವೆ.

ರಾಜ್ಯ ಸರ್ಕಾರ ಕೊಟ್ಟಿದ್ದ ಸಾರಾಯಿ ಗುತ್ತಿಗೆ ವಿಚಾರದ ಬಗ್ಗೆ ಚರ್ಚೆ.

ಅಧ್ಯಕ್ಷರು.—ಈಗ ರಾಜ್ಯ ಸರ್ಕಾರ ಕೊಟ್ಟಿದ್ದ ಸಾರಾಯಿ ಗುತ್ತಿಗೆ ವಿಚಾರದ ಬಗ್ಗೆ ಚರ್ಚೆ ಇದೆ.

ಶ್ರೀ ಎಂ. ರಘುಪತಿ.—ಪಾಯಿಂಟ್ ಆಫ್ ಆರ್ಡರ್.

(ಗೊಂದಲ)

ಅಧ್ಯಕ್ಷರು.—ಇದಕ್ಕೆ ೨ ತಾಸು ಇದೆ. ಎಂಟೂವರೆ ಗಂಟೆಯಾಗುತ್ತದೆ.

(ಗೊಂದಲ)

ಶ್ರೀ ಎಂ. ರಘುಪತಿ.—ಅಧ್ಯಕ್ಷರೆ. ಇದನ್ನು ನಾಳೆ ತೆಗೆದುಕೊಳ್ಳಿ.

ಅಧ್ಯಕ್ಷರು.—ಈ ಚರ್ಚೆಗೆ ೨ ತಾಸು ಬೇಕು. ಈಗ ೬–೧೦ ಗಂಟೆಯಾಗಿದೆ. ಈಗ ಬೇಡ ನಾಳೆ ತೆಗೆದುಕೊಳ್ಳಿ ಎಂದು ಹೇಳುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಈಗ ಪ್ರಾರಂಭ ಮಾಡೋಣ.

ಅಧ್ಯಕ್ಷರು.—ಈ ೬–೧೦ ಗಂಟೆಯಾಯಿತು, ಟೈಮಾಗಿದೆ ನಾಳೆ ಇಡಿ ಎಂದು ಹೇಳುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ನಮ್ಮ ಅಭ್ಯಂತರವಿಲ್ಲ. ಸ್ವಲ್ಪ ಈಗ ಪ್ರಾರಂಭ ಮಾಡೋಣ.

ಅಧ್ಯಕ್ಷರು.—ಈಗ ಪ್ರಾರಂಭಮಾಡಿ ಅರ್ಧಂಬರ್ಧ ಮಾಡುವುದು ಬೇಡ. ಸ್ವಲ್ಪ ಕೇಳಿ. ಪ್ರಾರಂಭ ಮಾಡಿದರೆ ಪೂರ್ಣವಾಗಿ ಮುಕ್ತಾಯ ಮಾಡುವುದು ಒಳ್ಳೆಯದು. ಎಂಟೂವರೆಗಂಟೆವರೆಗೆ ಕುಳಿತರೂ ಅಡ್ಡಿಯಿಲ್ಲ, ಎಂಟೂವರೆಗಂಟೆವರೆಗೆ ಕುಳಿತು ಮಾಡೋಣ ಎನ್ನುವುದು ನನ್ನ ಅಭಿಪ್ರಾಯ, ನಿಮ್ಮ ಅಭಿಪ್ರಾಯವನ್ನೂ ತೆಗೆದುಕೊಳ್ಳುತ್ತೇನೆ, ಅವರ ಅಭಿಪ್ರಾಯವನ್ನೂ ತೆಗೆದುಕೊಳ್ಳುತ್ತೇನೆ. ನಾನು ಯಾವಾಗಲೂ ಸರ್ವಾನುಮತದ ಅಭಿಪ್ರಾಯ ಪಡೆದುಕೊಳ್ಳಬೇಕು ಬಹುಮತದ ಅಭಿಪ್ರಾಯ ಪಡೆದುಕೊಳ್ಳಬೇಕಾಗುತ್ತದೆ. ಈ ವಿಷಯವನ್ನು ನನ್ನ ಡಿಸ್ಕ್ರಿಷನರಿಗೆ ಬಿಟ್ಟಿದ್ದೀರಿ. ಈ ಕಡೆಯ ಸದಸ್ಯರು ಇವತ್ತು ಬೇಡ, ಟೈಂ ಆಗಿದೆ ನಾಳೆ ಹಾಕಿರಿ ಎಂದು ಹೇಳುತ್ತಾರೆ, ನೀವು ಈಗ ನಡೆಸಿರಿ ಎಂದು ಹೇಳುತ್ತೀರಿ. ನಡೆಸಬೇಕಾದರೆ ಎಂಟೂವರೆ, ಒಂಭತ್ತು ಗಂಟೆಯಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಹಿಂದೆ ಎಲ್ಲಾ ಕುಳಿತಿದ್ದೇವೆ. ಇವತ್ತು ಇದನ್ನು ಚರ್ಚೆ ಮಾಡಿ ಮುಗಿಸೋಣ.

(ಗೊಂದಲ)

ಶ್ರೀ ಎಂ. ರಘುಪತಿ.—ಇವತ್ತು ಬೇಡ, ೬ ಗಂಟೆಯಾಗಿದೆ, ನಾಳೆ ತೆಗೆದುಕೊಳ್ಳಿ.